# ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 01 (190)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:154ರ ವ್ಯಾಪ್ತಿಯಲ್ಲಿ ಬರುವ ನರಸಿಂಹರಾಜ ಕಾಲೋನಿ, 2ನೇ ಮುಖ್ಯರಸ್ತೆಗೆ "ಡಾ॥ ಸಿ.ಅಶ್ವಥ್" ರವರ ಹೆಸರನ್ನು ನಾಮಕರಣ ಮಾಡುವುದೆಂದು ದಿನಾಂಕ:28-06-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ವಿಷಯದ ಸಂಖ್ಯೆ:01 (115)/2011-12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:06-09-2011 ರಂದು ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ ಒಂದು ತಿಂಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 154 ರ ವ್ಯಾಪ್ತಿಯಲ್ಲಿ ಬರುವ ನರಸಿಂಹರಾಜ ಕಾಲೋನಿ, 2ನೇ ಮುಖ್ಯರಸ್ತೆಗೆ "ಡಾ॥ ಸಿ.ಅಶ್ವಥ್" ರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:17-10-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಪ್ರಸ್ತಾಪಿಸಿರುವ ರಸ್ತೆಗೆ ಈಗಾಗಲೇ ಬೇರೆ ಹೆಸರನ್ನು ನಾಮಕರಣ ಮಾಡಿರುವುದರಿಂದ, ಡಾ॥ ಸಿ.ಅಶ್ವಥ್ ರವರ ಹೆಸರನ್ನು ಬೇರೆ ರಸ್ತೆಗೆ ನಾಮಕರಣ ಮಾಡುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸುವುದು".

ಶ್ರೀ.ಸಿ.ಕೆ.ರಾಮಮೂರ್ತಿ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪ್ರಸ್ತಾಪಿಸಿರುವ ರಸ್ತೆಗೆ ಈಗಾಗಲೇ ಬೇರೆ ಹೆಸರನ್ನು ನಾಮಕರಣ ಮಾಡಿರುವುದರಿಂದ, ಡಾ॥ ಸಿ.ಅಶ್ವಥ್ ರವರ ಹೆಸರನ್ನು ಬೇರೆ ರಸ್ತೆಗೆ ನಾಮಕರಣ ಮಾಡುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 05 (256) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ ಕೆ.ರಮೇಶ್‌ರಾಜು, ಅಧ್ಯಕ್ಷರು - ಶಿಕ್ಷಣ ಸ್ಥಾಯಿ ಸಮಿತಿ ರವರು ಪತ್ರ ಬರೆದು ದಿನಾಂಕ:14-09-2011 ರಂದು ನಡೆದ ಶಿಕ್ಷಣ ಸ್ಥಾಯಿ ಸಮಿತಿ ಸಭೆಯಲ್ಲಿ ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರುಗಳ 10 ದಿನಗಳ ಶೈಕ್ಷಣಿಕ ಪ್ರವಾಸ ಕೈಗೊಳ್ಳುವ ಕುರಿತು ತೀರ್ಮಾನಿಸಲಾಗಿರುವುದಾಗಿ ತಿಳಿಸಿ, ಸಭೆಯ ನಡವಳಿಗಳನ್ನು ಲಗತ್ತಿಸಿ ಕಳುಹಿಸಿರುತ್ತಾರೆ.

ಸದರಿ ಸಭೆಯಲ್ಲಿ, ಇತರೇ ಮಹಾನಗರಗಳಲ್ಲಿನ ಶೈಕ್ಷಣಿಕ ಗುಣಮಟ್ಟ ಅಧ್ಯಯನ ಮಾಡಿ ಅದನ್ನು ಬಿ.ಬಿ.ಎಂ.ಪಿ. ಶಾಲಾ/ಕಾಲೇಜುಗಳಲ್ಲಿ ಅಳವಡಿಸಿಕೊಳ್ಳಲು ಅನುಕೂಲ5ವಾಗುವಂತೆ, 10 ದಿನಗಳ ಶೈಕ್ಷಣಿಕ ಪ್ರವಾಸವನ್ನು ಕೈಗೊಳ್ಳಲು ತೀರ್ಮಾನಿಸಲಾಗಿದ್ದು, ಅದರಂತೆ, ಮುಂಬೈ, ಅಹಮದಾಬಾದ್, ಸೂರತ್, ಚಂಡಿಘಡ್, ಜೈಪುರ್ ಹಾಗೂ ದೆಹಲಿ ನಗರಗಳಿಗೆ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವಂತೆ, ಸಮಿತಿಯ ಅಧ್ಯಕ್ಷರು, ಸದಸ್ಯರು, ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರನ್ನು ಒಳಗೊಂಡ ಒಟ್ಟು 15 ಮಂದಿ ವಿಮಾನದಲ್ಲಿ ಪ್ರಯಾಣಿಸಿ ಭೇಟಿ ನೀಡಲು ತೀರ್ಮಾನಿಸಿರುವುದಾಗಿ, ಇದಕ್ಕೆ ಸಂಬಂಧಪಟ್ಟಂತೆ ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಳ್ಳಲು ಹಾಗೂ ಮಹಾನಗರ ಪಾಲಿಕೆಯ ಅನುಮೋದನೆ ಪಡೆಯಲು ಟಿಪ್ಪಣಿ ಮಂಡಿಸಲು ಕೋರಿರುತ್ತಾರೆ.

| ಕ್ರಸಂ | ಅಧಿಕಾರಿಗಳು | |
|---|---|---|
| 1 | ಅಧ್ಯಕ್ಷರು, ಶಿಕ್ಷಣ ಸ್ಥಾಯಿ ಸಮಿತಿ | 1 |
| 2 | ಸಮಿತಿ ಸದಸ್ಯರು | 10 |
| 3 | ಅಧಿಕ ಕೌನ್ಸಿಲ್ ಕಾರ್ಯದರ್ಶಿ | 1 |
| 4 | ಶಿಕ್ಷಣಾಧಿಕಾರಿ | 1 |
| 5 | ಸಾರ್ವಜನಿಕ ಸಂಪರ್ಕಾಧಿಕಾರಿ | 1 |
| 6 | ಸಮಿತಿಯ ಆಪ್ತ ಸಹಾಯಕರು | 1 |
| | ಒಟ್ಟು | **15** |

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ ಪ್ರಸ್ತಾವನೆ ಕುರಿತಂತೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:23-11-2011ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:07-12-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:07-12-2011ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:07-12-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ

(ಶಾರದಮ್ಮ)

ಮಹಾಪೌರರು

# ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 06 (257) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸಾಮಾಜಿಕ, ಆರ್ಥಿಕ ಮತ್ತು ಜಾತಿ ಗಣತಿ (SECC-2011) ಕಾರ್ಯಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸುಮಾರು 100 ಚಾರ್ಜ್ ಕೇಂದ್ರಗಳನ್ನು ಗುರುತಿಸಲಾಗಿದ್ದು, ಸದರಿ ಚಾರ್ಜ್ ಕೇಂದ್ರಗಳಿಗೆ ಸರ್ಕಾರದ ಸುತ್ತೋಲೆಗಳನ್ವಯ ನಿಗಧಿತ ಚೆಕ್ ಲಿಸ್ಟ್‌ನಲ್ಲಿರುವಂತೆ, ವಿದ್ಯುತ್ ಪೀಠೋಪಕರಣಗಳ ಸೌಲಭ್ಯ ಹಾಗೂ ಗಣಕಯಂತ್ರಗಳನ್ನು ಅಳವಡಿಸಲು ಅಗತ್ಯ ಸೌಲಭ್ಯಗಳನ್ನು ಪೂರೈಸಲು ಜಂಟಿ ನಿರ್ದೇಶಕರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಬಿ.ಇ.ಎಲ್.ನೋಡಲ್ ಅಧಿಕಾರಿಗಳ ಸಮಕ್ಷಮದಲ್ಲಿ ಐ.ಪಿ.ಪಿ. ಸಭಾಂಗಣ, ಮಲ್ಲೇಶ್ವರಂ, ಬೆಂಗಳೂರು ರಲ್ಲಿ ದಿನಾಂಕ:02/11/2011 ರಂದು ನಡೆದ ಸಭೆಯಲ್ಲಿ ಚರ್ಚಿಸಲಾಗಿರುತ್ತದೆ. ಅದರಂತೆ, SECC-2011 ಯು ರಾಷ್ಟ್ರೀಯ ಕಾರ್ಯಕ್ರಮವಾಗಿದ್ದು, ವಿದ್ಯುತ್ ಸೌಲಭ್ಯಗಳನ್ನು ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದಲ್ಲಿ ಭರಿಸಬಹುದಾಗಿದ್ದು, ಗಣಕಯಂತ್ರ ಪೀಠೋಪಕರಗಳ ಸೌಲಭ್ಯಗಳನ್ನು ಪಾಲಿಕೆಯ ವತಿಯಿಂದಲೇ ಕಲ್ಪಿಸಬೇಕಾಗಿರುತ್ತದೆ.

ಈಗಾಗಲೇ ಪಾಲಿಕೆಯ ವ್ಯಾಪ್ತಿಯಲ್ಲಿ ಗುರುತಿಸಲಾಗಿರುವ 100 ಚಾರ್ಜ್ ಕೇಂದ್ರಗಳಿಗೆ, ಗಣಕಯಂತ್ರಗಳನ್ನು ಅಳವಡಿಸಬೇಕಾಗಿದ್ದು, ಪಾಲಿಕೆಯ ವಲಯ ವ್ಯಾಪ್ತಿಯಲ್ಲಿ ಗುರುತಿಸಲಾಗಿರುವ ಚಾರ್ಜ್ ಕೇಂದ್ರಗಳಲ್ಲಿ ಚೆಕ್ ಲಿಸ್ಟ್‌ನಂತೆ ಸೌಲಭ್ಯಗಳು ಲಭ್ಯವಿಲ್ಲದೇ ಇರುವುದನ್ನು ಬಿ.ಇ.ಎಲ್.ನೋಡಲ್ ಅಧಿಕಾರಿಗಳು ಹಾಗೂ TRANSVISION ಸಿಬ್ಬಂದಿಗಳು ಧೃಡಪಡಿಸಿದ್ದು, SECC-2011 ರ ಕಾರ್ಯವನ್ನು Tablet PC ಗಳಿಂದ ನಿರ್ವಹಿಸಲಾಗುತ್ತಿರುವುದರಿಂದ ಸರ್ಕಾರದ ಸುತ್ತೋಲೆಗಳನ್ವಯ ನಿಗಧಿತ ಚೆಕ್‌ಲಿಸ್ಟ್‌ನಲ್ಲಿರುವಂತೆ ಗಣಕಯಂತ್ರ ಹಾಗೂ ಇತರೇ ಉಪಕರಣಗಳನ್ನು ಚಾರ್ಜ್ ಕೇಂದ್ರಗಳಲ್ಲಿ ಅಳವಡಿಸುವುದು ಅತ್ಯಾವಶ್ಯಕವಾಗಿರುತ್ತದೆ.

ಈ ಸಂಬಂಧ ಪರಿಶೀಲಿಸಲಾಗಿ, SECC-2011 ರ ಕಾರ್ಯಕ್ಕೆ ಮಾಹಿತಿ ತಂತ್ರಜ್ಞಾನ ಸಲಹೆಗಾರ ರವರಿಂದ ಪಾಲಿಕೆಯ ವ್ಯಾಪ್ತಿಯಲ್ಲಿ ಗುರುತಿಸಲಾಗಿರುವ ಚಾರ್ಜ್ ಕೇಂದ್ರಗಳಿಗೆ ಸರ್ಕಾರದ ಸುತ್ತೋಲೆಗಳನ್ವಯ ನಿಗಧಿತ ಚೆಕ್ ಲಿಸ್ಟ್‌ನಲ್ಲಿರುವಂತೆ ಗಣಕಯಂತ್ರ, ಯು.ಪಿ.ಎಸ್. ಪ್ರಿಂಟರ್, ಡಾಟಾ ಕಾರ್ಡ್, ಇತ್ಯಾದಿ ಆಯ್ದ 100 ಚಾರ್ಜ್ ಕೇಂದ್ರಗಳಿಗೆ ಖರೀದಿಸಬೇಕಾಗಿದ್ದು, ಸದರಿಯವುಗಳಿಗೆ ತಗಲಬಹುದಾದ ಅಂದಾಜು ವೆಚ್ಚವು ರೂ. 1,94,09,900/- ಗಳು ಎಂದು ಅಂದಾಜಿಸಲಾಗಿದೆ. ಸದರಿ ವೆಚ್ಚವನ್ನು ಪಾಲಿಕೆಯ ನಿಧಿಯಿಂದ ಭರಿಸಬೇಕಾಗಿರುತ್ತದೆ ಮತ್ತು ಇದನ್ನು ಸರ್ಕಾರದಿಂದ ಮರುಪಾವತಿಗೆ ಅವಕಾಶವಿರುವುದಿಲ್ಲ. ಗಣತಿ ಕಾರ್ಯವು ಪೂರ್ಣಗೊಂಡ ನಂತರ ಉಪಕರಣಗಳನ್ನು ಪಾಲಿಕೆಯ ಸೇವಾ ಕೇಂದ್ರಗಳಲ್ಲಿ ಅಥವಾ ಇತರೇ ಅಧಿಕಾರಿಗಳ ಕಛೇರಿಗಳಲ್ಲಿ ಉಪಯೋಗಿಸಿಕೊಳ್ಳಬಹುದಾಗಿರುತ್ತದೆ.

ಆಯ್ದ 100 ಚಾರ್ಜ್ ಕೇಂದ್ರಗಳಿಗೆ ಅವಶ್ಯವಿರುವ ಎಲೆಕ್ಟ್ರಿಕಲ್ ಪಾಯಿಂಟ್ಸ್ ಮತ್ತು ಇತರೇ ತತ್ಸಂಬಂಧ ಕಾರ್ಯಗಳನ್ನು ನಿರ್ವಹಿಸಬೇಕಿದ್ದು, ಅವುಗಳಿಗೆ ತಗಲಬಹುದಾದ ವೆಚ್ಚ ರೂ. 34,63,900/- ಎಂದು ಮುಖ್ಯ ಅಭಿಯಂತರರು (ವಿದ್ಯುತ್) ರವರಿಂದ ಅಂದಾಜು ಸಲ್ಲಿಸಲಾಗಿರುತ್ತದೆ. ಸದರಿ ಮೊತ್ತವನ್ನು ಸರ್ಕಾರದಿಂದ ಮರುಪಾವತಿಗೆ ಅವಕಾಶವಿರುತ್ತದೆ. ಸದರಿ ಎಲೆಕ್ಟ್ರಿಕಲ್ ಕೆಲಸ ಕಾರ್ಯಗಳನ್ನು ಮುಖ್ಯ ಅಭಿಯಂತರರು (ವಿದ್ಯುತ್) ಹಾಗೂ ಆಯಾ ವಲಯಗಳ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರ ಮುಖಾಂತರ ನಿರ್ವಹಿಸಲು ಉದ್ದೇಶಿಸಲಾಗಿರುತ್ತದೆ.

ಆಯ್ದ 100 ಚಾರ್ಜ್ ಕೇಂದ್ರಗಳಿಗೆ ಅವಶ್ಯವಿರುವ ಪೀಠೋಪಕರಣಗಳ ಪಾಲಿಕೆಯ ನಿಧಿಯಿಂದಲೇ ಒದಗಿಸಬೇಕಿದ್ದು, ಹಾಲಿ ಲಭ್ಯವಿರುವ ಪೀಠೋಪಕರಣಗಳ ಜೊತೆಗೆ ಅತೀ ಅವಶ್ಯವಿರುವ ಪೀಠೋಪಕರಣಗಳನ್ನು ಒದಗಿಸಲು ಪ್ರತಿ ಚಾರ್ಜ್ ಕೇಂದ್ರಕ್ಕೆ ರೂ.20,000/- ದಂತೆ 100-ಕೇಂದ್ರಗಳಿಗೆ, 20-ಲಕ್ಷಗಳನ್ನು ಅಂದಾಜಿಸಲಾಗಿದೆ. ಸದರಿ ವೆಚ್ಚವನ್ನು ಸರ್ಕಾರದಿಂದ ಮರುಪಾವತಿಗೆ ಅವಕಾಶವಿರುವುದಿಲ್ಲ, ಪಾಲಿಕೆಯ ನಿಧಿಯಿಂದಲೇ ಭರಿಸಬೇಕಾಗುತ್ತದೆ.

ಮೇಲೆ ವಿಸ್ತಾರವಾಗಿ ಸಲ್ಲಿಸಿರುವ ಪ್ರಸ್ತಾವನೆಗೆ ಸಂಬಂಧಿಸಿದ ಮುಖ್ಯ ಅಂಶಗಳನ್ನ ಈ ಕೆಳಕಂಡಂತೆ ನಮೂದು ಮಾಡಿದೆ.

| | | |
|---|---|---|
| 1 | ಪ್ರತಿ ಚಾರ್ಜ್ ಸೆಂಟರ್‌ಗೆ ಎರಡು ಗಣಕಯಂತ್ರದಂತೆ 100 ಚಾರ್ಜ್ ಕೇಂದ್ರಗಳಿಗೆ 200 ಗಣಕಯಂತ್ರಗಳನ್ನು ಖರೀದಿಸಲು ತಗುಲಬಹುದಾದ ವೆಚ್ಚ | ರೂ.82,93,200-00 |
| 2 | ಪ್ರತಿ ಚಾರ್ಜ್ ಸೆಂಟರ್‌ಗೆ ಒಂದು ಪ್ರಿಂಟರ್‌ನಂತೆ 100 ಚಾರ್ಜ್ ಕೇಂದ್ರಗಳಿಗೆ 100 ಪ್ರಿಂಟರ್ಸ್‌ಗಳನ್ನು ಖರೀದಿಸಲು ತಗಲಬಹುದಾದ ವೆಚ್ಚ | ರೂ.5,76,700-00 |
| 3 | ಡಾಟಾ ಕಾರ್ಡ್, ಲ್ಯಾನ್ ಕೇಬಲ್, ಪೋರ್ಟ್ ಡೀಲಿಂಕ್ ಸ್ವಿಚ್ ಪ್ರತಿ ಚಾರ್ಜ್ ಸೆಂಟರ್ 1 ರಂತೆ 100 ಚಾರ್ಜ್ ಕೇಂದ್ರಗಳಿಗೆ ತಗುಲಬಹುದಾದ ವೆಚ್ಚ | ರೂ.8,80,000-00 |
| 4 | ಚಾರ್ಜ್ ಕೇಂದ್ರಗಳಿಗೆ ವಿದ್ಯುತ್ ಸಂಪರ್ಕ ಮತ್ತು ತತ್ಸಂಬಂಧದ ಕೆಲಸಗಳನ್ನ ಮುಖ್ಯ ಅಭಿಯಂತರರು (ವಿದ್ಯುತ್) ರವರು ಸಲ್ಲಿಸಿರುವ ಪ್ರಸ್ತಾವನೆಯಂತೆ 100 ಕೇಂದ್ರಗಳಿಗೆ ತಗಲಬಹುದಾದ ವೆಚ್ಚ | ರೂ.34,63,900-00 |
| 5 | ಚಾರ್ಜ್ ಕೇಂದ್ರಗಳಿಗೆ ಹಾಲಿ ಇರುವ ಪೀಠೋಪಕರಣಗಳ ಜೊತೆಗೆ ಅವಶ್ಯಕತೆಗೆ ಅನುಗುಣವಾಗಿ ಪೀಠೋಪಕರಣ ಖರೀದಿಸಲು ಪ್ರತಿ ಕೇಂದ್ರಕ್ಕೆ ರೂ.20,000/-ಗಳಂತೆ 100 ಚಾರ್ಜ್ ಕೇಂದ್ರಗಳಿಗೆ ತಗಲಬಹುದಾದ ವೆಚ್ಚ | ರೂ.20,00,000-00 |

6. ಕಂಡಿಕೆ-(1)ರಲ್ಲಿ ಪ್ರತಿ ಕೇಂದ್ರಕ್ಕೆ 1-ಯು.ಪಿ.ಎಸ್.ನಂತೆ 100-ಕೇಂದ್ರಗಳಿಗೆ 100-ಯು.ಪಿ.ಎಸ್. ಗಳನ್ನ ಅಳವಡಿಸಲು ರೂ.96,60,000-00 ಗಳ ವೆಚ್ಚದಲ್ಲಿ ಖರೀದಿಸಬಹುದಾಗಿದೆ. ಆದರೆ, ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಬೆಸ್ಕಾಂ ಸಂಸ್ಥೆಯು ಅನಿಯತ ವಿದ್ಯುತ್ (Un-interrupted power supply) ಪೂರೈಕೆ ನೀಡಲಾಗುತ್ತದೆ ಎಂದು ಮುಖ್ಯ ಅಭಿಯಂತರರು (ವಿದ್ಯುತ್), ಬಿ.ಬಿ.ಎಂ.ಪಿ ರವರು ತಿಳಿಸಿರುವುದರಿಂದ ಸದರಿ ಪ್ರಸ್ತಾವನೆಯನ್ನು ಕೈಬಿಡಬಹುದಾಗಿದೆ.

ಕ್ರಮ ಸಂಖ್ಯೆ: 1, ರಿಂದ 5 ರವರೆಗೆ ನಮೂದು ಮಾಡಿರುವ ಐಟಂಗಳನ್ನ ಖರೀದಿ/ನಿರ್ವಹಿಸಿ, ಚಾರ್ಜ್ ಕೇಂದ್ರಗಳನ್ನು ಅವಶ್ಯಕತೆಗೆ ಅನುಗುಣವಾಗಿ ವ್ಯವಸ್ಥೆಗೊಳಿಸಲು ತಗಲುವ ವೆಚ್ಚ ರೂ.1,52,13,800/- ಆಗುತ್ತದೆ. ಅದರ ಪೈಕಿ, ರೂ.34,63,900-00 ಗಳನ್ನು ಸರ್ಕಾರದಿಂದ ಮರುಪಾವತಿ ಪಡೆಯಲು ಅವಕಾಶವಿರುತ್ತದೆ. ಆದ್ದರಿಂದ, ಸದರಿ ಸಾಮಗ್ರಿಗಳನ್ನ ನಿಯಮಾಗಳನ್ವಯ Short term tender ಮೂಲಕ ಆಯಾಯಾ ವಲಯ ಮಟ್ಟದಲ್ಲಿ ಅಪರ / ಜಂಟಿ ಆಯುಕ್ತರು ಖರೀದಿಸಿ ಸರಬರಾಜು ಮಾಡಬಹುದಾಗಿರುತ್ತದೆ. ಈ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ

ದಿನಾಂಕ:23-11-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:07-12-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರ ಟಿಪ್ಪಣಿಯನ್ನು ಭಾಗಶ: ಒಪ್ಪುತ್ತಾ, ಕಂಪ್ಯೂಟರ್ ಮತ್ತು ಯು.ಪಿ.ಎಸ್‌ಗಳನ್ನು Short term tender ಕರೆದು ಖರೀದಿಸುವ ಬದಲು, ಬಾಡಿಗೆ ಆಧಾರದ ಮೇಲೆ ಸರ್ಕಾರದ ಆದೇಶದಂತೆ ಪಡೆಯುವುದೆಂದು ಹಾಗೂ ಇನ್ನುಳಿದಂತೆ ಆಯುಕ್ತರ ಟಿಪ್ಪಣಿಯಂತೆ ಕ್ರಮವಹಿಸುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ದೀರ್ಘವಾದ ಚರ್ಚೆಯ ನಂತರ ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರ ಟಿಪ್ಪಣಿಯನ್ನು ಭಾಗಶ: ಒಪ್ಪುತ್ತಾ, ಕಂಪ್ಯೂಟರ್ ಮತ್ತು ಯು.ಪಿ.ಎಸ್‌ಗಳನ್ನು Short term tender ಕರೆದು ಖರೀದಿಸುವ ಬದಲು, ಬಾಡಿಗೆ ಆಧಾರದ ಮೇಲೆ ಸರ್ಕಾರದ ಆದೇಶದಂತೆ ಪಡೆಯುವುದೆಂದು ಹಾಗೂ ಇನ್ನುಳಿದಂತೆ ಆಯುಕ್ತರ ಟಿಪ್ಪಣಿಯಂತೆ ಕ್ರಮವಹಿಸುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 07 (258) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರ ದಿನಾಂಕ:30-05-2011ರ ಟಿಪ್ಪಣಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಹಾಪೌರರ ಹುದ್ದೆಯು ಪ್ರತಿಷ್ಠಿತ ಹುದ್ದೆಯಾಗಿದ್ದು, ಸದರಿ ಹುದ್ದೆಯಲ್ಲಿ ಜವಾಬ್ದಾರಿಯುತವಾದ ಕೆಲಸಕಾರ್ಯಗಳನ್ನು ನಿರ್ವಹಿಸಬೇಕಾಗಿರುವುದರಿಂದ ಹಾಗೂ ಪ್ರತಿನಿತ್ಯ ಸಾರ್ವಜನಿಕರಿಂದ ಬರುವ ದೂರುಗಳಿಗೆ, ಟೀಕೆ ಟಿಪ್ಪಣಿಗಳಿಗೆ ಅಲ್ಲದೆ ಪತ್ರಿಕಾ ಮಾಧ್ಯಮ ಮತ್ತು ದೃಶ್ಯ ಮಾಧ್ಯಮಗಳ ಟೀಕೆ ಟಿಪ್ಪಣಿಗಳಿಗೆ ಸ್ಪಂಧಿಸುವ ಮೂಲಕ ಕೆಲಸ ನಿರ್ವಹಿಸಬೇಕಾಗಿರುವುದರಿಂದ ಒಬ್ಬ ನುರಿತ ಪತ್ರಿಕಾ ಕಾರ್ಯದರ್ಶಿಯವರ ಅವಶ್ಯಕತೆ ಇರುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ, ಶ್ರೀ.ಬಿ.ಎನ್.ರಾಘವೇಂದ್ರ, ನಂ.1652, ಹೊಸ ನಂ.50, 2ನೇ ಮುಖ್ಯರಸ್ತೆ, ರಾಮ ಮೋಹನಪುರ, ಬೆಂಗಳೂರು-21 ಇವರು ಪತ್ರಿಕಾ ಮತ್ತು ದೃಶ್ಯ ಮಾಧ್ಯಮಗಳ ಕಾರ್ಯಚಟುವಟಿಕೆಗಳಲ್ಲಿ ಒಳ್ಳೆಯ ಅನುಭವ ಹೊಂದಿರುವುದರಿಂದ, ಸದರಿಯವರನ್ನು ಸಂಚಿತ ವೇತನದ ಆಧಾರದ ಮೇಲೆ ಮಹಾಪೌರರ ಪತ್ರಿಕಾ ಕಾರ್ಯದರ್ಶಿಯನ್ನಾಗಿ ನಿಯೋಜಿಸುವ ಬಗ್ಗೆ ಸೂಕ್ತ ಹಾಗೂ ಜರೂರು ಕ್ರಮ ತೆಗೆದುಕೊಳ್ಳುವಂತೆ ಕೋರಿರುತ್ತಾರೆ.

ಈ ಸಂಬಂಧವಾಗಿ, ಶ್ರೀ.ಬಿ.ಎನ್.ರಾಘವೇಂದ್ರ, ಇವರನ್ನು ನಿಯೋಜಿಸುವ ಬಗ್ಗೆ ದಿನಾಂಕ: 06-07-2011 ರ ಕಾನೂನು ಕೋಶದ ಮುಖ್ಯಸ್ಥರ ವರದಿಯನ್ವಯ 1977 ರ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ನಿಯಮಾವಳಿಗಳ ನಿಯಮ-20(ಬಿ) ರನ್ವಯ ಪೂಜ್ಯ ಮಹಾಪೌರರ ಪತ್ರಿಕಾ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿಕೊಳ್ಳುವ ಬಗ್ಗೆ ಸರ್ಕಾರದ ಪೂರ್ವಾನುಮತಿ ಪಡೆದ ನಂತರ ಸದರಿಯವರನ್ನು ನಿಯಮಾನುಸಾರ ಸಂಚಿತ ವೇತನದ ಮೇಲೆ ನೇಮಿಸಿಕೊಳ್ಳಬಹುದು ಎಂದು ಅಭಿಪ್ರಾಯ ನೀಡಿರುತ್ತಾರೆ.

ಆದ್ದರಿಂದ, ಈ ಹಿಂದಿನ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯಲ್ಲಿ ವಿಷಯದ ಸಂಖ್ಯೆ:ತೆಆಸ್ಥಾಸ/115/2010-11 ರಲ್ಲಿ ಕೈಗೊಂಡ ತೀರ್ಮಾನದಂತೆ ಶ್ರೀ.ಲಿಂಗರಾಜು, ಈ ಹಿಂದಿನ ಮಹಾಪೌರರ ಪತ್ರಿಕಾ ಕಾರ್ಯದರ್ಶಿಯವರಿಗೆ ಮಾಸಿಕ ಸಂಚಿತ ವೇತನ ರೂ.15,000/- ಗಳನ್ನು ನಿಗಧಿಪಡಿಸಿರುವುದನ್ನು ಅವಗಾಹನೆಗೆ ತರುತ್ತಾ, ಶ್ರೀ.ಬಿ.ಎನ್.ರಾಘವೇಂದ್ರ ರವರನ್ನು ಪೂಜ್ಯ ಮಹಾಪೌರರ ಪತ್ರಿಕಾ ಕಾರ್ಯದರ್ಶಿಯನ್ನಾಗಿ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976 ರ ನಿಯಮ-20 (ಬಿ) ರೀತ್ಯಾ ನೇಮಿಸಿಕೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:07-09-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಪ್ರಸ್ತಾವನೆಯನ್ನು ಕೈಬಿಡಲು ಸೂಚಿಸಿದರು.

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

. . . .2

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಪ್ರಸ್ತಾವನೆಯನ್ನು ಕೈಬಿಡಲಾಗಿದೆ".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 08 (259) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ನಗರಾಭಿವೃದ್ಧಿ ಇಲಾಖೆ ದಿನಾಂಕ:15-10-2011 ರ ನಡವಳಿಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ರವರು ದಿನಾಂಕ:5-10-2008 ರಂತೆ ಓದಲಾದ ದಿನಾಂಕ:5-10-2008ರ ಪತ್ರದಲ್ಲಿ ಬೆಂಗಳೂರು ಮಹಾನಗರ ಪಾಲಿಕೆಗೆ 07 ನಗರ ಸಭೆಗಳು, 01 ಪುರಸಭೆ ಮತ್ತು 110 ಹಳ್ಳಿಗಳು ವಿಲೀನಗೊಂಡು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ರಚನೆಗೊಂಡಿದ್ದು, 03 ಹಳೆಯ ವಲಯಗಳ ಜೊತೆಗೆ 05 ಹೊಸ ವಲಯಗಳನ್ನು ಸೃಜಿಸಲಾಗಿದ್ದು, ಇದರಿಂದ ಪಾಲಿಕೆಯ ಆಡಳಿತ ವ್ಯಾಪ್ತಿಯು ವಿಸ್ತರಣೆಗೊಂಡಿದ್ದು, ಪಾಲಿಕೆಯ ಆಡಳಿತ ಹಿತದೃಷ್ಟಿಯಿಂದ 03 ಹಳೆಯ ವಲಯಗಳಾದ ಜಂಟಿ ಆಯುಕ್ತರು (ಪೂರ್ವ-ಪಶ್ಚಿಮ-ದಕ್ಷಿಣ) ಕಛೇರಿಗಳ ಕಾರ್ಯನಿರ್ವಹಣೆ, ಜಾಹೀರಾತು ಮತ್ತು ಆಸ್ತಿಗಳ ವಿಭಾಗಗಳ ಕಾರ್ಯನಿರ್ವಹಣೆ, 05 ಹೊಸ ವಲಯಗಳಾದ ಜಂಟಿ ಆಯುಕ್ತರು (ಬೊಮ್ಮನಹಳ್ಳಿ, ದಾಸರಹಳ್ಳಿ, ಬ್ಯಾಟರಾಯನಪುರ, ರಾಜರಾಜೇಶ್ವರಿನಗರ, ಮಹದೇವಪುರ) ಕಛೇರಿಗಳ ನಿರ್ವಹಣೆ ಹಾಗೂ 08 ವಲಯಗಳ ಕಲ್ಯಾಣ ಕಛೇರಿಗಳ ಕಾರ್ಯನಿರ್ವಹಣೆಯ ಹಿತದೃಷ್ಟಿಯಿಂದ ಈ ಕೆಳಕಂಡ ಹುದ್ದೆಗಳನ್ನು ಸರ್ಕಾರದ ಅನುಮೋದನೆ ನಿರೀಕ್ಷಿಸಿ ಸೃಜಿಸಲು ಪಾಲಿಕೆಯ ಆಡಳಿತಗಾರರು ದಿನಾಂಕ:02-09-2008 ರಂದು ವಿಷಯ ಸಂಖ್ಯೆ:461/2008-09 ರಲ್ಲಿ ಅನುಮೋದನೆ ನೀಡಿರುತ್ತಾರೆ.

| ಕ್ರ ಸಂ. | ಸೃಜಿಸಬೇಕಾಗಿರುವ ಹುದ್ದೆಗಳು | |
|---|---|---|
| 1 | 03 ಹಳೆ ವಲಯದ ಜಂಟಿ ಆಯುಕ್ತರು (ಪೂರ್ವ-ಪಶ್ಚಿಮ-ದಕ್ಷಿಣ) ಕಛೇರಿಗೆ | ಉಪ ಆಯುಕ್ತರು-03 ಹುದ್ದೆಗಳು |
| 2 | ಜಾಹೀರಾತು ಮತ್ತು ಆಸ್ತಿಗಳ ವಿಭಾಗದ ನಿರ್ವಹಣೆಗೆ | ಉಪ ಆಯುಕ್ತರು-01 ಹುದ್ದೆ |
| 3 | 08 ವಲಯ ಜಂಟಿ ಆಯುಕ್ತರುಗಳ ಕಛೇರಿ | (03 ಹಳೆ ವಲಯ ಜಂಟಿ ಆಯುಕ್ತರು (ಪೂರ್ವ-ಪಶ್ಚಿಮ-ದಕ್ಷಿಣ) ಕಛೇರಿಗಳಿಗೆ ಈಗಾಗಲೇ 03 ಸಹಾಯಕ ಆಯುಕ್ತರು (ಕಂದಾಯ ಅಧಿಕಾರಿ-2) (ಕೇಂದ್ರ ಸ್ಥಾನಿಕ ಸಹಾಯಕರು) ಹುದ್ದೆಗಳು ಮಂಜೂರಾತಿ ಆಗಿರುತ್ತದೆ) ಉಳಿದ 05 ಹೊಸ ವಲಯ ಜಂಟಿ ಆಯುಕ್ತರುಗಳ ಕಛೇರಿಗಳಿಗೆ ಸಹಾಯಕ ಆಯುಕ್ತರು (ಕಂದಾಯ ಅಧಿಕಾರಿ-2) (ಕೇಂದ್ರ ಸ್ಥಾನಿಕ ಸಹಾಯಕರು)-05 ಹುದ್ದೆಗಳು |
| 4 | 08 ವಲಯ ಕಲ್ಯಾಣಾಧಿಕಾರಿಗಳ ಕಛೇರಿ | ಸಹಾಯಕ ಆಯುಕ್ತರು (ಕಂದಾಯ ಅಧಿಕಾರಿ-2) 08 ಹುದ್ದೆಗಳು (ಕಲ್ಯಾಣಾಧಿಕಾರಿಗಳು) |
| 5 | 10 ನಾಗರೀಕ ಸೇವಾ ಕೇಂದ್ರಗಳಿಗೆ | ಸಹಾಯಕ ಕಂದಾಯ ಅಧಿಕಾರಿ-10 ಹುದ್ದೆಗಳು |

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿರುತ್ತದೆ.

. . . .2

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮೂರು (3) ಉಪ ಆಯುಕ್ತರ ಹುದ್ದೆಗಳನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಸೃಜಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಈ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಮಾಡತಕ್ಕದ್ದು.
2. ಮಂಜೂರಾಗಿರುವ ಒಟ್ಟಾರೆ ಉಪ ಆಯುಕ್ತರ ಹುದ್ದೆಗಳ ಪೈಕಿ ಶೇಕಡ 50 ರಷ್ಟು ಹುದ್ದೆಗಳನ್ನು ಕೆ.ಎ.ಎಸ್ ವೃಂದದ ಅಧಿಕಾರಿಗಳಿಂದ ಹಾಗೂ ಉಳಿದ ಶೇಕಡ 50 ರಷ್ಟು ಹುದ್ದೆಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅರ್ಹ ನೌಕರರಿಂದ ಭರ್ತಿ ಮಾಡತಕ್ಕದ್ದು.
3. ಈ ಹುದ್ದೆಗಳನ್ನು ಸೃಜಿಸಲು ತಗಲುವ ಸಂಪೂರ್ಣ ವೆಚ್ಚವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಂಪನ್ಮೂಲದಿಂದಲೇ ಭರಿಸತಕ್ಕದ್ದು. ಇದಕ್ಕೆ ಸರ್ಕಾರದಿಂದ ಯಾವುದೇ ಅನುದಾನವನ್ನು ಕೋರತಕ್ಕದಲ್ಲ.
4. ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪುನರ್ ರಚಿಸುವ ಸಂದರ್ಭದಲ್ಲಿ ಉಪ ಆಯುಕ್ತರ ವೃಂದ ಬಲಕ್ಕೆ ಈ ಹುದ್ದೆಗಳನ್ನು ತೆಗೆದುಕೊಳ್ಳತಕ್ಕದ್ದು.

ಮೇಲ್ಕಂಡಂತೆ, ಸರ್ಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹುದ್ದೆಗಳನ್ನು ಸೃಜಿಸಿರುವ ಸರ್ಕಾರದ ಆದೇಶ ಸಂಖ್ಯೆ: ನಅಇ 141 ಎಂಎಲ್ಆರ್ 2006, ದಿನಾಂಕ:15-10-2011ರ ನಡವಳಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಓದಿ ದಾಖಲಿಸುವ (Read and Recording) ಸಲುವಾಗಿ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:24-11-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:24-11-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಚರ್ಚೆಯ ನಂತರ ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:24-11-2011ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

## ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

### ವಿಷಯದ ಸಂಖ್ಯೆ : 10 (155) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮೂರು ವಧಾಗಾರಗಳು ಕಾರ್ಯನಿರ್ವಹಿಸುತ್ತಿದ್ದು, ವಿವರಗಳು ಕೆಳಕಂಡಂತಿವೆ;

1) ನಾಗರೀಕ ಮಾಂಸ ಉತ್ಪಾದನಾ ಮತ್ತು ಸಂಸ್ಕರಣಾ ಕೇಂದ್ರ ಫ್ರೇಜರ್ ಟೌನ್
2) ನಗರ ಮಾಂಸ ಉತ್ಪಾದನಾ ಮತ್ತು ಸಂಸ್ಕರಣಾ ಕೇಂದ್ರ, ಉಸ್ಮಾನ್ ಖಾನ್ ರಸ್ತೆ
3) ನಾಗರೀಕ ಹಂದಿ ಮಾಂಸ ಉತ್ಪಾದನಾ ಕೇಂದ್ರ, ಫ್ರೇಜರ್‌ಟೌನ್

ಈ ವಧಾಗಾರಗಳಿಗೆ ವಧೆಗೆ ಬರುವ ಪ್ರಾಣಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಗುತ್ತಿಗೆಯನ್ನು ದಿನಾಂಕ:01-04-2011 ರಿಂದ 31-03-2012 ರವರೆಗೆ ಹೊಸದಾಗಿ ನಿಗಧಿಪಡಿಸುವ ಸಲುವಾಗಿ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್ ಅನ್ನು ಕರೆಯಲಾಗಿತ್ತು.

ದಿನಾಂಕ:08-03-2011 ರಂದು ಮಧ್ಯಾಹ್ನ 4-00 ಗಂಟೆಗೆ ನಗರ ಮತ್ತು ನಾಗರೀಕಾ ವಧಾಗಾರಗಳಿಗೆ ವಧೆಗೆ ಬರುವ ಪ್ರಾಣಿಗಳ ಪ್ರವೇಶ ಶುಲ್ಕ ಹಾಗೂ ವಧಾ ಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ನ ಆರ್ಥಿಕ ಬಿಡ್ಡನ್ನು ತೆರೆಯಲಾಗಿರುತ್ತದೆ;

1) ನಾಗರೀಕ ವಧಾಗಾರಕ್ಕೆ ವಧೆಗೆ ಬರುವ ದೊಡ್ಡ ಪ್ರಾಣಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿಗಾಗಿ ಕರೆಯಲಾಗಿದ್ದ ಅಲ್ಪಾವಧಿ ಟೆಂಡರ್‌ನಲ್ಲಿ 3 ಜನ ಬಿಡ್‌ದಾರರು ಭಾಗವಹಿಸಿದ್ದು, ಸದರಿ ಮೂರು ಜನ ಬಿಡ್‌ದಾರರ ಇ-ಪ್ರಕ್ಯೂರ್‌ಮೆಂಟ್ ಅಂಗೀಕಾರವಾಗಿದ್ದು, ಅವರ ಹೆಸರು ಹಾಗೂ ಅವರು ನಮೂದಿಸಿರುವ ಮೊತ್ತ ಈ ಕೆಳಕಂಡಂತೆ ಇರುತ್ತದೆ.

| ಕ್ರಸಂ. | ಟೆಂಡರ್‌ದಾರರ ಹೆಸರು | ನಮೂದಿಸಿರುವ ಮೊತ್ತ ರೂ. |
|---|---|---|
| 01 | ಶ್ರೀ.ಬೆಂಗಳೂರು ಮಹ್ಮದ್ ಯೂಸಫ್ | 45,00,999/- |
| 02 | ಶ್ರೀ.ಬಾಬು ಅಬ್ದುಲ್ ಅಜೀಜ್ | 43,99,787/- |
| 03 | ಶ್ರೀ.ಕಾಸಿಂ ಇಜಾಜ್ ಅಹ್ಮದ್ ಖುರೇಶಿ | 69,00,786/- |

2) ನಾಗರೀಕ ವಧಾಗಾರಕ್ಕೆ ವಧೆಗೆ ಬರುವ ಕುರಿ, ಮೇಕೆಗಳ ಪ್ರವೇಶ ಶುಲ್ಕ ಹಾಗೂ ವಧಾ ಶುಲ್ಕ ಸಂಗ್ರಹಿಸುವ ಹಕ್ಕಿಗಾಗಿ ಕರೆಯಲಾಗಿದ್ದ ಅಲ್ಪಾವಧಿ ಟೆಂಡರ್‌ನಲ್ಲಿ 6 ಜನ ಬಿಡ್‌ದಾರರು ಭಾಗವಹಿಸಿದ್ದು, ಈ 6 ಜನರಲ್ಲಿ 4 ಜನ ಬಿಡ್‌ದಾರರು ಇ-ಪ್ರಕ್ಯೂರ್‌ಮೆಂಟ್ ಅಂಗೀಕಾರಗೊಂಡಿದ್ದು, ಸದರಿ ಬಿಡ್‌ದಾರರ ಹೆಸರು ಹಾಗೂ ಅವರು ನಮೂದಿಸಿರುವ ಮೊತ್ತ ಈ ಕೆಳಕಂಡಂತೆ ಇರುತ್ತದೆ.

| ಕ್ರಸಂ. | ಬಿಡ್‌ದಾರರ ಹೆಸರು | ನಮೂದಿಸಿರುವ ಮೊತ್ತ ರೂ. |
|---|---|---|
| 01 | ಶ್ರೀ.ಎ.ಎಂ.ಭರ್ಖತುಲ್ಲಾ | 72,11,786/- |
| 02 | ಶ್ರೀ.ಫಿರ್‌ದೋಸ್ ರಾಜೆ | 76,29,786/- |
| 03 | ಶ್ರೀ.ಗೌಸ್ ಮೊಹಿದಿನ್ ಯೂಸಫ್ | 78,70,786/- |
| 04 | ಶ್ರೀ.ಮಿಸ್ಕೀನ್ ಮುಜೀಬ್ | 63,00,786/- |

ತಿರಸ್ಕೃತಗೊಂಡವರ ಹೆಸರು ಈ ಕೆಳಗಿನಂತೆ ಇರುತ್ತದೆ;

| ಕ್ರ.ಸಂ. | ಟೆಂಡರ್‌ದಾರರ ಹೆಸರು |
|---|---|
| 01 | ಶ್ರೀ.ಛಾಬು ಅಬ್ದುಲ್ ಅಜೀಜ್ |
| 02 | ಶ್ರೀ.ಇಬ್ರಾಹಿಂ ಖುರೇಶಿ |

3) ನಗರ ವಧಾಗಾರಕ್ಕೆ ವಧೆಗೆ ಬರುವ ಕುರಿ, ಮೇಕೆಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿಗಾಗಿ ಕರೆಯಲಾಗಿದ್ದ ಅಲ್ಪಾವಧಿ ಟೆಂಡರ್‌ನಲ್ಲಿ 6 ಜನ ಬಿಡ್‌ದಾರರು ಭಾಗವಹಿಸಿದ್ದು, ಈ 6 ಜನರಲ್ಲಿ 4 ಜನ ಬಿಡ್‌ದಾರರ ಇ-ಪ್ರಕ್ಯೂರ್‌ಮೆಂಟ್ ಅಂಗೀಕಾರಗೊಂಡಿದ್ದು, ಅಂಗೀಕಾರಗೊಂಡಿರುವ ಬಿಡ್‌ದಾರರ ಹೆಸರು ಹಾಗೂ ಅವರು ನಮೂದಿಸಿರುವ ಮೊತ್ತ ಈ ಕೆಳಕಂಡಂತೆ ಇರುತ್ತದೆ.

| ಕ್ರ.ಸಂ | ಬಿಡ್‌ದಾರರ ಹೆಸರು | ನಮೂದಿಸಿರುವ ಮೊತ್ತ ರೂ. |
|---|---|---|
| 01 | ಶ್ರೀ.ಗೌಸ್ ಮೊಹಿದಿನ್ ಯೂಸಫ್ | 2,07,786/- |
| 02 | ಶ್ರೀ.ದಾವುದ್ ಮೊಹಮದ್ ಇಬ್ರಾಹಿಂ | 25,77,786/- |
| 03 | ಶ್ರೀ.ನಾಜಿರ್ ರಿಯಾಜ್ ಅಹ್ಮದ್ | 27,25,786/- |
| 04 | ಶ್ರೀ.ಮಹಮದ್ ನಿಜಾಂ | 31,09,999.75/- |

ತಿರಸ್ಕೃತಗೊಂಡವರ ಹೆಸರು ಈ ಕೆಳಗಿನಂತೆ ಇರುತ್ತದೆ.

| ಕ್ರ.ಸಂ | ಟೆಂಡರ್‌ದಾರರ ಹೆಸರು |
|---|---|
| 01 | ಶ್ರೀ.ಎ.ಎಂ.ಭರ್ಖತುಲ್ಲಾ |
| 02 | ಶ್ರೀ.ವಿಶ್ವನಾಥ ಎಂ ನಾಗಪ್ಪ |

4) ನಾಗರೀಕ ಹಂದಿ ವಧಾಗಾರಕ್ಕೆ ವಧೆಗೆ ಬರುವ ಹಂದಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿಗಾಗಿ ಕರೆಯಲಾಗಿದ್ದ ಅಲ್ಪಾವಧಿ ಟೆಂಡರ್‌ನಲ್ಲಿ ಒಬ್ಬರು ಬಿಡ್ ಸಲ್ಲಿಸಿದ್ದು, ಇವರ ಪ್ರಕ್ಯೂರ್‌ಮೆಂಟ್ ಅಂಗೀಕಾರವಾಗಿದ್ದು, ಅವರ ಹೆಸರು ಹಾಗೂ ಅವರು ನಮೂದಿಸಿರುವ ಮೊತ್ತ ಈ ಕೆಳಗಿನಂತೆ ಇರುತ್ತದೆ;

| ಕ್ರ.ಸಂ. | ಟೆಂಡರ್‌ದಾರರ ಹೆಸರು | ನಮೂದಿಸಿರುವ ಮೊತ್ತ ರೂ. |
|---|---|---|
| 01 | ಶ್ರೀ.ಆರ್. ಪ್ರಸನ್ನ | 1,35,000/- |

ನಗರ ಹಾಗೂ ನಾಗರೀಕ ವಧಾಗಾರಗಳಲ್ಲಿ ವಧೆಗೆ ಬರುವ ಪ್ರಾಣಿಗಳ ಪ್ರವೇಶ ಶುಲ್ಕ ಹಾಗೂ ವಧಾ ಶುಲ್ಕ ಸಂಗ್ರಹಿಸುವ ಹಕ್ಕಿನ ಚಾಲ್ತಿ ಗುತ್ತಿಗೆಯ ಟೆಂಡರ್ ಮೊತ್ತ ಕರೆಯಲಾಗಿರುವ ಟೆಂಡರ್‌ನಲ್ಲಿ ಅಪೇಕ್ಷಿಸಲಾಗಿದ್ದ ಟೆಂಡರ್ ಮೊತ್ತ ಹಾಗೂ ಹೊಸ ಟೆಂಡರ್‌ನಲ್ಲಿ ಟೆಂಡರ್‌ದಾರರು ನಮೂದಿಸಿರುವ ಮೊತ್ತ ಈ ಕೆಳಗಿನಂತೆ ಇರುತ್ತದೆ.

| ವಿವರ | ಪ್ರಸ್ತುತ ಟೆಂಡರ್‌ನ ಮೊತ್ತ | ಕರೆಯಲಾಗಿರುವ ಟೆಂಡರ್‌ನಲ್ಲಿ ಅಪೇಕ್ಷಿಸಲಾಗಿರುವ ಟೆಂಡರ್ ಮೊತ್ತ | ಕರೆಯಲಾಗಿರುವ ಟೆಂಡರ್‌ನಲ್ಲಿ ಟೆಂಡರ್‌ದಾರರು ನಮೂದಿಸಿರುವ ಮೊತ್ತ | |
|---|---|---|---|---|
| | | | ಹೆಸರು | ಮೊತ್ತ ರೂ. |
| ನಾಗರೀಕ ವಧಾಗಾರಕ್ಕೆ ವಧೆಗೆ ಬರುವ ದೊಡ್ಡ ಪ್ರಾಣಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ನ ಮೊತ್ತ | 30,59,110/- | 33,65,020/- | ಬೆಂಗಳೂರು ಮಹ್ಮದ್ ಯೂಸಫ್ | 45,00,999/- |
| | | | ಛಾಬು ಅಬ್ದುಲ್ ಅಜೀಜ್ | 43,99,787/- |
| | | | ಕಾಸಿಂ ಇಜಾಜ್ ಅಹ್ಮದ್ ಖುರೇಶಿ | 69,00,786/- |
| ನಾಗರೀಕ ವಧಾಗಾರಕ್ಕೆ ವಧೆಗೆ ಬರುವ ಕುರಿ, ಮೇಕೆಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ನ ಮೊತ್ತ | 56,45,250/- | 62,09,775/- | ಎ.ಎಂ.ಭರ್ಖತುಲ್ಲಾ | 72,11,786/- |
| | | | ಫಿರ್ ದೋಸ್ ರಾಜೆ | 76,29,786/- |
| | | | ಗೌಸ್ ಮೊಹಿದಿನ್ ಯೂಸಫ್ | 78,70,786/- |
| | | | ಗೌಸ್ ಮೊಹಿದಿನ್ ಯೂಸಫ್ | 63,00,786/- |
| ನಾಗರೀಕ ಹಂದಿ ವಧಾಗಾರಕ್ಕೆ ವಧೆಗೆ ಬರುವ ಹಂದಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ನ ಮೊತ್ತ | 1,30,000/- | 1,43,000/- | ಆರ್.ಪ್ರಸನ್ನ | 1,35,000/- |

ನಾಗರೀಕ ಹಂದಿ ವಧಾಗಾರಕ್ಕೆ ವಧೆಗೆ ಬರುವ ಹಂದಿಗಳ ಪ್ರವೇಶ ಶುಲ್ಕ ಹಾಗೂ ವಧಾ ಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ಗೆ ಶ್ರೀ. ಆರ್.ಪ್ರಸನ್ನ ಇವರು ಒಬ್ಬರೆ ಟೆಂಡರ್ ಅನ್ನು ಸಲ್ಲಿಸಿದ್ದು, ಇವರು ನಮೂದಿಸಿದ ಮೊತ್ತ ರೂ.1,35,000/- ಟೆಂಡರ್‌ನಲ್ಲಿ ಅಪೇಕ್ಷಿಸಿದ ಮೊತ್ತ ರೂ.1,43,000/- ಗಳಿಗಿಂತ ಕಡಿಮೆ ಇದ್ದುದ್ದರಿಂದ ಸದರಿ ಟೆಂಡರ್‌ದಾರರನ್ನು ದರ ಸಂಧಾನಕ್ಕೆ ಕರೆಯಲಾಗಿದ್ದು, ಟೆಂಡರ್‌ದಾರರು ರೂ.1,43,040/- ಗಳಿಗೆ ಟೆಂಡರ್ ಅನ್ನು ನಿಗಧಿಗೊಳಿಸಲು ಲಿಖಿತವಾಗಿ ಒಪ್ಪಿಗೆಯನ್ನು ನೀಡಿರುತ್ತಾರೆ. ನಗರ ಮತ್ತು ನಾಗರೀಕ ವಧಾಗಾರಗಳಿಗೆ ವಧೆಗೆ ಬರುವ ಪ್ರಾಣಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ಗೆ ಅತೀ ಹೆಚ್ಚು ಟೆಂಡರ್ ಮೊತ್ತ ನಮೂದಿಸಿರುವ ಟೆಂಡರ್‌ದಾರರ ವಿವರಗಳು ಈ ಕೆಳಗಿನಂತಿರುತ್ತದೆ.

| ಕ್ರಮ ಸಂಖ್ಯೆ | ವಿವರ | ಟೆಂಡರ್‌ದಾರರ ಹೆಸರು | ಬಿಡ್‌ನ ಮೊತ್ತ ರೂ. |
|---|---|---|---|
| 01 | ನಾಗರೀಕ ವಧಾಗಾರಕ್ಕೆ ವಧೆಗೆ ಬರುವ ದೊಡ್ಡ ಪ್ರಾಣಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ನ ಮೊತ್ತ | ಕಾಸಿಂ ಇಜಾಜ್ ಅಹ್ಮದ್ ಖುರೇಶಿ | 69,00,786/- |
| 02 | ನಾಗರೀಕ ವಧಾಗಾರಕ್ಕೆ ವಧೆಗೆ ಬರುವ ಕುರಿ, ಮೇಕೆಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ನ ಮೊತ್ತ | ಗೌಸ್ ಮೊಹಿದಿನ್ ಯೂಸಫ್ | 78,70,786/- |

| | | | |
|---|---|---|---|
| 03 | ನಗರ ವಧಾಗಾರಕ್ಕೆ ವಧೆಗೆ ಬರುವ ಕುರಿ, ಮೇಕೆಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ನ ಮೊತ್ತ | ಮಹಮ್ಮದ್ ನಿಜಾಂ | 31,09,999.75/- |
| 04 | ನಾಗರೀಕ ಹಂದಿ ವಧಾಗಾರಕ್ಕೆ ವಧೆಗೆ ಬರುವ ಹಂದಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್ ನ ಮೊತ್ತ | ಆರ್.ಪ್ರಸನ್ನ | 1,43,040/- |

ಮೇಲೆ ತಿಳಿಸಿದ ಟೆಂಡರ್‌ದಾರರು ಇತರೆ ಟೆಂಡರ್‌ದಾರರಿಗಿಂತ ಹೆಚ್ಚು ಮೊತ್ತ ನಮೂದಿಸಿರುತ್ತಾರೆ ಹಾಗೂ ಟೆಂಡರ್‌ನಲ್ಲಿ ಅಪೇಕ್ಷಿಸಿದ ಮೊತ್ತಕ್ಕಿಂತಲೂ ಹೆಚ್ಚಿನ ಮೊತ್ತವನ್ನು ನಮೂದಿಸಿರುತ್ತಾರೆ. ಅಲ್ಲದೆ, ಹೊಸ ಟೆಂಡರ್‌ನಲ್ಲಿ ನಮೂದಿಸಿರುವ ಟೆಂಡರ್ ಮೊತ್ತಗಳು ಚಾಲ್ತಿ ಟೆಂಡರ್‌ನ ಮೊತ್ತಕ್ಕಿಂತ ಹೆಚ್ಚಾಗಿ ಇರುವುದರಿಂದ ಮೇಲೆ ತಿಳಿಸಿರುವ ಟೆಂಡರ್‌ದಾರರಿಗೆ ಪಾಲಿಕೆಗೆ ಸೇರಿರುವ ನಗರ ಮತ್ತು ನಾಗರೀಕ ವಧಾಗಾರಗಳಿಗೆ ವಧೆಗೆ ಬರುವ ಪ್ರಾಣಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕನ್ನು ದಿನಾಂಕ:01-04-2011 ರಿಂದ 31-03-2012 ರವರೆಗೆ ನೀಡುವ ಬಗ್ಗೆ ಆದೇಶ ನೀಡಬೇಕಾಗಿರುವುದರಿಂದ ಸದರಿ ಟೆಂಡರ್‌ದಾರರು ನಮೂದಿಸಿರುವ ಟೆಂಡರ್ ಮೊತ್ತವನ್ನು ಅಂಗೀಕರಿಸಲು ಕೋರಿ, ಪ್ರಸ್ತಾವನೆಯು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಗೆ ದಿನಾಂಕ:28-03-2011 ರಂದು ಟಿಪ್ಪಣಿಯನ್ನು ಮಂಡಿಸಲಾಗಿದ್ದು, ದಿನಾಂಕ:06-06-2011 ರಂದು ನಡೆದ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಸಭೆಯ ವಿಷಯದ ಸಂಖ್ಯೆ:ಸಾಆಸ್ಥಾಸ/1/11-12 ರಲ್ಲಿ ಪ್ರಸ್ತಾವನೆಯು ಅನುಮೋದನೆಯಾಗಿರುತ್ತದೆ. ಆದುದರಿಂದ, ಈ ಮೇಲೆ ವಿವರಿಸಿರುವಂತೆ, ನಗರ ಮತ್ತು ನಾಗರೀಕ ವಧಾಗಾರಗಳಿಗೆ ವಧೆಗೆ ಬರುವ ಪ್ರಾಣಿಗಳ ಪ್ರವೇಶ ಶುಲ್ಕ ಹಾಗೂ ವಧಾ ಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:27-07-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ವಿಷಯವನ್ನು ಮುಂದೂಡಲು ಸೂಚಿಸಿದರು.

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

ದೀರ್ಘವಾದ ಚರ್ಚೆಯ ನಂತರ "ಆಯುಕ್ತರವರ ದಿನಾಂಕ:27-07-2011ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:27-07-2011ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

## ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 11 (260) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ:11-08-2010 ರಂದು ನಡೆದ ರಾಜ್ಯ ಮಟ್ಟದ ಎ.ಬಿ.ಸಿ ಮಾನಿಟರಿಂಗ್ ಸಮಿತಿ ಸಭೆಯ ಶಿಫಾರಸ್ಸಿನಂತೆ ಹಾಗೂ ಬೆಂಗಳೂರು ಪಶ್ಚಿಮ ವಲಯದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿರುವ ಬಗ್ಗೆ ಸಾರ್ವಜನಿಕರಿಂದ ಹಾಗೂ ಪಾಲಿಕೆ ಸದಸ್ಯರುಗಳಿಂದ ದೂರುಗಳು ಬರುತ್ತಿರುವುದರಿಂದ ಬೆಂಗಳೂರು ಪಶ್ಚಿಮ ವಲಯದಲ್ಲಿ ಕ್ಷಿಪ್ರ ಕಾರ್ಯಾಚರಣೆ ಕಂ ಸಂಚಾರಿ ಶಸ್ತ್ರ ಚಿಕಿತ್ಸಾ ಘಟಕ ಸ್ಥಾಪನೆಗೆ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಟೆಂಡರ್ ಅನ್ನು ಟೆಂಡರ್ ಸಂಖ್ಯೆ:JD(AH)/ABC/ARVT/Tender/PR/358/11-12, ದಿನಾಂಕ:22-07-2011 ರಂತೆ ಕರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ 3 ಪ್ರಾಣಿ ಕಲ್ಯಾಣ ಸಂಸ್ಥೆಗಳು ಭಾಗವಹಿಸಿದ್ದು, ಟೆಂಡರ್‌ದಾರರು ನಮೂದಿಸಿರುವ ದರಗಳು ಈ ಕೆಳಗಿನಂತಿವೆ;

| ವಿವರ<br>ಕ್ಷಿಪ್ರ ಕಾರ್ಯಾಚರಣೆ ಕಂ ಸಂಚಾರಿ ಶಸ್ತ್ರ ಚಿಕಿತ್ಸಾ ಘಟಕ, ಪಶ್ಚಿಮ ವಲಯ | ಅನಿಮಲ್ ರೈಟ್ಸ್ ಫಂಡ್ (ಎ.ಆರ್.ಎಫ್) | ವೆಟ್ಸ್ ಸೊಸೈಟಿ ಫಾರ್ ಅನಿಮಲ್ ವೆಲ್ಫೇರ್ ಅಂಡ್ ರೂರಲ್ ಡೆವಲಪ್‌ಮೆಂಟ್ | ಸರ್ವೋದಯ ಸೇವಾಭಾವಿ ಸಂಸ್ಥೆ |
|---|---|---|---|
| ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮತ್ತು ಎ.ಆರ್.ವಿ.ಲಸಿಕೆ (ಸಿ.ಎನ್.ವಿ.ಆರ್. ಪದ್ಧತಿಯಲ್ಲಿ) | ಗಂಡು ನಾಯಿ-ರೂ.850/- | ಗಂಡು ನಾಯಿ-ರೂ.595/- | ಗಂಡು ನಾಯಿ-ರೂ.698/- |
| | ಹೆಣ್ಣು ನಾಯಿ-ರೂ.850/- | ಹೆಣ್ಣು ನಾಯಿ-ರೂ.595/- | ಹೆಣ್ಣು ನಾಯಿ-ರೂ.699/- |
| ದಯಾ ಮರಣಕ್ಕೆ ಒಳಪಡಿಸುವುದು | ರೂ.200/- | ರೂ.100/- | ರೂ.89/- |

ಇ-ಪ್ರೋಕ್ಯೂರ್‌ಮೆಂಟ್‌ನಲ್ಲಿ ಮೆ: ವೆಟ್ಸ್ ಸೊಸೈಟಿ ಫಾರ್ ಅನಿಮಲ್ ವೆಲ್ಫೇರ್ ಅಂಡ್ ರೂರಲ್ ಡೆವಲಪ್‌ಮೆಂಟ್ ಸಂಸ್ಥೆಯವರು ಎಲ್-1 ಆಗಿ ಆಯ್ಕೆಯಾಗಿರುತ್ತಾರೆ. ಸದರಿ ಸಂಸ್ಥೆಯ ಪ್ರತಿನಿಧಿಯನ್ನು ಜಂಟಿ ನಿರ್ದೇಶಕರು (ಪಶುಪಾಲನೆ) ಇವರು ದರ ಸಂಧಾನಕ್ಕಾಗಿ ಕರೆಯಲಾಗಿದ್ದು, ದರ ಸಂಧಾನದಲ್ಲಿ ದಯಾ ಮರಣಕ್ಕೆ ನಾಯಿಗಳನ್ನು ಒಳಪಡಿಸುವ ದರದಲ್ಲಿ ಮಾತ್ರ ಕಡಿಮೆ ಮಾಡಲು ಒಪ್ಪಿದ್ದು, ಈ ದರವನ್ನು ರೂ.100/- ರ ಬದಲು ರೂ.75/- ಕ್ಕೆ ಕಡಿಮೆಗೊಳಿಸಲು ಒಪ್ಪಿರುತ್ತಾರೆ.

ಮೆ: ವೆಟ್ಸ್ ಸೊಸೈಟಿ ಫಾರ್ ಅನಿಮಲ್ ವೆಲ್ಫೇರ್ ಅಂಡ್ ರೂರಲ್ ಡೆವಲಪ್‌ಮೆಂಟ್ ಇವರು ನಮೂದಿಸಿರುವ ದರಗಳು ಇತರೆ ಎರಡು ಪ್ರಾಣಿ ಕಲ್ಯಾಣ ಸಂಸ್ಥೆಗಳು ನಮೂದಿಸಿರುವ ದರಗಳಿಗಿಂತ ಕಡಿಮೆ ಇರುವುದರಿಂದ ಇವರು ನಮೂದಿಸಿರುವ ದರಗಳನ್ನು ಒಪ್ಪಬಹುದಾಗಿರುತ್ತದೆ.

ಬೀದಿ ನಾಯಿಗಳ ಸಂತಾನ ಹರಣ ಕಾರ್ಯವನ್ನು ಎ.ಬಿ.ಸಿ (ಡಾಗ್) ನಿಯಮಗಳು-2001 ರ ಅನ್ವಯ ಸಾರ್ವಜನಿಕ ಹಿತದೃಷ್ಟಿಯಿಂದ ಆದ್ಯತೆಯ ಮೇಲೆ ವಿಳಂಬವಿಲ್ಲದೆ ಕೈಗೊಳ್ಳಬೇಕಾಗಿರುವುದರಿಂದ ಕೆಳಗೆ ನಮೂದಿಸಿರುವ ದರಗಳಿಗೆ ಅನುಮೋದನೆ ನೀಡಲು ಕೋರಿ ನಿವೇದಿಸಿದೆ.

. . . .2

| ವಿವರ<br>ಕ್ಷಿಪ್ರ ಕಾರ್ಯಾಚರಣೆ ಕಂ ಸಂಚಾರಿ ಶಸ್ತ್ರ ಚಿಕಿತ್ಸಾ ಘಟಕ, ಪಶ್ಚಿಮ ವಲಯ | ವೆಟ್ಸ್ ಸೊಸೈಟಿ ಫಾರ್ ಅನಿಮಲ್ ವೆಲ್‌ಫೇರ್ ಅಂಡ್ ರೂರಲ್ ಡೆವಲಪ್‌ಮೆಂಟ್ |
|---|---|
| ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮತ್ತು ಎ.ಆರ್.ವಿ. ಲಸಿಕೆ (ಸಿ.ಎನ್.ವಿ.ಆರ್. ಪದ್ಧತಿಯಲ್ಲಿ) | ಗಂಡು ನಾಯಿ – ರೂ.595/- |
| | ಹೆಣ್ಣು ನಾಯಿ – ರೂ.595/- |
| ದಯಾ ಮರಣಕ್ಕೆ ಒಳಪಡಿಸುವುದು | ರೂ.75/- |

ಎ.ಬಿ.ಸಿ-ಎ.ಆರ್.ವಿ ಕಾರ್ಯಕ್ರಮಕ್ಕೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ 13 ಆರೋಗ್ಯ ಸಾಮಾನ್ಯ-ಆರೋಗ್ಯ ಮತ್ತು ನೈರ್ಮಲೀಕರಣ-ಪ್ರಾಣಿ ಸಂಖ್ಯೆ ನಿಯಂತ್ರಣ ವೆಚ್ಚಗಳು-ಬೀದಿ ನಾಯಿಗಳ ನಿರ್ವಹಣೆ ವೆಚ್ಚಗಳ ಅಡಿಯಲ್ಲಿ ಭರಿಸಲಾಗುವುದು. 2011-2012ನೇ ಸಾಲಿನ ಆಯವ್ಯಯದಲ್ಲಿ ಸದರಿ ಶೀರ್ಷಿಕೆಗೆ ರೂ.600/- ಲಕ್ಷಗಳನ್ನು ನಿಗದಿಗೊಳಿಸಲಾಗಿರುತ್ತದೆ.

ಸದರಿ ಪ್ರಸ್ತಾವನೆಯನ್ನು ದಿನಾಂಕ:19-10-2011 ರಂದು ನಡೆದ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಸಭೆಯಲ್ಲಿ ವಿಷಯದ ಸಂಖ್ಯೆ:ಸಾಆಸ್ಥಾಸ/33/2011-12 ರಲ್ಲಿ ಒಪ್ಪಿಗೆ ಪಡೆಯಲಾಗಿದೆ. ಆದುದರಿಂದ, ಮೇಲ್ಕಂಡ ಪ್ರಸ್ತಾವನೆಗೆ ಪಾಲಿಕೆ ಸಭೆಯ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-11-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:16-11-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ದೀರ್ಘವಾದ ಚರ್ಚೆಯ ನಂತರ ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:16-11-2011ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

## ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 12 (261) / 2011-12

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪ್ರದೇಶಗಳಲ್ಲಿ ಬೀದಿ ನಾಯಿಗಳ ಸಂಖ್ಯೆಯನ್ನು ನಿಯಂತ್ರಿಸುವ ಉದ್ದೇಶದಿಂದ ಎ.ಬಿ.ಸಿ (ಡಾಗ್) ನಿಯಮಾವಳಿ 2001 ರಂತೆ ಕ್ರಮ ಕೈಗೊಳ್ಳುವ ಸಲುವಾಗಿ 2008-09ನೇ ಸಾಲಿನಲ್ಲಿ ಟೆಂಡರ್ ಸಂಖ್ಯೆ:DC(H)/ABC-ARV/PR/559/2008-09, ದಿನಾಂಕ:30-09-2008 ರಂತೆ ಪಾಲಿಕೆಯ ವ್ಯಾಪ್ತಿಯಲ್ಲಿ ಎ.ಬಿ.ಸಿ-ಎ.ಆರ್.ವಿ ಕಾರ್ಯಕ್ರಮವನ್ನು ಮಾಡಲು 15 ಪ್ಯಾಕೇಜುಗಳಿಗೆ ಅಲ್ಪಾವಧಿ ಟೆಂಡರ್ ಅನ್ನು ಕರೆಯಲಾಗಿದ್ದು, ಇದನ್ನು ಅಂತಿಮಗೊಳಿಸಲಾಗಿದ್ದು, ಮಾನ್ಯ ಆಡಳಿತಗಾರರು ಸದರಿ ಕಾರ್ಯಕ್ರಮಕ್ಕಾಗಿ ಈ ಕೆಳಗಿನಂತೆ ದರಗಳನ್ನು ಅನುಮೋದಿಸಿರುತ್ತಾರೆ.

| ಕ್ರಮ ಸಂಖ್ಯೆ | ಕೆಲಸದ ವಿವರಗಳು | ದರ ಗಂಡು ನಾಯಿ – ರೂ. | ದರ ಹೆಣ್ಣು ನಾಯಿ – ರೂ. |
|---|---|---|---|
| 01 | ಸಿ.ಎನ್.ವಿ.ಆರ್ ಪದ್ಧತಿಯಲ್ಲಿ ಸಂತಾನಹರಣ ಶಸ್ತ್ರಚಿಕಿತ್ಸೆ ಮತ್ತು ಎ.ಆರ್.ವಿ.ಲಸಿಕೆಗೆ ನಿಗಧಿಪಡಿಸಿದ ದರ | 515/- | 525/- |
| 02 | ಪುನರಾವರ್ತಿತ ಎ.ಆರ್.ವಿ.ಲಸಿಕೆ (ಎ.ಆರ್.ವಿ ಡ್ರೈವ್)ಗೆ ನಿಗಧಿಪಡಿಸಿದ ದರ | 50/- | 50/- |
| 03 | ದಯಾಮರಣಕ್ಕೆ ಒಳಪಡಿಸಲು ನಿಗಧಿಪಡಿಸಿದ ದರ | 75/- | 75/- |

ಮೇಲಿನ ದರದಂತೆ 8 ಪ್ಯಾಕೇಜ್‌ಗಳಲ್ಲಿ 3 ಪ್ರಾಣಿ ಕಲ್ಯಾಣ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಟೆಂಡರ್‌ನ ಅವಧಿಯು ದಿನಾಂಕ:01-09-2009 ರಿಂದ 31-08-2011 ರವರೆಗೆ ಎರಡು ವರ್ಷಗಳ ಅವಧಿಗೆ ಚಾಲ್ತಿಯಲ್ಲಿರುತ್ತದೆ.

2010-11ನೇ ಸಾಲಿನಲ್ಲಿ ಎ.ಬಿ.ಸಿ-ಎ.ಆರ್.ವಿ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಎ.ಬಿ.ಸಿ-ಎ.ಆರ್.ವಿ ಪ್ಯಾಕೇಜುಗಳನ್ನು 15 ರಿಂದ 20ಕ್ಕೆ ಹೆಚ್ಚಿಸಿ ಉಳಿಕೆ 12 ಪ್ಯಾಕೇಜುಗಳಿಗೆ ಟೆಂಡರ್ ಸಂಖ್ಯೆ:JD(AH)/ABC-ARV/Tender/PR/867/2009-10 ದಿನಾಂಕ:24-02-2010 ಹಾಗೂ 13-04-2010 ರಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಟೆಂಡರ್ ಅನ್ನು ಕರೆಯಲಾಗಿದ್ದು, ಇದನ್ನು ಅಂತಿಮಗೊಳಿಸಿ, ಪಾಲಿಕೆಯ ಕೌನ್ಸಿಲ್ ಸಭೆಯ ತೀರ್ಮಾನದಂತೆ ನಿಗಧಿಯಾದ ದರಗಳು ಈ ಕೆಳಗಿನಂತಿರುತ್ತವೆ.

| ಕ್ರಮ ಸಂಖ್ಯೆ | ಕೆಲಸದ ವಿವರ | ಫೀಲ್ಡ್ ಕ್ಲಿನಿಕ್ ಮತ್ತು ವಾಹನ ಒದಗಿಸಿದಲ್ಲಿ ದರ | ಫೀಲ್ಡ್ ಕ್ಲಿನಿಕ್ ಅಥವಾ ವಾಹನ ಒದಗಿಸಿದಲ್ಲಿ ದರ | ಫೀಲ್ಡ್ ಕ್ಲಿನಿಕ್ ಮತ್ತು ವಾಹನ ಒದಗಿಸದಿದ್ದಲ್ಲಿ ದರ |
|---|---|---|---|---|
| 01 | ಸಿ.ಎನ್.ವಿ.ಆರ್ ಪದ್ಧತಿಯಲ್ಲಿ ಸಂತಾನಹರಣ ಶಸ್ತ್ರಚಿಕಿತ್ಸೆ ಮತ್ತು ಎ.ಆರ್.ವಿ ಲಸಿಕೆಗೆ ನಿಗಧಿಪಡಿಸಿದ ದರ | ರೂ.550/- | ರೂ.600/- | ರೂ.650/- |
| 02 | ಪುನರಾವರ್ತಿತ ಎ.ಆರ್.ವಿ ಲಸಿಕೆ (ಎ.ಆರ್.ವಿ ಡ್ರೈವ್) ಗೆ ನಿಗಧಿಪಡಿಸಿದ ದರ | ರೂ.70/- | ರೂ.70/- | ರೂ.70/- |
| 03 | ದಯಾಮರಣಕ್ಕೆ ಒಳಪಡಿಸಲು ನಿಗಧಿಪಡಿಸಿದ ದರ | ರೂ.75/- | ರೂ.75/ | ರೂ.75/- |

ಟೆಂಡರ್ ಸಂಖ್ಯೆ:DC(H)/ABC-ARV/PR/559/2008-09, ದಿನಾಂಕ:30-09-2008 ರಲ್ಲಿ ಅಂತಿಮಗೊಂಡಿದ್ದ 8 ಪ್ಯಾಕೇಜ್‌ಗಳಲ್ಲಿ ಎ.ಬಿ.ಸಿ-ಎ.ಆರ್.ವಿ ಕಾರ್ಯಕ್ರಮದ ಅವಧಿಯು ದಿನಾಂಕ: 31-08-2011 ಕ್ಕೆ ಎರಡು ವರ್ಷಗಳು ಪೂರೈಸಲಿದ್ದು, ಟೆಂಡರ್ ಷರತ್ತು ಸಂಖ್ಯೆ: Additional Information (2) ರಲ್ಲಿ ಟೆಂಡರ್ ಅವಧಿಯನ್ನು ಇದೇ ದರಗಳಲ್ಲಿ ಒಂದು ವರ್ಷ ಮಟ್ಟಕ್ಕೆ ಮುಂದುವರೆಸಲು ಅವಕಾಶವಿದ್ದು, ಈ ಷರತ್ತಿನಂತೆ ಟೆಂಡರ್ ಅವಧಿಯನ್ನು ಮುಂದುವರೆಸಿದಲ್ಲಿ ಪಾಲಿಕೆಗೆ ಆರ್ಥಿಕ ಉಳಿತಾಯವಾಗಲಿದ್ದು, ಈ ದೃಷ್ಟಿಯ ಹಿನ್ನಲೆಯಲ್ಲಿ ಈ ಕ್ರಮ ಸಮಂಜಸ. ಏಕೆಂದರೆ ಈ ಟೆಂಡರ್ ನಂತರ ಕರೆದ ಟೆಂಡರ್‌ನಲ್ಲಿ ನಿಗಧಿಪಡಿಸಿರುವ ದರ ಈ ಕೆಳಗಿನಂತಿರುತ್ತದೆ.

| ಕ್ರಮ ಸಂಖ್ಯೆ | ಕೆಲಸದ ವಿವರಗಳು | 2008-09 ರ ಟೆಂಡರ್‌ನ ದರ ರೂ. | 2010-11 ರ ಟೆಂಡರ್‌ನ ದರ ರೂ. |
|---|---|---|---|
| 01 | ಸಿ.ಎನ್.ವಿ.ಆರ್ ಪದ್ಧತಿಯಲ್ಲಿ ಸಂತಾನಹರಣ ಶಸ್ತ್ರಚಿಕಿತ್ಸೆ ಮತ್ತು ಎ.ಆರ್.ವಿ.ಲಸಿಕೆಗೆ ನಿಗಧಿಪಡಿಸಿದ ದರ | ಗಂಡು ನಾಯಿ-515/-<br>ಹೆಣ್ಣು ನಾಯಿ-525/- | 550/- ರಿಂದ 650/- |
| 02 | ಪುನರಾವರ್ತಿತ ಎ.ಆರ್.ವಿ.ಲಸಿಕೆ (ಎ.ಆರ್.ವಿ.ಡ್ರೈವ್) ಗೆ ನಿಗಧಿಪಡಿಸಿದ ದರ | 50/- | 70/- |
| 03 | ದಯಮರಣಕ್ಕೆ ಒಳಪಡಿಸಲು ನಿಗಧಿಪಡಿಸಿದ ದರ | 75/- | 75/- |

ಆದುದರಿಂದ ಈಗ ಈ 8 ಪ್ಯಾಕೇಜ್‌ಗಳಿಗೆ ಟೆಂಡರ್ ಕರೆದು ದರ ನಿಗಧಿಪಡಿಸಲು ಕ್ರಮಕೈಗೊಂಡಲ್ಲಿ ಹಳೆಯ ದರಗಳಿಗಿಂತ ಹೆಚ್ಚಿನ ದರಗಳನ್ನು ಪ್ರಾಣಿ ಕಲ್ಯಾಣ ಸಂಸ್ಥೆಗಳು ನಮೂದಿಸುವ ಸಾಧ್ಯತೆ ಇರುವುದರಿಂದ ಪಾಲಿಕೆಗೆ ಆರ್ಥಿಕ ಉಳಿತಾಯ ಮಾಡುವ ದೃಷ್ಟಿಯಿಂದ ಮೇಲೆ ತಿಳಿಸಿರುವ ಷರತ್ತು ಮತ್ತು ನಿಭಂದನೆ ಪ್ರಕಾರ ಈ ಕೆಳಗೆ ನಮೂದಿಸಿರುವ ಹಳೆಯ ಟೆಂಡರ್‌ನ ದರದಂತೆ 8 ಪ್ಯಾಕೇಜ್‌ಗಳಲ್ಲಿ ಎ.ಬಿ.ಸಿ-ಎ.ಆರ್.ವಿ ಕಾರ್ಯಕ್ರಮವನ್ನು ಒಂದು ವರ್ಷದ ಅವಧಿಗೆ ಅಂದರೆ ದಿನಾಂಕ:01-09-2011 ರಿಂದ 31-08-2012 ರವರೆಗೆ ಮುಂದುವರೆಸಲು ಸಂಬಂಧಪಟ್ಟ ಪ್ರಾಣಿ ಕಲ್ಯಾಣ ಸಂಸ್ಥೆಗಳಿಗೆ ಕಾರ್ಯಾದೇಶ ನೀಡಬೇಕಾಗಿರುವುದರಿಂದ ಈ ಪ್ರಸ್ತಾವನೆಯನ್ನು ಅನುಮೋದಿಸಲು ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಗೆ ಟಿಪ್ಪಣಿಯನ್ನು ದಿನಾಂಕ:21-07-2011 ರಂದು ಮಂಡಿಸಲಾಗಿರುತ್ತದೆ.

| ಕ್ರಮ ಸಂಖ್ಯೆ | ಕೆಲಸದ ವಿವರಗಳು | ದರ ಗಂಡು ನಾಯಿ - ರೂ. | ದರ ಹೆಣ್ಣು ನಾಯಿ - ರೂ. |
|---|---|---|---|
| 01 | ಸಿ.ಎನ್.ವಿ.ಆರ್ ಪದ್ಧತಿಯಲ್ಲಿ ಸಂತಾನಹರಣ ಶಸ್ತ್ರಚಿಕಿತ್ಸೆ ಮತ್ತು ಎ.ಆರ್.ವಿ.ಲಸಿಕೆಗೆ ನಿಗಧಿಪಡಿಸಿದ ದರ | 515/- | 525/- |
| 02 | ಪುನರಾವರ್ತಿತ ಎ.ಆರ್.ವಿ.ಲಸಿಕೆ (ಎ.ಆರ್.ವಿ ಡ್ರೈವ್)ಗೆ ನಿಗಧಿಪಡಿಸಿದ ದರ | 50/- | 50/- |
| 03 | ದಯಾಮರಣಕ್ಕೆ ಒಳಪಡಿಸಲು ನಿಗಧಿಪಡಿಸಿದ ದರ | 75/- | 75/- |

ದಿನಾಂಕ:01-08-2011 ರಂದು ನಡೆದ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಸಭೆಯಲ್ಲಿ ವಿಷಯದ ಸಂಖ್ಯೆ:ಸಾಆಸ್ಥಾಸ/13/2011-12 ರಲ್ಲಿ ಈ ವಿಷಯದ ಬಗ್ಗೆ ದಿನಾಂಕ:21-07-2011 ರಂದು ಮಂಡಿಸಲಾದ ಟಿಪ್ಪಣಿಯಲ್ಲಿನ ವಿವರಗಳನ್ನು ಚರ್ಚಿಸಿ, ಹೆಣ್ಣು ನಾಯಿಗಳಿಗೆ ಸಂತಾನಹರಣ ಶಸ್ತ್ರಚಿಕಿತ್ಸೆ

ಹಾಗೂ ಗಂಡು ನಾಯಿಗಳಿಗೆ ಹುಚ್ಚು ನಾಯಿ ರೋಗ ನಿರೋಧಕ ಚುಚ್ಚುಮದ್ದು ಮಾತ್ರ ನೀಡಲು ಸಭೆಯು ತೀರ್ಮಾನಿಸಿರುತ್ತದೆ.

ಎ.ಬಿ.ಸಿ-ಎ.ಆರ್.ವಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರ ರೂಪಿಸಿರುವ ಎಬಿಸಿ-ನಿಯಮ-2001 ಹಾಗೂ ವರ್ಲ್ಡ್ ಹೆಲ್ತ್ ಆರ್ಗನೈಸೇಷನ್ ಮತ್ತು ಅನಿಮಲ್ ವೆಲ್‌ಫೇರ್ ಬೋರ್ಡ್ ಆಫ್ ಇಂಡಿಯಾ ಇವರ ಗೈಡ್‌ಲೈನ್ಸ್ ನಂತೆ ಗಂಡು ಹಾಗೂ ಹೆಣ್ಣು ಬೀದಿನಾಯಿಗಳಲ್ಲಿ ಸಂತಾನಹರಣ ಶಸ್ತ್ರಚಿಕಿತ್ಸೆ ಕಾರ್ಯಕ್ರಮವು, ಬೀದಿನಾಯಿ ಸಂಖ್ಯೆ ಹಾಗೂ ನಾಯಿ ಕಡಿತದ ಪ್ರಕರಣಗಳನ್ನು ಕಡಿಮೆ ಮಾಡುವ ಒಂದೇ ಮಾರ್ಗೋಪಾಯವಾಗಿರುವುದರಿಂದ, ಗಂಡು ನಾಯಿಗಳಲ್ಲೂ ಕೂಡ ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡುವುದು ಅನಿವಾರ್ಯ ಹಾಗೂ ನನ್ನ ಅಭಿಪ್ರಾಯದಲ್ಲಿ ಸೂಕ್ತ ಹಾಗೂ ಅಗತ್ಯವೆಂದು ಕಾಣುತ್ತದೆ. ಆದುದರಿಂದ ದಿನಾಂಕ:01-08-2011 ರಂದು ನಡೆದ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಸಭೆಯ ನಿರ್ಣಯದ ಸಂಖ್ಯೆ:ಸಾಆಸ್ಥಾಸ:13:2011-12 ರಲ್ಲಿ ಈ ವಿಷಯದ ಬಗ್ಗೆ ದಿನಾಂಕ:21-07-2011 ರಂದು ಮಂಡಿಸಲಾದ ಟಿಪ್ಪಣಿಯಲ್ಲಿರುವಂತೆಯೇ ಚರ್ಚಿಸಿ ಕೋರಿರುವಂತೆ ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ಶಿಫಾರಸ್ಸಿನಂತೆ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 07-10-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ದಿನಾಂಕ:19-10-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ದಿನಾಂಕ:19-10-2011ರ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ದಿನಾಂಕ:19-10-2011ರ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 13 (262) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಂಪಿನಗರ ವಾರ್ಡ್ ಸಂಖ್ಯೆ-133 (ಹಳೆ ವಾರ್ಡ್ ನಂ.42) ರ ಬಾಪೂಜಿನಗರ ಬಳಿ ಇರುವ ರೈಲ್ವೇ ಹಳಿ ಲೆವೆಲ್ ಕ್ರಾಸಿಂಗ್ 5 ರ ಹತ್ತಿರ 4/700-800 ಕಿ.ಮೀ., ಬೆಂಗಳೂರು-ಮೈಸೂರು ರೈಲ್ವೇ ಹಳಿಗೆ ಅಡ್ಡಲಾಗಿ ಕೆಳ ಸೇತುವೆ ನಿರ್ಮಾಣ ಕಾಮಗಾರಿ ಸಂಬಂಧ, ಈ ಕೆಳಕಂಡ ಖಾಸಗಿ ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ಆರ್.ಓ.ಬಿ/ ಆರ್.ಯು.ಬಿ ವಿಭಾಗದವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಕಾರ್ಯಪಾಲಕ ಅಭಿಯಂತರರು ಆರ್.ಓ.ಬಿ/ ಆರ್.ಯು.ಬಿ ವಿಭಾಗದವರು ಶಿಫಾರಸ್ಸು ಮಾಡಿರುತ್ತಾರೆ.

ದಿನಾಂಕ:06-08-2011 ರಂದು ಉಪ ಆಯುಕ್ತರು (ಭೂಸ್ವಾಧೀನ) ರವರು ಸ್ಥಳ ತನಿಖೆ ಮಾಡಿ, ಸದರಿ ಸ್ವತ್ತುಗಳನ್ನು ರೈಲ್ವೇ ಕೆಳ ಸೇತುವೆ ನಿರ್ಮಾಣಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳುವುದು ಅವಶ್ಯಕತೆ ಇದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ. ಈ ಪ್ರಕರಣದಲ್ಲಿ ಭೂಸ್ವಾಧೀನಕ್ಕೆ ಪ್ರಸ್ತಾಪಿಸಿರುವ ಒಟ್ಟು 15 ಸ್ವತ್ತುಗಳಲ್ಲಿ 5 ಸ್ವತ್ತುಗಳಿಗೆ ಪಾಲಿಕೆಯಲ್ಲಿ ಖಾತಾ ನೋಂದಾವಣಿಯಾಗಿದ್ದು, ಪಿ.ಐ.ಡಿ ಸಂಖ್ಯೆಯನ್ನು ನೀಡಲಾಗಿದೆ. ಉಳಿದ 10 ಸ್ವತ್ತುಗಳಲ್ಲಿ 8 ಸ್ವತ್ತುಗಳಿಗೆ ದಿನಾಂಕ:13-12-1998 ರಂದು ನಗರ ಪಾಲಿಕೆಯಿಂದ ಗುರುತು ಪತ್ರ ನೀಡಲಾಗಿದೆ. ಉಳಿದ 2 ಸ್ವತ್ತುಗಳಿಗೆ ಯಾವುದೇ ದಾಖಲೆಗಳು ಇರುವುದಿಲ್ಲ. ಸ್ವತ್ತಿನಲ್ಲಿರುವ ಅನುಭವದ ಆಧಾರದ ಮೇಲೆ ಸ್ವತ್ತುಗಳ ಅನುಭವದಾರರರನ್ನು ಗುರುತಿಸಲಾಗಿದೆ. ಆದ್ದರಿಂದ, ಭೂಸ್ವಾಧೀನ ಕಾಯ್ದೆಯ ಕಲಂ 5 (ಎ) ವಿಚಾರಣೆಯಲ್ಲಿ ಈ ಎಲ್ಲಾ ಸ್ವತ್ತುಗಳ ಹಕ್ಕು ದಾಖಲೆಗಳನ್ನು ಪರಿಶೀಲಿಸಿ, ಪರಿಹಾರ ಪಾವತಿಸುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ಷರತ್ತಿಗೆ ಒಳಪಡಿಸಿ, ಈ ಕೆಳಕಂಡ 15 ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ತೀರ್ಮಾನಿಸಲಾಗಿದೆ.

ಭೂಸ್ವಾಧೀನ ಪಡಿಸಿಕೊಳ್ಳುತ್ತಿರುವ ಸ್ವತ್ತುಗಳ ವಿವರ:

| ಕ್ರ ಸಂ. | ಸಿ.ಟಿ.ಎಸ್. ಸಂಖ್ಯೆ | ಪಿ.ಐ.ಡಿ ಸಂಖ್ಯೆ | ಖಾತೆದಾರರ/ ಅನುಭವದಾರರ ಹೆಸರು ಶ್ರೀ/ಶ್ರೀಮತಿ | ಸ್ವತ್ತಿನ ಒಟ್ಟು ವಿಸ್ತೀರ್ಣ (ಚ.ಅ.ಗಳಲ್ಲಿ) | ಭೂಸ್ವಾಧೀನ ಪ್ರಸ್ತಾಪಿತ ವಿಸ್ತೀರ್ಣ (ಚ.ಅ.ಗಳಲ್ಲಿ) | | ಷರಾ |
|---|---|---|---|---|---|---|---|
| | | | | | ನಿವೇಶನ | ಕಟ್ಟಡ | |
| 1 | 2 | 3 | 4 | 5 | 6 | 7 | 8 |
| 1 | 247 | 42-02-29 | ಟಿ.ಎಲ್.ಪದ್ಮಾವತಿ, ಮನೋಜ್‌ಕುಮಾರ್ ಭಟ್ಟಾಚಾರ್ಯ ಬಿ.ಸಿ ಮತ್ತು ಸುಮನ್ ಭಟ್ಟಾಚಾರ್ಯ | 1,800.00 | 1,174.31 | 1,065.08 | ಆರ್.ಸಿ.ಸಿ. ಮತ್ತು ಎ.ಸಿ. ಶೀಟ್ ಕಟ್ಟಡ |
| 2 | 945 | 42-52-290/5 ಕ.ವಿ.ಕಾ ಬಡಾವಣೆ | ವಿ.ಆಶಾ ಶಿವಕುಮಾರ್ | 600.00 | 853.00 | 814.74 | ಆರ್.ಸಿ.ಸಿ. ಮತ್ತು ಎ.ಸಿ. ಶೀಟ್ ಕಟ್ಟಡ |
| 3 | 945 | 42-02-6/2 | ತಮ್ಮಯ್ಯಗೌಡ | 2,700.00 | 190.52 | 188.6 | ಎ.ಸಿ. ಶೀಟ್ ಕಟ್ಟಡ |
| 4 | 945 | 42-52-504 ಕ.ವಿ.ಕಾ ಬಡಾವಣೆ | ಕೆ.ರಂಜನ್ | 600.00 | 1140.01 | - | - |

| | | | | | | | |
|---|---|---|---|---|---|---|---|
| 5 | 945 | 42-52-503 ಕ.ವಿ.ಕಾ ಬಡಾವಣೆ | ಜಿ.ಮಹೇಶ್ ಎಮ್. ದೇವಿ | 600.00 | 145.31 | 145.24 | ಆರ್.ಸಿ.ಸಿ. ಕಟ್ಟಡ |
| 6 | ಆರ್.ಪಿ.ಸಿ ಬಡಾವಣೆ, 14ನೇ ಅಡ್ಡರಸ್ತೆ, ರೈಲ್ವೆ ಲೈನ್, ಪೈಪ್‌ಲೈನ್, ಕಾರ್ಡ್ ರಸ್ತೆ | ಖಾತೆ ಆಗಿರುವುದಿಲ್ಲ | ರಾಜು ಬಿನ್ ಹನುಮಂತಯ್ಯ | - | 395.57 | 350.25 | ಎ.ಸಿ.ಶೀಟ್ ಕಟ್ಟಡ ಗುರುತು ಪತ್ರದಂತೆ ಮನೆ ನಂ.53 |
| 7 | ಆರ್.ಪಿ.ಸಿ ಬಡಾವಣೆ, 14ನೇ ಅಡ್ಡರಸ್ತೆ, ರೈಲ್ವೇ ಲೈನ್, ಪೈಪ್‌ಲೈನ್, ಕಾರ್ಡ್ ರಸ್ತೆ | ಖಾತೆ ಆಗಿರುವುದಿಲ್ಲ | ಲಕ್ಷ್ಮಮ್ಮ ಕೋಂ ಚೌಡಪ್ಪ | - | 398.26 | 414.26 | ಎ.ಸಿ.ಶೀಟ್ ಕಟ್ಟಡ ಗುರುತು ಪತ್ರದಂತೆ ಮನೆ ನಂ.51 |
| 8 | ಆರ್.ಪಿ.ಸಿ ಬಡಾವಣೆ, 14ನೇ ಅಡ್ಡರಸ್ತೆ, ರೈಲ್ವೇ ಲೈನ್, ಪೈಪ್‌ಲೈನ್, ಕಾರ್ಡ್ ರಸ್ತೆ | ಖಾತೆ ಆಗಿರುವುದಿಲ್ಲ | ಸೋಮಣ್ಣಕುಟ್ಟಿ ಬಿನ್ ಕೃಷ್ಣಕುಟ್ಟಿ | - | 409.00 | 402.39 | ಎ.ಸಿ.ಶೀಟ್ ಕಟ್ಟಡ ಗುರುತು ಪತ್ರದಂತೆ ಮನೆ ನಂ.50 |
| 9 | ಆರ್.ಪಿ.ಸಿ ಬಡಾವಣೆ, 14ನೇ ಅಡ್ಡರಸ್ತೆ, ರೈಲ್ವೇ ಲೈನ್, ಪೈಪ್‌ಲೈನ್, ಕಾರ್ಡ್ ರಸ್ತೆ | ಖಾತೆ ಆಗಿರುವುದಿಲ್ಲ | ಗೋವಿಂದಪ್ಪ ಬಿನ್ ತೋಪಯ್ಯ | - | 161.46 | - | ಖಾಲಿ ಜಾಗ ಗುರುತು ಪತ್ರದಂತೆ ಮನೆ ನಂ.52 |
| 10 | ಆರ್.ಪಿ.ಸಿ ಬಡಾವಣೆ, 14ನೇ ಅಡ್ಡರಸ್ತೆ, ರೈಲ್ವೇ ಲೈನ್, ಪೈಪ್‌ಲೈನ್, ಕಾರ್ಡ್ ರಸ್ತೆ | ಖಾತೆ ಆಗಿರುವುದಿಲ್ಲ | ರೀಜೀನಾ ಅಲಿಯಾಸ್ ರಬೀನಾ ಕೋಂ ಜೇವಿಯರ್ | - | 419.79 | 437.43 | ಎ.ಸಿ.ಶೀಟ್ ಕಟ್ಟಡ ಗುರುತು ಪತ್ರದಂತೆ ಮನೆ ನಂ.49 |
| 11 | ಆರ್.ಪಿ.ಸಿ ಬಡಾವಣೆ, 14ನೇ ಅಡ್ಡರಸ್ತೆ, ರೈಲ್ವೇ ಲೈನ್, ಪೈಪ್‌ಲೈನ್, ಕಾರ್ಡ್ ರಸ್ತೆ | ಖಾತೆ ಆಗಿರುವುದಿಲ್ಲ | ನಂಜಮ್ಮ ಕೋಂ ತಿಮ್ಮಯ್ಯ | - | 355.21 | 348.57 | ಎ.ಸಿ.ಶೀಟ್ ಕಟ್ಟಡ ಗುರುತು ಪತ್ರ ಇರುವುದಿಲ್ಲ |

| | | | | | | | |
|---|---|---|---|---|---|---|---|
| 12 | ಆರ್.ಪಿ.ಸಿ ಬಡಾವಣೆ, 14ನೇ ಅಡ್ಡರಸ್ತೆ, ರೈಲ್ವೇ ಲೈನ್, ಪೈಪ್‌ಲೈನ್, ಕಾರ್ಡ್ ರಸ್ತೆ | ಖಾತೆ ಆಗಿರುವುದಿಲ್ಲ | ಸರಸ್ವತಿ ಕೋಂ ರಾಮಣ್ಣ | – | 430.56 | 430.34 | ಎ.ಸಿ.ಶೀಟ್ ಕಟ್ಟಡ ಗುರುತು ಪತ್ರದಂತೆ ಮನೆ ನಂ.45 |
| 13 | ಆರ್.ಪಿ.ಸಿ ಬಡಾವಣೆ, 14ನೇ ಅಡ್ಡರಸ್ತೆ, ರೈಲ್ವೇ ಲೈನ್, ಪೈಪ್‌ಲೈನ್, ಕಾರ್ಡ್ ರಸ್ತೆ | ಖಾತೆ ಆಗಿರುವುದಿಲ್ಲ | ಚನ್ನಪ್ಪ ಬಿನ್ ಚನ್ನೇಗೌಡ | – | 322.92 | 322.75 | ಎ.ಸಿ.ಶೀಟ್ ಕಟ್ಟಡ ಗುರುತು ಪತ್ರದಂತೆ ಮನೆ ನಂ.46 |
| 14 | ಆರ್.ಪಿ.ಸಿ ಬಡಾವಣೆ, 14ನೇ ಅಡ್ಡರಸ್ತೆ, ರೈಲ್ವೇ ಲೈನ್, ಪೈಪ್‌ಲೈನ್, ಕಾರ್ಡ್ ರಸ್ತೆ | ಖಾತೆ ಆಗಿರುವುದಿಲ್ಲ | ಮೆಹಬೂಬಿ | – | 602.78 | 602.47 | ಎ.ಸಿ.ಶೀಟ್ ಕಟ್ಟಡ ಯಾವುದೇ ಗುರುತು ಪತ್ರವಿರುವುದಿಲ್ಲ |
| 15 | ಆರ್.ಪಿ.ಸಿ ಬಡಾವಣೆ, 14ನೇ ಅಡ್ಡರಸ್ತೆ, ರೈಲ್ವೇ ಲೈನ್, ಪೈಪ್‌ಲೈನ್, ಕಾರ್ಡ್ ರಸ್ತೆ | ಖಾತೆ ಆಗಿರುವುದಿಲ್ಲ | ಗ್ರೇಸಿ ಕೋಂ ರಾಜು | – | 1,130.22 | 1,129.63 | ಕಟ್ಟಡ ಗುರುತು ಪತ್ರದಂತೆ ಮನೆ ನಂ.42 |
| | | | ಒಟ್ಟು | | **8128.92** | **6651.75** | |

## ಘೋಷ್ವಾರೆ

| ವಾರ್ಡ್ ಹೆಸರು ಮತ್ತು ನಂಬರ್ | ಖಾತಾ ದಾಖಲೆ ಇರುವ ಖಾಸಗಿ ಸ್ವತ್ತುಗಳ ವಿಸ್ತೀರ್ಣ ಚ.ಅಡಿಗಳಲ್ಲಿ | | ಖಾತಾ ದಾಖಲೆ ಇಲ್ಲದಿರುವ ಸ್ವತ್ತುಗಳ ವಿಸ್ತೀರ್ಣ ಚ.ಅಡಿ | | ಒಟ್ಟು ಚ.ಅಡಿ | |
|---|---|---|---|---|---|---|
| | ನಿವೇಶನ | ಕಟ್ಟಡ | ನಿವೇಶನ | ಕಟ್ಟಡ | ನಿವೇಶನ | ಕಟ್ಟಡ |
| ಹಂಪಿನಗರ ವಾರ್ಡ್ ಸಂಖ್ಯೆ-133 (ಹಳೆ ವಾರ್ಡ್ ನಂ.42) | 3,503.15 | 2,212.66 | 4,625.77 | 4,439.09 | 8,128.92 | 6,651.75 |
| ಒಟ್ಟು | **3,503.15** | **2,212.66** | **4,625.77** | **4,439.09** | **8,128.92** | **6,651.75** |

ಮೇಲ್ಕಂಡಂತೆ 1894 ರ ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಲಾಗುತ್ತಿರುವ ಸ್ವತ್ತುಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಅಭಿವೃದ್ಧಿ ಹೊಂದಿದ ಪ್ರದೇಶದಲ್ಲಿರುವುದರಿಂದ, ಕೇಂದ್ರೀಯ ಮೌಲ್ಯಮಾಪನ ಸಮಿತಿಯ ದಿನಾಂಕ:17-04-2007ರ ಸ್ಥಿರಾಸ್ತಿಗಳ

ಮಾರುಕಟ್ಟೆ ಬೆಲೆಯ ಮಾರ್ಗಸೂಚಿ ದರದನ್ವಯ ಚದರ ಅಡಿಗೆ ರೂ.900/- ಗಳಂತೆ ನಿಗದಿಪಡಿಸಿ, ಪಾವತಿಸಬೇಕಾದ ಪರಿಹಾರ ಹಾಗೂ ಇತರೆ ವೆಚ್ಚಗಳನ್ನು ಈ ಕೆಳಗಿನಂತೆ ಲೆಕ್ಕಾಚಾರ ಮಾಡಲಾಗಿದೆ.

**"ಅ"-ಭೂಪರಿಹಾರ ವೆಚ್ಚ**

| ಕ್ರಸಂ. | ವಿವರಣೆ | ಮೊಬಲಗು (ರೂ.ಗಳಲ್ಲಿ) |
|---|---|---|
| 1 | ಎ). ಚ.ಅಡಿ ಒಂದಕ್ಕೆ ರೂ.900/- ರಂತೆ 8,128.92 ಚ.ಅಡಿ ನಿವೇಶನಗಳಿಗೆ ಮೌಲ್ಯ<br>ಬಿ) ಅಭಿಯಂತರರ ವರದಿಯಂತೆ ಸ್ವಾಧೀನಪಡಿಸಿಕೊಳ್ಳಲಾಗುವ ಕಟ್ಟಡದ ಮೌಲ್ಯ (ವಿಸ್ತೀರ್ಣ 6,651.75 ಚ.ಅಡಿ)<br>ಒಟ್ಟು | 73,16,028/-<br>30,42,962/-<br>------------<br>**1,03,58,990/-** |
| 2 | 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(1)(ಎ) ರ ಅನ್ವಯ ಮಾರುಕಟ್ಟೆ ಬೆಲೆ ಮೇಲೆ ಶೇಕಡಾ 12 ರಂತೆ ಹೆಚ್ಚುವರಿ ಮಾರುಕಟ್ಟೆ ಬೆಲೆ (ಒಂದು ವರ್ಷಕ್ಕೆ) | 12,43,078/- |
| 3 | ಈ ಮೊಬಲಗಿಗೆ 1894 ರ ಭೂಸ್ವಾಧೀನ ಕಾಯ್ದೆಯ ಕಲಂ.23(2) ರ ಅನ್ವಯ ಶೇಕಡ 30 ರಂತೆ ಶಾಸನ ಬದ್ಧ ಭತ್ಯೆ | 31,07,697/- |
| | **ಒಟ್ಟು (1+2+3)** | **1,47,09,765/-** |

**"ಆ" - ಇತರೆ ವೆಚ್ಚ**

| | | |
|---|---|---|
| 4 | ಸಿಬ್ಬಂದಿ ವೆಚ್ಚ ಶೇಕಡ 10 ರಷ್ಟು | ಕೈಬಿಟ್ಟಿದೆ |
| 5 | ಆಡಿಟ್ ವೆಚ್ಚ ಶೇಕಡ 1 ರಷ್ಟು | ಕೈಬಿಟ್ಟಿದೆ |
| 6 | ಪ್ರಕಟಣಾ ವೆಚ್ಚ (ಅಂದಾಜು) | 2,00,000 |
| | **(ಅ +ಆ) ಒಟ್ಟು** | **1,49,09,765/-** |

ಷರಾ: ದಿನಾಂಕ:5-09-1963 ರ ಸರ್ಕಾರದ ಅಧಿಸೂಚನೆ ಸಂಖ್ಯೆ: FD 126 RFC 60, ರಂತೆ ಯಾವುದೇ ಸ್ಥಳೀಯ ಸಂಸ್ಥೆಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಭೂಸ್ವಾಧೀನಾಧಿಕಾರಿಯ ನೇಮಕವಾಗಿದ್ದು, ಸದರಿ ಕಚೇರಿಯ ಸಿಬ್ಬಂದಿ ವೆಚ್ಚವನ್ನು ಆ ಸ್ಥಳೀಯ ಸಂಸ್ಥೆಯೇ ಭರಿಸುತ್ತಿದ್ದಲ್ಲಿ, ಮೇಲಿನ ಕ್ರಮ ಸಂಖ್ಯೆ 4 ಮತ್ತು 5 ರಲ್ಲಿನ ವೆಚ್ಚಗಳನ್ನು ವಿಧಿಸುವ ಅವಶ್ಯಕತೆ ಇಲ್ಲವೆಂಬ ಆದೇಶವಿರುವುದರಿಂದ, ಈ ಎರಡೂ ವೆಚ್ಚಗಳನ್ನು ಒಟ್ಟು ಭೂಸ್ವಾಧೀನ ಪರಿಹಾರ ಲೆಕ್ಕಾಚಾರದಿಂದ ಕೈಬಿಡಲಾಗಿದೆ.

**(ರೂ. ಒಂದು ಕೋಟಿ ನಲವತ್ತೊಂಭತ್ತು ಲಕ್ಷದ ಒಂಭತ್ತು ಸಾವಿರದ ಏಳು ನೂರ ಅರವತ್ತೈದು ಮಾತ್ರ)**

ಮೇಲೆ ನಮೂದಿಸಿರುವ ಸ್ವತ್ತುಗಳನ್ನು ಭೂಸ್ವಾಧೀನ ಕಾಯ್ದೆ, 1894 ರನ್ವಯ ಭೂಸ್ವಾಧೀನಪಡಿಸಿಕೊಳ್ಳಲು ಹಾಗೂ ಇದಕ್ಕೆ ತಗಲುವ ಭೂಪರಿಹಾರ ಮತ್ತು ಇತರೆ ವೆಚ್ಚಗಳು ಸೇರಿ ಒಟ್ಟು ರೂ. 1,49,09,765/- (ರೂ. ಒಂದು ಕೋಟಿ ನಲವತ್ತೊಂಭತ್ತು ಲಕ್ಷದ ಒಂಭತ್ತು ಸಾವಿರದ ಏಳು ನೂರ ಅರವತ್ತೈದು ಮಾತ್ರ) ಗಳನ್ನು ಪಾಲಿಕೆಯ 2011-12ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನದಿಂದ ಭರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-09-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:18-10-2011 ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:19-11-2011ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:19-11-2011ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಚರ್ಚೆಯ ನಂತರ ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:19-11-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 16 (223)/2011-12

ಟಿಪ್ಪಣಿಯಲ್ಲಿ ವಿವರಿಸುವಂತೆ, ಶ್ರೀ.ಎಂ.ನರಸಿಂಹ ಮೂರ್ತಿ S/o ಎಸ್.ಸಿ.ಮುನಿಯಪ್ಪ ರವರು ಮನವಿ ಸಲ್ಲಿಸಿ, ಅದರಲ್ಲಿ 2ನೇ ಕ್ರಾಸ್, ಶ್ರೀರಾಮಪುರಂ, ಎ.ಡಿ.ಬ್ಲಾಕ್ ನಲ್ಲಿರುವ $\frac{10+20}{2}$ X 66=990 ಚದರ ಅಡಿ ಅಳತೆಯ ಮಾರ್ಜಿನ್ ಜಾಗವನ್ನು ನಗರ ಸಭೆಯ ದಿನಾಂಕ:14-12-1962 ರ ನಡವಳಿ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಎಲ್ಎಂಎ/198/ಎಂಎನ್‌ಜಿ/65, ದಿನಾಂಕ:02-12-1966ರಂತೆ ತಮ್ಮ ತಂದೆ ಶ್ರೀ.ಎಸ್.ಸಿ.ಮುನಿಯಪ್ಪ ರವರಿಗೆ ಮಂಜೂರಾಗಿದ್ದು, ಇದಕ್ಕೆ ಕಟ್ಟಬೇಕಾದ ಹಣವನ್ನು ತಾವು ಡಿ.ಡಿ ಮುಖಾಂತರ ದಿ:11-10-1972 ರಲ್ಲಿ ಪಾವತಿ ಮಾಡಿದ್ದು, ತಮಗೆ ಇದುವರೆವಿಗೂ ಮಂಜೂರು ಮಾಡಿರುವ ಜಾಗವನ್ನು ಕ್ರಯ ಪತ್ರ ನೊಂದಣಿ ಮಾಡಿಕೊಟ್ಟಿಲ್ಲವೆಂದು ತಿಳಿಸಿರುತ್ತಾರೆ.

ದಿನಾಂಕ:22-06-2011 ರಂದು ಭೂಮಾಪಕರೊಂದಿಗೆ ಸ್ಥಳ ಪರಿಶೀಲಿಸಲಾಯಿತು. ಪ್ರಸ್ತುತ ಜಾಗವು ಕಡತದಲ್ಲಿರುವ ನಕ್ಷೆಯಲ್ಲಿ ತೋರಿಸಿರುವಂತೆ (ಕನ್ಸ್‌ರ್‌ವೆನ್ಸಿ) ಮತ್ತು ದೊಡ್ಡ ಮೋರಿಯ ಮೇಲೆ ನಿರ್ಮಿಸಲಾಗಿರುವ ರಸ್ತೆಗೆ ಮತ್ತು ಅರ್ಜಿದಾರರ ಮನೆಯ ಮಧ್ಯಭಾಗದಲ್ಲಿ ಇರುತ್ತದೆ. ಈ ಪ್ರದೇಶವು ವಾಸಿಸುವ ಮನೆಗಳ ಮಧ್ಯೆಭಾಗದಲ್ಲಿದ್ದು, ಸಾರ್ವಜನಿಕರ ಹಾಗೂ ಪಾಲಿಕೆಯ ಉದ್ದೇಶಗಳಿಗೆ ಉಪಯೋಗಿಸಲು ಯೋಗ್ಯವಾದ ಜಾಗವೆಂಬುದಾಗಿ ಕಂಡು ಬಂದಿರುವುದಿಲ್ಲ.

ಅರ್ಜಿದಾರರಿಗೆ ಈ ಪ್ರದೇಶವು ಮಂಜೂರಾತಿ ನೀಡಬೇಕೆಂದು ದಿನಾಂಕ:14-02-1962 ರಲ್ಲಿ ನಗರ ಪಾಲಿಕೆಯ ಸಭೆಯಲ್ಲಿ ಠರಾವು ಆಗಿದ್ದು, ದಿನಾಂಕ:02-12-1966 ರಲ್ಲಿ ಮಂಜೂರಾತಿ ನೀಡಲು ಸರ್ಕಾರದ ಆದೇಶವಾಗಿರುತ್ತದೆ. ಈ ಪ್ರದೇಶಕ್ಕೆ ಜಮೀನಿನ ಖಿಮ್ಮತ್ತು ರೂ.1,650/-ಸಂದಾಯ ಮಾಡಲು ಅರ್ಜಿದಾರರಿಗೆ ತಿಳಿಸಲಾಗಿದ್ದು, ಅರ್ಜಿದಾರರು ಡಿ.ಡಿ.ಸಂಖ್ಯೆ:(722490) ದಿ:11-10-1972 ರಲ್ಲಿ ಕೆನರಾ ಬ್ಯಾಂಕ್ ಶಾಖೆಯಲ್ಲಿ ಪಾಲಿಕೆಯ ಖಾತೆಗೆ ಜಮಾ ಮಾಡಿರುತ್ತದೆ ಎಂದು ತಿಳಿಸಿರುತ್ತಾರೆ.

ಮಂಜೂರಾತಿಗೆ ಸಂಬಂಧಿಸಿದ ಮೂಲ ಕಡತವು ಲಭ್ಯವಿರುವುದಿಲ್ಲ ದಿನಾಂಕ:02-09-1993 ರಲ್ಲಿ ಪಾಲಿಕೆಯ ಮುಖ್ಯ ಲೆಕ್ಕಾಧಿಕಾರಿಯವರು ಕೆನರಾ ಬ್ಯಾಂಕ್‌ನ ವ್ಯವಸ್ಥಾಪಕರಿಗೆ ಪತ್ರ ಬರೆದಿದ್ದು, ಅರ್ಜಿದಾರರು ಹೇಳಿರುವ ಹಾಗೆ ಹಣ ಸಂದಾಯ ಆಗಿರುವ ಬಗ್ಗೆ ಪುಷ್ಟೀಕರಿಸಲು ಕೋರಿರುತ್ತಾರೆ. ಇದಕ್ಕೆ ನೀಡಲಾಗಿರುವ ಉತ್ತರದ ಬಗ್ಗೆ ಯಾವುದೇ ದಾಖಲೆಗಳು ಕಡತದಲ್ಲಿ ಲಭ್ಯವಿರುವುದಿಲ್ಲ ಅರ್ಜಿದಾರನನ್ನು ವಿಚಾರಿಸಲಾಗಿ ಬ್ಯಾಂಕ್‌ನಲ್ಲಿರುವ 10 ವರ್ಷಗಳ ಹಿಂದಿನ ದಾಖಲೆಗಳನ್ನು ಲಭ್ಯವಿರುವುದಿಲ್ಲ ಎಂಬುದಾಗಿ ಬ್ಯಾಂಕ್ ವ್ಯವಸ್ಥಾಪಕರು ತಿಳಿಸಿರುತ್ತಾರೆಂದು ಸ್ಥಳ ಪರಿಶೀಲನೆಯ ಸಮಯದಲ್ಲಿ ತಿಳಿಸಿರುತ್ತಾರೆ.

ಪ್ರಸ್ತುತ ಜಾಗವು ಅರ್ಜಿದಾರರ ಮನೆಗೆ ಲಗತ್ತಾಗಿದ್ದು, ಸಾರ್ವಜನಿಕರ ಉದ್ದೇಶಕ್ಕೆ ಬಳಸಲು ಸಹ ಯೋಗ್ಯವಾದ ಜಾಗವಲ್ಲ. ಈ ಹಿಂದೆ ಬೆಂಗಳೂರು ನಗರ ಪಾಲಿಕೆಯ ನಿರ್ಣಯದ ನಂತರ ಸರ್ಕಾರವು ಸಹ ಆದೇಶಿಸಿದ್ದು, ಮೂಲ ಕಡತ ಹಾಗೂ ಹಣ ಸಂದಾಯ ಮಾಡಿರುವ ದಾಖಲೆಗಳು ಲಭ್ಯವಿಲ್ಲದೇ ಇರುವ ಸನ್ನಿವೇಶವಾಗಿರುತ್ತದೆ.

ದಕ್ಷಿಣ ವಲಯದಲ್ಲಿ ಪತ್ರಕರ್ತರ ಬಡಾವಣೆಯಲ್ಲಿ ಇಂತಹ ಪ್ರಕರಣದಲ್ಲಿ ಈಗಿನ ಮಾರುಕಟ್ಟೆ ದರದ ಅನ್ವಯ ಪಾಲಿಕೆಯ ಠರಾವು ಮಾಡಲಾಗಿರುತ್ತದೆ.

. . . .2

ಮೇಲ್ಕಂಡ ಪ್ರದೇಶದ ಸರ್ಕಾರದ 2007ರ ಮಾರ್ಗಸೂಚಿ ದರಗಳಂತೆ ಚದರ ಅಡಿಗೆ ರೂ.1600/- ರಂತೆ ಇದ್ದು, ಇದಕ್ಕೆ 10% ಹೆಚ್ಚಿಸಿದಾಗ ಅಂದರೆ ರೂ.1,760/-ಗಳಾಗುತ್ತದೆ. ಇದರಂತೆ ಲೆಕ್ಕಚಾರ ಮಾಡಲಾಗಿ ರೂ.1760x990 =17,42,400/- ಗಳಾಗುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಅರ್ಜಿದಾರರಾದ ಶ್ರೀ.ಎನ್.ನರಸಿಂಹಮೂರ್ತಿ ರವರಿಗೆ ಸದರಿ ಜಾಗಕ್ಕೆ ಕ್ರಯ ಪತ್ರ ಮಾಡಿಕೊಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:24-07-2011 ರ ಟಿಪ್ಪಣಿ ಹಾಗೂ ಸದರಿ ಜಾಗಕ್ಕೆ ಪ್ರಸಕ್ತ ಮಾರುಕಟ್ಟೆ ದರವನ್ನು ನಿಗಧಿಪಡಿಸಿ ಕ್ರಯಕ್ಕೆ ನೀಡುವಂತೆ ದಿನಾಂಕ:24-07-2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:02-08-2011ರ ನಿರ್ಣಯ ಹಾಗೂ ಪ್ರಸ್ತಾಪಿತ ಸ್ಥಳದಲ್ಲಿನ ಮುಂಭಾಗದಲ್ಲಿ (ದೊಡ್ಡ ಮೋರಿ ಕಡೆ) 5 (ಐದು) ಅಡಿ ಜಾಗ ಬಿಟ್ಟು ಉಳಿಕೆ ಜಾಗವನ್ನು ಕ್ರಯಕ್ಕೆ ನೀಡುವ ಮಾರ್ಪಾಡಿನೊಂದಿಗೆ ದಿನಾಂಕ:02-08-2011 ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಪ್ರಸ್ತಾವನೆಯನ್ನು ಕೈಬಿಡಲು ಸೂಚಿಸಿದರು.

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪ್ರಸ್ತಾವನೆಯನ್ನು ಕೈಬಿಡಲಾಗಿದೆ".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 17 (225)/2011-12

ಟಿಪ್ಪಣಿಯಲ್ಲಿ ವಿವರಿಸುವಂತೆ, ಹಳೇ ವಾರ್ಡ್ ಸಂಖ್ಯೆ:70, ಜಲಕಂಠೇಶ್ವರ ಮುಖ್ಯರಸ್ತೆ, ಆಸ್ತಿ ಸಂಖ್ಯೆ:348 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 3420 ಚ.ಅಡಿಗಳ ನಿವೇಶನ ಹಾಗೂ 805 ಚ.ಅಡಿ ಕಟ್ಟಡವನ್ನು ಮೆ॥ಶಾಂತ ಜೀವ ಜ್ಯೋತಿ ಲೆಪ್ರಸಿ ಕ್ಲಿನಿಕ್ ರವರಿಗೆ ಸರ್ಕಾರದ ಆದೇಶ ಸಂಖ್ಯೆ:ನಅಇ/22/ಎಂಎನ್‌ಜಿ/96, ದಿನಾಂಕ:28-08-2000ರ ಆದೇಶದಂತೆ ದಿನಾಂಕ:17-05-1994 ರಿಂದ 17-05-2004 ರವರೆಗೆ ವಾರ್ಷಿಕವಾಗಿ ರೂ.1,176.26 ಗಳ ಗುತ್ತಿಗೆ ಮೊತ್ತ ನಿಗಧಿಪಡಿಸಿ, ಪ್ರತಿ ವರ್ಷ ಶೇ:10%ರಷ್ಟು ಹೆಚ್ಚಿಸುವ ಷರತ್ತಿನೊಂದಿಗೆ ಅನುಮೋದನೆ ನೀಡಿದ್ದು, ಗುತ್ತಿಗೆ ನೀಡಿರುವ ಅವಧಿಗೆ ಸಂಪೂರ್ಣ ಗುತ್ತಿಗೆ ಮೊತ್ತವು ಪಾವತಿಯಾಗಿರುತ್ತದೆ.

ಗುತ್ತಿಗೆ ಅವಧಿಯ ದಿನಾಂಕ:17-05-2004 ರಂದು ಮುಕ್ತಾಯವಾದ ಕಾರಣ, ಪುನಃ 30-ವರ್ಷಗಳ ಅವಧಿಗೆ ನವೀಕರಿಸಲು ಕೋರಿ ಸಂಸ್ಥೆಯವರು ಅರ್ಜಿ ಸಲ್ಲಿಸಿದ್ದು, ಗುತ್ತಿಗೆ ಅವಧಿ ನವೀಕರಿಸಲು ಕೋರಿರುವ ನಿವೇಶನದ ಪ್ರಸಕ್ತ ಮಾರುಕಟ್ಟೆ ದರವು ಚದರ ಅಡಿ **1ಕ್ಕೆ ರೂ.2000/-** ಗಳಿದ್ದು, ನಿವೇಶನದ ಮೌಲ್ಯ **ರೂ.68,40,000/-ಗಳು** ಮತ್ತು ಕಟ್ಟಡ ಮೌಲ್ಯ **ರೂ.3,70,300/- ಗಳಿದ್ದು,** (ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ಶಾಂತಿನಗರ) ಉಪವಿಭಾಗ ರವರ ವರದಿಯಂತೆ) ಒಟ್ಟು ಮೌಲ್ಯ **ರೂ.72,10,300/-** ಗಳಾಗುತ್ತದೆ. ಇದರಂತೆ ಶೇ:10%ರಂತೆ ಪರಿಗಣಿಸಿದಲ್ಲಿ, ವಾರ್ಷಿಕ **ರೂ.7,21,030/-** ಗಳಾಗಲಿದ್ದು, ಮಾಸಿಕ **ರೂ.60,086/-** ಗಳಾಗುತ್ತದೆ.

ಆದರೆ, ದಿನಾಂಕ:01-03-2002ರ ಸುತ್ತೋಲೆಯ ಕ್ರಮ ಸಂಖ್ಯೆ:5 ರ ಪ್ರಕಾರ ಅಂಗವಿಕಲರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಹಾಗೂ 100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದಾಯ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಅವಕಾಶ ಕಲ್ಪಿಸಲಾಗಿದೆ.

ಸದರಿ ಕಟ್ಟಡವು ಜಲಕಂಠೇಶ್ವರನಗರ ಕೊಳಚೆ ಪ್ರದೇಶದಲ್ಲಿದ್ದು, ಸದರಿ ಕಟ್ಟಡದಲ್ಲಿ ಲೆಪ್ರಸಿ ಖಾಯಿಲೆಗೆ ಒಳಪಟ್ಟಿರುವ ರೋಗಿಗಳ ಚಿಕಿತ್ಸೆ, ಗಣತಿ ಮತ್ತು ಪುನರ್ವಸತಿ ಚಟುವಟಿಕೆಗಳು ನಡೆಯುತ್ತಿರುವುದರಿಂದ, ರಿಯಾಯಿತಿ ದರವನ್ನು ಪರಿಗಣಿಸಬಹುದಾಗಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಶಾಂತ ಜೀವ ಜ್ಯೋತಿ ಲೆಪ್ರಸಿ ಕ್ಲಿನಿಕ್ ರವರಿಗೆ ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ ಗುತ್ತಿಗೆ ಕರಾರು ನೊಂದಾಯಿಸುವ ಹಿಂದಿನ ದಿನಾಂಕದವರೆಗೆ ಈ ಹಿಂದೆ ಸರ್ಕಾರವು ನಿಗಧಿಪಡಿಸಿದ ದರದಂತೆ ಹಾಗೂ ಕರಾರು ನೊಂದಾಯಿಸುವ ದಿನಾಂಕದಿಂದ 5-ವರ್ಷಗಳ ಅವಧಿಗೆ ಗುತ್ತಿಗೆ ಮೊತ್ತ ನಿಗಧಿಪಡಿಸಿ, ನವೀಕರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:24-07-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:02-08-2011ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪುತ್ತಾ, ಸಂಸ್ಥೆಯು ಸಲ್ಲಿಸುತ್ತಿರುವ

. . . .2

ಸೇವೆಯನ್ನು ಪರಿಗಣಿಸಿ ವಾರ್ಷಿಕ ರೂ.3600/- (ಮೂರು ಸಾವಿರದ ಆರು ನೂರು) ಗಳಿಗೆ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 26-09-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಹಾಲಿ ಇರುವ 805 ಚ.ಅ. ಕಟ್ಟಡವನ್ನು ಹೊರತುಪಡಿಸಿ, ಖಾಲಿ ಜಾಗವು ನಗರ ಪಾಲಿಕೆಗೆ ಅವಶ್ಯಕತೆ ಇರುವುದರಿಂದ, ಪುನರ್ ಪರಿಶೀಲಿಸಿ ಮಂಡಿಸಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಕಡತವನ್ನು ಕಳುಹಿಸುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಹಾಲಿ ಇರುವ 805 ಚ.ಅ. ಕಟ್ಟಡವನ್ನು ಹೊರತುಪಡಿಸಿ, ಖಾಲಿ ಜಾಗವು ನಗರ ಪಾಲಿಕೆಗೆ ಅವಶ್ಯಕತೆ ಇರುವುದರಿಂದ, ಪುನರ್ ಪರಿಶೀಲಿಸಿ ಮಂಡಿಸಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಕಡತವನ್ನು ಕಳುಹಿಸುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 18 (226)/2011-12

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಜಗಜೀವನ್‌ರಾಂನಗರ ವಾರ್ಡ್ ನಂ.138, ಚೆಲುವಾದಿಪಾಳ್ಯ ಮುಖ್ಯರಸ್ತೆಯಲ್ಲಿರುವ 58X30 ಅಡಿ ವಿಸ್ತೀರ್ಣದ ಖಾಲಿ ಜಾಗವನ್ನು ಶ್ರೀ.ಮಡಿವಾಳ ಸೇವಾ ಸಂಘ ಹಾಗೂ ಶ್ರೀ.ರಾಜರಾಜೇಶ್ವರಿ ಯಲ್ಲಮ್ಮ ದೇವಿ ದೇವಸ್ಥಾನ ಸಮಿತಿಗೆ ದೇವಸ್ಥಾನಕ್ಕಾಗಿ 5 ವರ್ಷಗಳ ಅವಧಿಗೆ ದಿನಾಂಕ:11-08-1977 ರಲ್ಲಿ ಮಾಸಿಕ ರೂ.10/- ರಂತೆ ಗುತ್ತಿಗೆಗೆ ನೀಡಿದ್ದು, ನಂತರ ದಿನಾಂಕ:23-12-1992 ರಂದು ನಡೆದ ಪಾಲಿಕೆ ಸಭೆಯಲ್ಲಿ ಸದರಿ ಜಾಗವನ್ನು ರೂ.101/- ಗಳಿಗೆ ಮಾರಾಟ ಮಾಡಲು (ವಿಷಯ ಸಂಖ್ಯೆ:18 (91)) ತೀರ್ಮಾನವಾಗಿದ್ದು, ಇದರ ಬಗ್ಗೆ ನಂತರ ನಡೆದ ಪತ್ರ ವ್ಯವಹಾರಗಳು ಕಡತದಲ್ಲಿ ಇರುವುದಿಲ್ಲ ಎಂದು ಕಂದಾಯ ಅಧಿಕಾರಿ (ಚಾಮರಾಜಪೇಟೆ) ತಿಳಿಸಿರುತ್ತಾರೆ.

ಈ ಮಧ್ಯೆ ಸದರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲಾಗಿದ್ದು, ದಿನಾಂಕ:19-03-1993ರ ಸರ್ಕಾರದ ಪತ್ರದಲ್ಲಿ ಕೆಲವು ಸ್ಪಷ್ಟೀಕರಣವನ್ನು ಕೋರಲಾಗಿದ್ದು, ಸದರಿ ಸ್ಪಷ್ಟೀಕರಣಕ್ಕೆ ಉತ್ತರ ನೀಡಲಾಗಿದೆಯೇ ಎಂಬುದು ಕಡತದಲ್ಲಿ ವ್ಯಕ್ತವಾಗಿರುವುದಿಲ್ಲ.

ಪ್ರಸ್ತುತ: ಸದರಿ ದೇವಸ್ಥಾನವು ವಾರ್ಡ್ ನಂ.138, ಜಗಜೀವನ್‌ರಾಂನಗರ ಪ್ರದೇಶ ವ್ಯಾಪ್ತಿಗೆ ಬಂದಿದ್ದು, ದಿನಾಂಕ:19-07-2010 ರಂದು ಕೆ.ಪಿ.ಪಿ. ಕಾಯ್ದೆ ಸೆಕ್ಷನ್ 4(1) ಪ್ರಕಾರ ನೋಟೀಸ್ ನೀಡಲಾಗಿರುತ್ತದೆ. ದೇವಸ್ಥಾನದ ಮುಖ್ಯ ಕಾರ್ಯದರ್ಶಿ ರವರು ದಿನಾಂಕ:12-08-2010 ರಂದು ಮನವಿ ನೀಡಿ ಸದರಿ ಜಾಗವನ್ನು ಮಡಿವಾಳ ಸೇವಾ ಸಮಾಜ ಹಾಗೂ ಶ್ರೀ.ರಾಜರಾಜೇಶ್ವರಿ ಯಲ್ಲಮ್ಮ ದೇವಿ ದೇವಸ್ಥಾನ ಸಮಿತಿಯವರಿಗೆ ನೊಂದಾಯಿಸಿಕೊಡಲು ಕೋರಿರುತ್ತಾರೆ ಹಾಗೂ ಚಾಮರಾಜಪೇಟೆ ಶಾಸಕರಾದ ಶ್ರೀ.ಬಿ.ಜೆಡ್. ಜಮೀರ್ ಅಹಮದ್ ಖಾನ್ ರವರು ಸದರಿ ಜಾಗದ ಗುತ್ತಿಗೆಯನ್ನು ನವೀಕರಿಸಿ ಕ್ರಯ ಮಾಡಿಕೊಡಬೇಕೆಂದು ಕೋರಿರುತ್ತಾರೆ.

ಕಂದಾಯಾಧಿಕಾರಿ ಚಾಮರಾಜಪೇಟೆ ರವರು ಸಹ ಕಂದಾಯ ಅಧಿಕಾರಿ (ಜಗಜೀವನ್‌ರಾಂನಗರ) ರವರೊಂದಿಗೆ ತಪಾಸಣೆ ಮಾಡಿದ್ದು, ಕಡತದಲ್ಲಿ ಮಂಡಿಸಿರುವ ನಕ್ಷೆಯಂತೆ ದೇವಸ್ಥಾನ ವರ್ಗದವರು 58 X 30 ಅಡಿ ಅಳತೆಯ ನಿವೇಶನದಲ್ಲಿ ಯಲ್ಲಮ್ಮ ದೇವಿ ದೇವಸ್ಥಾನ ನಿರ್ಮಿಸಿದ್ದು, ಟಿ.ಸಿ.ಎಂ.ರಾಯನ್ ರಸ್ತೆಗೆ ಅಭಿಮುಖವಾಗಿ 6 ಅಂಗಡಿ ಮಳಿಗೆಗಳನ್ನು ನಿರ್ಮಿಸಿರುತ್ತಾರೆ. ಸದರಿ ಅಂಗಡಿ ಮಳಿಗೆಗಳಿಂದ ಬಂದ ಆದಾಯವನ್ನು ದೇವಸ್ಥಾನವನ್ನು ಅಭಿವೃದ್ಧಿಪಡಿಸಲು ಉಪಯೋಗಿಸಲಾಗುತ್ತಿದೆ ಎಂಬುದಾಗಿ ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ದಿನಾಂಕ:29-07-2011 ರಂದು ಸ್ಥಳ ಪರಿಶೀಲಿಸಲಾಯಿತು. 58 X 30 ಪ್ರದೇಶದಲ್ಲಿ ದೇವಸ್ಥಾನ ಹಾಗೂ ಅರ್ಚಕರ ವಾಸದ ಮನೆ ಮತ್ತು ರಸ್ತೆ ಮುಂಭಾಗದಲ್ಲಿ ಆರು ಅಂಗಡಿಗಳನ್ನು ನಿರ್ಮಿಸಿದ್ದು, ಟೈಲರಿಂಗ್ ಶಾಪ್, ಟೀ ಸ್ಟಾಲ್, ಡ್ರೈ ಕ್ಲೀನರ್ ಅಂಗಡಿ, ಮೊಬೈಲ್ ಷೋರೂಂ ಬಾಡಿಗೆಗೆ ನೀಡಲಾಗಿದ್ದು, ಕೊನೆಯ ಅಂಗಡಿ ದೇವಸ್ಥಾನದ ಉಪಯೋಗಕ್ಕಾಗಿ ಇರುತ್ತದೆ. ಇದರಿಂದ ಬರುವ ಆದಾಯದಲ್ಲಿ ದೇವಸ್ಥಾನದ ಅಭಿವೃದ್ಧಿಗೆ ಉಪಯೋಗಿಸಲಾಗುತ್ತಿದೆ ಎಂದು ತಿಳಿಸಿರುತ್ತಾರೆ.

ಸರ್ಕಾರದ 2007ರ ಮಾರ್ಗಸೂಚಿ ದರದಂತೆ ಚದರ ಅಡಿ ಒಂದಕ್ಕೆ ರೂ.3000/- ಗಳಾಗಿದ್ದು, ಇದರಂತೆ ಲೆಕ್ಕಾಚಾರ ಮಾಡಲಾಗಿ 58X30=1740 ಚದರ ಅಡಿಗಳು ಸ್ವತ್ತಿನ ವಿಸ್ತೀರ್ಣವಾಗಿದ್ದು, ಅದರಂತೆ

. . . .2

3000 X 1740=ರೂ.52,20,000/- ಗಳಾಗಿದ್ದು, ಇದರಂತೆ ಶೇಕಡ 10 ರಷ್ಟು ವಾರ್ಷಿಕ ಗುತ್ತಿಗೆ ಮೊತ್ತ ರೂ.5,22,000/-ಗಳಾಗಲಿದ್ದು ಹಾಗೂ ಮಾಸಿಕ ಬಾಡಿಗೆ ರೂ.43,500/-ಗಳಾಗುತ್ತದೆ.

ದಿನಾಂಕ:01-03-2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ, ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇಕಡ 100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಭಾಗಶ: ಪ್ರದೇಶ ವಾಣಿಜ್ಯ ಚಟುವಟಿಕೆಗಳಿಗೆ ಉಪಯೋಗಿಸುತ್ತಿರುವುದರಿಂದ ಹಿಂದಿನ ಮಾಸಿಕ ದರವನ್ನು ಹೆಚ್ಚಿಸಿ ಸದರಿ ಯಲ್ಲಮ್ಮದೇವಿ ದೇವಸ್ಥಾನ ಸಮಿತಿಗೆ ಗುತ್ತಿಗೆ ಕರಾರು ನೋಂದಾಯಿಸಿದ ದಿನಾಂಕದಿಂದ 5 ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:12-08-2011 ರ ಟಿಪ್ಪಣಿ ಹಾಗೂ ಗುತ್ತಿಗೆದಾರರು ಸದರಿ ಸ್ವತ್ತಿನ ಭಾಗಶ: ಪ್ರದೇಶದಲ್ಲಿ ವಾಣಿಜ್ಯ ಮಳಿಗೆಗಳನ್ನು ನಡೆಸುತ್ತಿದ್ದು, ಪಾಲಿಕೆಯ ಆದಾಯದ ಹಿತದೃಷ್ಟಿಯಿಂದ ಗುತ್ತಿಗೆ ದರವನ್ನು ಹೆಚ್ಚಿಸುವ ಷರತ್ತಿಗೊಳಪಡಿಸಿ ಗುತ್ತಿಗೆ ಅವಧಿಯನ್ನು ನವೀಕರಿಸಲು ಮಂಡಿಸಿರುವ ಆಯುಕ್ತರವರ ದಿನಾಂಕ:12-08-2011 ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:06-09-2011 ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.500/- (ಐದು ನೂರು) ಗಳ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-10-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-10-2011ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:24-10-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

## ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 20 (233)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:158 (ಹಳೆದು-41) ಕಸ್ತೂರಿಬಾ ನಗರದಲ್ಲಿರುವ ಪಾಲಿಕೆ ವಸತಿಗೃಹದಲ್ಲಿ ಪೌರಕಾರ್ಮಿಕರಾದ ಶ್ರೀ.ನರಸಿಂಹ ಮತ್ತು ಶ್ರೀಮತಿ.ಮುತ್ಯಾಲಮ್ಮ ರವರು ವಾಸ ಮಾಡುತ್ತಿದ್ದು, ಸದರಿ ವಸತಿಗೃಹದ ಕಟ್ಟಡವು ದಿನಾಂಕ:02-10-2000 ರಂದು ಕುಸಿದು ಬಿದ್ದ ಕಾರಣ, ಅರ್ಜಿದಾರರಿಗೆ ಪರ್ಯಾಯವಾಗಿ ದೀಪಾಂಜಲಿನಗರದಲ್ಲಿ 15 X 20 ಅಡಿಗಳ ಜಾಗವನ್ನು ಹಂಚಿಕೆ ಮಾಡಿದ್ದು, ಸದರಿ ನಿವೇಶನಕ್ಕೆ ಖಾತಾ ನೊಂದಾಯಿಸಿಕೊಂಡು ಹಂಚಿಕೆದಾರರು ಕಂದಾಯವನ್ನು ಪಾವತಿಸಿರುತ್ತಾರೆ. ಅರ್ಜಿದಾರರು ಸದರಿ ನಿವೇಶನದ ಮೇಲೆ ಸಾಲವನ್ನು ಪಡೆದು ಮನೆ ನಿರ್ಮಾಣ ಮಾಡಲು ಹೋದಾಗ ಪ್ರಸ್ತುತ ಸ್ವತ್ತಿನ ಹಕ್ಕುದಾರಿಕೆ ಬಗ್ಗೆ ಖಾಸಗಿಯವರು ಮಾನ್ಯ ಉಚ್ಚನ್ಯಾಯಾಲಯಕ್ಕೆ ರಿಟ್ ಅರ್ಜಿಗಳ ಸಂಖ್ಯೆ:23635/98 (ಹಾಗೂ ಇತರೆ ಅರ್ಜಿಗಳು) ಸಲ್ಲಿಸಿದ್ದು, ನ್ಯಾಯಾಲಯವು ದಿನಾಂಕ:05-09-2002ರಲ್ಲಿ ಪ್ರಸ್ತುತ ಜಮೀನು ಖಾಸಗಿಯವರ ಸ್ವತ್ತು ಎಂದು ತೀರ್ಮಾನಿಸಿ ಆದೇಶ ಹೊರಡಿಸಿದ್ದು, ನಗರಪಾಲಿಕೆ ಮನವಿಯನ್ನು ರದ್ದು ಮಾಡಿರುತ್ತದೆ ಎಂಬುದಾಗಿ ವಲಯಾಧಿಕಾರಿಗಳ ವರದಿಯಿಂದ ತಿಳಿದು ಬರುತ್ತದೆ. ಈ ಹಿನ್ನಲೆಯಲ್ಲಿ, ಸದರಿ ಹಂಚಿಕೆದಾರರು ಮನವಿ ಸಲ್ಲಿಸಿ, ಕಸ್ತೂರಿಬಾ ನಗರದಲ್ಲಿ ಈಗಾಗಲೇ ನಗರಪಾಲಿಕೆಯು ಹಂಚಿರುವ 54 ನಿವೇಶನಗಳ ಪಕ್ಕದಲ್ಲಿ ಉಳಿಕೆ ಇರುವ ಸ್ಥಳವನ್ನು ಮಂಜೂರು ಮಾಡಲು ಕೋರಿದ್ದು, ಅದರ ವಿಸ್ತೀರ್ಣವು 20+11/2 X 19=294.5 ಚದರ ಅಡಿ ಮತ್ತು 14+8/2 X 27=297 ಚದರ ಅಡಿಗಳಿರುತ್ತದೆ. ಅರ್ಜಿದಾರರಿಗೆ ಬದಲೀ ನಿವೇಶನ ನೀಡುವ ಪ್ರಸ್ತಾವನೆಯನ್ನು ಸೂಕ್ತ ತೀರ್ಮಾನಕ್ಕಾಗಿ ನಗರ ಪಾಲಿಕೆಯ ಸಂಬಂಧಪಟ್ಟ ಸ್ಥಾಯಿ ಸಮಿತಿಗಳ ಮತ್ತು ಪಾಲಿಕೆಯ ಸಭೆಯ ಮುಂದೆ ಟಿಪ್ಪಣಿ ಮಂಡಿಸಲಾಗಿರುತ್ತದೆ. ಈ ಪ್ರಸ್ತಾವನೆ ಬಗ್ಗೆ ನಗರ ಯೋಜನೆ ಅಭಿವೃದ್ಧಿ ಸ್ಥಾಯಿ ಸಮಿತಿಯು ದಿನಾಂಕ:15-05-2006 ರಂದು ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ದಿನಾಂಕ:23-06-2006 ರಂದು ನಡೆದ ಸಭೆಗಳಲ್ಲಿ ಒಪ್ಪಿ ನಿರ್ಣಯ ತೆಗೆದುಕೊಂಡಿರುತ್ತದೆ. ದಿನಾಂಕ:27-09-2006 ರಂದು ನಡೆದ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ಸ್ಥಾಯಿ ಸಮಿತಿಗಳ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನ ತೆಗೆದುಕೊಂಡಿರುತ್ತದೆ.

ಪ್ರಸ್ತುತ ಪ್ರಸ್ತಾವನೆಯನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಸಲಹಾ ಸಮಿತಿ ಮುಂದೆ ಮಂಡಿಸುವಂತೆ ನಿರ್ದೇಶನ ನೀಡಿದ್ದರ ಮೇರೆಗೆ, ಸದರಿ ಪ್ರಸ್ತಾವನೆಯನ್ನು ದಿನಾಂಕ:26-10-2010 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಂಡಿಸಿದ್ದು, ಸಮಿತಿ ಸಭೆಯಲ್ಲಿ ಈಗಿನ ಮಾರುಕಟ್ಟೆ ದರದಂತೆ ಶುಲ್ಕ ಪಡೆದು ಅರ್ಜಿದಾರರಿಗೆ ಜಾಗವನ್ನು ನೀಡುವಂತೆ ತೀರ್ಮಾನವಾಗಿರುತ್ತದೆ. ಸಭೆಯ ನಡವಳಿಯ ಪ್ರತಿಯೊಂದಿಗೆ ಸರ್ಕಾರದ ಅನುಮೋದನೆಯನ್ನು ಪತ್ರದ ಮುಖಾಂತರ ಕೋರಲಾಗಿತ್ತು. ಇದಕ್ಕೆ ಸರ್ಕಾರವು ತನ್ನ ಪತ್ರದಲ್ಲಿ ಈ ಪ್ರಸ್ತಾವನೆಯನ್ನು ಈಗಿನ ಮಾರುಕಟ್ಟೆ ದರದಂತೆ ಲೆಕ್ಕಾಚಾರ ಮಾಡಿ, ಪಾಲಿಕೆ ನಿರ್ಣಯದೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಿರುತ್ತಾರೆ.

ಈ ಸಂಬಂಧ ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:17-04-2007ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿ ಉದ್ದೇಶಕ್ಕೆ ರೂ.800/- ಗಳಿದ್ದು, ನಿವೇಶನದ ಅಳತೆ 294.5 ಚದರ ಅಡಿಗಳಿದ್ದು, 294.5 X 800= ರೂ.2,35,600/- ಆಗುತ್ತಿದ್ದು, ಸರ್ಕಾರಿ ಆದೇಶದಂತೆ, ಶೇಕಡ 20 ರಷ್ಟು ಹೆಚ್ಚಿಸಿ ರೂ.2,82,720/-ಗಳಾಗುತ್ತದೆ. ಈ ನಿವೇಶನ ಒಬ್ಬರಿಗೆ ಹಾಗೂ ಮತ್ತೊಂದು ನಿವೇಶನದ ಅಳತೆ 297 ಚದರ ಅಡಿಗಳಿದ್ದು, 297 X 800= ರೂ.2,37,600/- ಆಗುತ್ತಿದ್ದು,

ಸರ್ಕಾರಿ ಆದೇಶದಂತೆ, ಶೇಕಡ 20% ರಷ್ಟು ಹೆಚ್ಚಿಸಲಾಗಿ ರೂ.2,85,120/-ಗಳಾಗುತ್ತದೆ. ಈ ನಿವೇಶನವನ್ನು ಒಬ್ಬರಿಗೆ ನೀಡಬಹುದಾಗಿರುತ್ತದೆ.

ಅರ್ಜಿದಾರರುಗಳು ದಿನಾಂಕ:29-03-2011 ರಂದು ಸರ್ಕಾರಕ್ಕೆ ಪತ್ರ ಬರೆದು, ಈ ಸ್ವತ್ತು ಹಿಂದೆ ನೀಡಿದ್ದ ನಿವೇಶನಕ್ಕೆ ಬದಲಿಯಾಗಿ ನೀಡುವುದರಿಂದ ಮಾರುಕಟ್ಟೆ ದರ ನಿಗಧಿಪಡಿಸುವ ಬದಲಿಗೆ ಈ ಹಿಂದೆ ಎಲ್ಲರಿಗೂ ನಿಗಧಿಪಡಿಸಿ ನೀಡಿರುವ ದರ ನಾಮಮಾತ್ರ ಬೆಲೆ 100ಕ್ಕೆ ನೀಡಲು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಅರ್ಜಿದಾರರಿಗೆ ಬದಲೀ ನಿವೇಶನ ನೀಡುವ ಬಗ್ಗೆ ಹಾಗೂ ದರ ನಿಗಧಿಪಡಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:15-07-2011ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:19-07-2011ರ ನಿರ್ಣಯ ಹಾಗೂ ದಿನಾಂಕ:19-07-2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಚದರಡಿ ಒಂದಕ್ಕೆ ರೂ.500/- ರಂತೆ (ಐದು ನೂರು) ದರ ನಿಗಧಿಪಡಿಸಬಹುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:09-09-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:09-09-2011ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:09-09-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 21 (234)/2011-12

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕೆಂಪೇಗೌಡನಗರ ಉಪ ವಿಭಾಗದ ವಾರ್ಡ್ ಸಂಖ್ಯೆ:119(47) ಚನ್ನರಾಯಸ್ವಾಮಿ ಟೆಂಪಲ್ ರಸ್ತೆ ಗಾಣಿಗರ ಪೇಟೆಯಲ್ಲಿರುವ ನಗರಪಾಲಿಕೆಯ 1777 ಚ.ಅಡಿ ಜಾಗವನ್ನು ದಿನಾಂಕ:01-04-1967 ರಿಂದ 30-ವರ್ಷಗಳ ಅವಧಿಗೆ ಮಾಸಿಕ ಗುತ್ತಿಗೆ ಹಣ ರೂ.5/- ರಂತೆ ಶ್ರೀ ಚೆನ್ನಕೇಶವಸ್ವಾಮಿ ದೇವಸ್ಥಾನದ ಟ್ರಸ್ಟ್ ರವರಿಗೆ ಗುತ್ತಿಗೆ ನೀಡಿದ್ದು, ಸದರಿ ಗುತ್ತಿಗೆ ಅವಧಿ ಮುಗಿದಿರುತ್ತದೆ. ಗುತ್ತಿಗೆದಾರರು ಗುತ್ತಿಗೆಯನ್ನು ನವೀಕರಿಸಿಕೊಂಡಿರುವುದಿಲ್ಲ.

ವಲಯಾಧಿಕಾರಿಗಳು ಸ್ಥಳ ಪರಿಶೀಲಿಸಿ, ವರದಿಯಲ್ಲಿ ಈ ಪ್ರದೇಶದಲ್ಲಿ ಕಲ್ಯಾಣ ಮಂಟಪ ನಿರ್ಮಿಸಿದ್ದು, ಶ್ರೀ.ಚೆನ್ನಕೇಶವಸ್ವಾಮಿ ದೇವಸ್ಥಾನಕ್ಕೆ ಹೊಂದಿಕೊಂಡಿರುತ್ತದೆ. ಇದರಲ್ಲಿ ದೇವರ ಕಾರ್ಯಕ್ಕೆ ಹಾಗೂ ಕಡುಬಡವರಿಗೆ ಮದುವೆ ನಡೆಸಲು ನೀಡುತ್ತಿರುವುದಾಗಿ ತಿಳಿದುಬಂದಿದ್ದು, 1997 ರಿಂದ ಕಳೆದ ವರ್ಷದವರೆಗೆ ಗುತ್ತಿಗೆ ಹಣ ಪಾವತಿ ಮಾಡಿರುತ್ತಾರೆ. ಸದರಿ ಗುತ್ತಿಗೆ ಅವಧಿಯನ್ನು ನವೀಕರಿಸುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

ಸದರಿ ಟ್ರಸ್ಟ್‌ರವರು ಈ ಸ್ಥಳದಲ್ಲಿ ಕಲ್ಯಾಣ ಮಂಟಪ ನಿರ್ಮಿಸಿ ಸದಾ ಕಾಲ ಮದುವೆ, ಇತರೇ ಕಾರ್ಯಗಳಿಗೆ ನೀಡದೇ ಧಾರ್ಮಿಕ ಕಾರ್ಯ ಹಾಗೂ ಕಡುಬಡವರಿಗೆ ಮದುವೆ ಕಾರ್ಯಕ್ಕಾಗಿ ನೀಡುತ್ತಿರುವುದರಿಂದ, ಮುಂದಿನ 30-ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಬಹುದಾಗಿದೆ.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆಯನ್ವಯ-1976 ಕಲಂ-176ರ (6) ಹಾಗೂ (ಬಿ)IIರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ ಹಾಗೂ ಪಾಲಿಕೆ ಸಭೆಗೆ 5 ವರ್ಷಕ್ಕೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ(ಕಂ)/ಪಿ.ಆರ್/115/01-02, ದಿನಾಂಕ:01-03-2002ರ ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ, ಪ್ರಸಕ್ತ ಮಾರುಕಟ್ಟೆ ಬೆಲೆಯ ಕನಿಷ್ಠ ಶೇ.10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸಬೇಕಾಗಿರುತ್ತದೆ. ಶೇ:100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಅಭಿಪ್ರಾಯಿಸಲಾಗಿದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:17-04-2007ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ರೂ.3,000/-ಗಳಿದ್ದು, ಅರ್ಜಿದಾರರುಗಳು ಕೋರಿರುವ ಸ್ಥಳವು 1777 ಚ.ಅಡಿಗಳಾಗಿದ್ದು, ಇದರಂತೆ 3000x1777= ರೂ.53,31,000/- ಗಳಾಗುತ್ತದೆ. ಶೇ:10%ರಷ್ಟು ವಾರ್ಷಿಕ ಗುತ್ತಿಗೆ ಹಣ 5,33,100/- ರೂ.ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ ರೂ.44,430/- ಗಳಾಗುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಪ್ರಸ್ತಾಪಿತ ಸ್ಥಳದ ಜಾಗದ ಗುತ್ತಿಗೆಯನ್ನು ಮುಂದಿನ 30 ವರ್ಷಗಳಿಗೆ ನವೀಕರಿಸುವ ಬಗ್ಗೆ ಹಾಗೂ ಗುತ್ತಿಗೆ ಹಣ ನಿಗಧಿಪಡಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:27-05-2011ರ ಟಿಪ್ಪಣಿ ಹಾಗೂ ಐದು ವರ್ಷದ ಅವಧಿಗೆ ಗುತ್ತಿಗೆ ನೀಡಲು ದಿನಾಂಕ:27-05-2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ

ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 09-08-2011ರ ನಿರ್ಣಯ ಹಾಗೂ ದಿನಾಂಕ:09-08-2011 ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಸದರಿ ಟ್ರಸ್ಟ್‌ನವರು ಧಾರ್ಮಿಕ ಕಾರ್ಯಗಳಿಗೆ ಹಾಗೂ ಕಡುಬಡವರಿಗೆ ಕಲ್ಯಾಣ ಮಂಟಪವನ್ನು ನೀಡುತ್ತಿರುವುದರಿಂದ ಮಾಸಿಕ ರೂ.5000/- (ಐದು ಸಾವಿರ) ಗಳನ್ನು ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-09-2011ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:26-09-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 24 (264)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ:30-03-1977 ರಂದು ಮಾಡಿರುವ ಕರಾರು ಪತ್ರದಂತೆ, ಶಾರದ ಸ್ತ್ರೀ ಸಮಾಜ, ಚಾಮರಾಜಪೇಟೆ, ಇವರಿಗೆ ಪಾಲಿಕೆಗೆ ಸೇರಿದ 120x11 =1320 ಚ.ಅಡಿ ವಿಸ್ತೀರ್ಣದ ಕನ್ಸರ್‌ವೆನ್ಸಿ ಜಾಗವನ್ನು 5-ವರ್ಷಗಳ ಅವಧಿಗೆ ವಾರ್ಷಿಕ ಗುತ್ತಿಗೆ ಮೊತ್ತ ರೂ.294/- ಕ್ಕೆ ಶಾಲೆಯ ಮಕ್ಕಳಿಗಾಗಿ ಶೌಚಾಲಯ ಇತ್ಯಾದಿ ಬಳಸುವ ಉದ್ದೇಶಕ್ಕೆ ನೀಡಲಾಗಿತ್ತು. ಇದರ ಗುತ್ತಿಗೆ ಅವಧಿಯು ದಿನಾಂಕ:29-03-1982 ಕ್ಕೆ ಮುಕ್ತಾಯಗೊಂಡಿರುತ್ತದೆ.

ಜಂಟಿ ಆಯುಕ್ತರು(ಪಶ್ಚಿಮ)ರವರು ದಿನಾಂಕ:19-07-2010 ರಲ್ಲಿ ಕೆ.ಪಿ.ಪಿ. ಕಾಯ್ದೆನ್ವಯ ನೋಟೀಸು ನೀಡಿದ್ದು, ಸಂಸ್ಥೆಯವರು ಸದರಿ ಜಾಗದ ಗುತ್ತಿಗೆಯನ್ನು ಮುಂದುವರೆಸಲು ಕೋರಿರುತ್ತಾರೆ. ಉಪ ಆಯುಕ್ತರು (ಆಸ್ತಿಗಳು) ರವರು ದಿನಾಂಕ:06-09-2011 ರಲ್ಲಿ ಸ್ಥಳ ಪರಿಶೀಲಿಸಿದ್ದು, ಈ ಶಾಲೆಯು 90-ವರ್ಷಗಳ ಹಿಂದೆ ಲೇಡಿ.ಪಾರ್ವತಮ್ಮ ಪುಟ್ಟಣ್ಣಚೆಟ್ಟಿ ಇವರಿಂದ ಸ್ಥಾಪಿಸಲ್ಪಟ್ಟಿದ್ದು, ಶೈಕ್ಷಣಿಕ ಸಂಸ್ಥೆಯಾಗಿದ್ದು, ಕರ್ನಾಟಕ ಸರ್ಕಾರದ ಅನುದಾನಿತ ಶಾಲೆಯಾಗಿರುತ್ತದೆ. ಈ ಶಾಲೆಯಲ್ಲಿ 1500 ವಿದ್ಯಾರ್ಥಿಗಳು ಕನ್ನಡ ಮಾಧ್ಯಮದಲ್ಲಿ ಉಚಿತ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ.

ಗುತ್ತಿಗೆಗೆ ನೀಡಿರುವ ಪ್ರದೇಶ ಮಕ್ಕಳ ಶೌಚಾಲಯ ಇತ್ಯಾದಿಗಾಗಿ ಉಪಯೋಗಿಸುತ್ತಿದ್ದಾರೆ. ಶಾಲೆಗೆ ಇದರ ಅವಶ್ಯಕತೆ ಇದ್ದು, ಯಾವುದೇ ರೀತಿಯಲ್ಲಿ ದುರುಪಯೋಗಪಡಿಸಿಕೊಂಡಿರುವುದಿಲ್ಲ ಹಾಗೂ ಗುತ್ತಿಗೆ ಮೊತ್ತವನ್ನು ಸಹ ಸಂದಾಯ ಮಾಡಿರುವುದಾಗಿ ತಿಳಿಸಿರುತ್ತಾರೆ. ಈ ಪ್ರದೇಶವು ಪಾಲಿಕೆಯ ಯಾವುದೇ ಸಾರ್ವಜನಿಕ ಉಪಯೋಗಕ್ಕೆ ಬಾರದೇ ಇರುವ ಕಾರಣ, ಅನುದಾನಿತ ಶಾಲೆಯಾಗಿರುವುದರಿಂದ, ರಿಯಾಯಿತಿ ದರ ನಿಗಧಿಪಡಿಸಿ ಗುತ್ತಿಗೆ ಅವಧಿಯನ್ನು ಮುಂದಿನ 5-ವರ್ಷಗಳಿಗೆ ನವೀಕರಿಸಲು ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:10-10-2011ರ ಟಿಪ್ಪಣಿ ಹಾಗೂ ಗುತ್ತಿಗೆಗೆ ನೀಡುವ ಮಾನ್ಯ ಆಯುಕ್ತರವರ ದಿನಾಂಕ:10-10-2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:08-11-2011ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪುತ್ತಾ, ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ ಇಲ್ಲಿಯವರೆವಿಗೂ ಹಳೇ ದರದಲ್ಲಿ ಗುತ್ತಿಗೆ ಮೊತ್ತವನ್ನು ಪಾವತಿಸಿಕೊಂಡು, ಮಾಸಿಕ ರೂ.600/- (ಆರು ನೂರು) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಿ 5 (ಐದು) ವರ್ಷಗಳ ಅವಧಿಗೆ ಗುತ್ತಿಗೆ ನೀಡುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:07-12-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:07-12-2011ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:07–12–2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 25 (265)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ಆದೇಶ ಸಂಖ್ಯೆ:ಎಲ್ 7719-21/ಸಿಎಂ 12-53, ದಿನಾಂಕ:03-10-1953 ರಂತೆ ಹಿಂದಿನ ಬೆಂಗಳೂರು ನಗರ ಪಾಲಿಕೆ ವ್ಯಾಪ್ತಿಯ ಮೈಸೂರು ರಸ್ತೆ ಗೋರಿಪಾಳ್ಯದಲ್ಲಿನ ನಗರ ಪಾಲಿಕೆಯ 60X40 ಅಡಿಗಳ ಸ್ವತ್ತನ್ನು ವಾರ್ಷಿಕ ರೂ.6/- ಗಳಿಗೆ ಕಾರ್ಯದರ್ಶಿ ಕಮ್ಯೂನಿಟಿ ವೆಲ್‌ಫೇರ್ ಸೆಂಟರ್ ಇವರಿಗೆ ಗುತ್ತಿಗೆ ಆಧಾರದ ಮೇಲೆ 40 ವರ್ಷಗಳಿಗೆ ಗುತ್ತಿಗೆ ಷರತ್ತುಗಳ ಅನ್ವಯ ನೀಡಿದ್ದು, ಗುತ್ತಿಗೆ ಅವಧಿಯು 1997ಕ್ಕೆ ಮುಕ್ತಾಯಗೊಂಡಿರುತ್ತದೆ. ವಾರ್ಷಿಕ ಗುತ್ತಿಗೆ ರೂ.6/- ರಂತೆ 1999-2000 ಅವಧಿವರೆಗೆ ಬಾಡಿಗೆ ಪಾವತಿಸಿರುವ ಬಗ್ಗೆ ವರದಿಯಲ್ಲಿ ತಿಳಿಸಿರುತ್ತಾರೆ.

ಕಾರ್ಯದರ್ಶಿ ಸಮಾಜಸೇವಾ ಇವರು ದಿನಾಂಕ:17-04-1999 ರಲ್ಲಿ ಪಾಲಿಕೆಗೆ ಮನವಿ ನೀಡಿ ಮೇಲ್ಕಂಡ ಪಾಲಿಕೆಯ ಗುತ್ತಿಗೆ ಆಸ್ತಿಯಲ್ಲಿ ದೇವಸ್ಥಾನ, ಆಫೀಸ್ ರೂಂ, ವಾಚನಾಲಯ ಹಾಗೂ ಅಂಗಡಿಗಳನ್ನು ಕಟ್ಟಿರುವ ಬಗ್ಗೆ ಉಲ್ಲೇಖಿಸಿ ಸದರಿ ಸೇವಾ ಸಂಸ್ಥೆಗೆ ಖಾತೆ ನೋಂದಾಯಿಸಿಕೊಡಲು ಮನವಿ ಸಲ್ಲಿಸಿರುತ್ತಾರೆ. ಈ ಆಸ್ತಿ ಪಾಲಿಕೆಯದಾಗಿರುವುದರಿಂದ ಖಾತೆ ಪ್ರಕ್ರಿಯೆ ಬಗ್ಗೆ ದಾಖಲಿಸಿರುವುದಿಲ್ಲ.

ಇದು ಸಮಾಜ ಸೇವಾ ಸಂಸ್ಥೆಯಾಗಿರುವುದರಿಂದ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸಾರ್ವಜನಿಕ ಉಪಯೋಗಕ್ಕಾಗಿ ಅನುಷ್ಠಾನಗೊಳಿಸಿರುವುದರಿಂದ ಗುತ್ತಿಗೆ ಅವಧಿಯನ್ನು 1998 ರಿಂದ ಮುಂದುವರಿಸಬೇಕಾಗಿರುತ್ತದೆ. ಸದರಿ ಸಂಸ್ಥೆಯು ಗುತ್ತಿಗೆ ಅವಧಿಯನ್ನು ಮುಂದುವರೆಸುವಂತೆ ಕೋರಿರುತ್ತಾರೆ.

ದಿನಾಂಕ:02-09-2011 ರಂದು ಸಹಾಯಕ ಆಯುಕ್ತರು (ಆಸ್ತಿಗಳು) ರವರು ಮತ್ತು ಭೂಮಾಪಕರು ಹಾಗೂ ಜೆ.ಜೆ.ಆರ್ ನಗರದ ಸಹ ಕಂದಾಯ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಲಾಗಿದೆ. ಈ ಸಂಸ್ಥೆಗೆ ಈ ಹಿಂದೆಯೇ 60X40 ಅಡಿಗಳ ವಿಸ್ತೀರ್ಣದ ಖಾಲಿ ಜಾಗವನ್ನು ಸರ್ಕಾರಿ ಆದೇಶದಂತೆ 40 ವರ್ಷಗಳ ಅವಧಿಗೆ ಗುತ್ತಿಗೆ ನೀಡಿದ್ದು, 1997ಕ್ಕೆ ಗುತ್ತಿಗೆ ಅವಧಿ ಮುಕ್ತಾಯವಾಗಿರುತ್ತದೆ. ಸದರಿ ಸ್ಥಳದಲ್ಲಿ 20X40 ಅಡಿಗಳ ವಿಸ್ತೀರ್ಣಕ್ಕೆ ಸಿದ್ಧಿ ವಿನಾಯಕ ದೇವಸ್ಥಾನ ಕಟ್ಟಡ ಇರುತ್ತದೆ. ಈ ಕಟ್ಟಡಕ್ಕೆ ಹೊಂದಿಕೊಂಡಂತೆ 10X10 ಅಡಿಗಳ ವಿಸ್ತೀರ್ಣದಲ್ಲಿ 4 ಅಂಗಡಿ ಮಳಿಗೆಗಳನ್ನು ಕಟ್ಟಿ ಬಾಡಿಗೆ ನೀಡಿರುವುದು ಕಂಡು ಬಂದಿರುತ್ತದೆ. ಅಂಗಡಿ ಹಿಂಭಾಗದಲ್ಲಿ ದೇವಸ್ಥಾನದ ಅರ್ಚಕರಿಗೆ 10X15 ಅಡಿಗಳಲ್ಲಿ ವಾಸಕ್ಕೆ ಮನೆ ಮಾಡಿಕೊಟ್ಟಿರುತ್ತಾರೆ ಹಾಗೂ ಒಂದು ಚಿಕ್ಕ ಗ್ರಂಥಾಲಯವನ್ನು ಸಹ ಮಾಡಿರುತ್ತಾರೆ. ಮೇಲ್ಕಂಡ ಗುತ್ತಿಗೆ ನೀಡಿರುವ ಪಾಲಿಕೆಯ ಜಾಗದಲ್ಲಿ ದೇವಸ್ಥಾನ ಮತ್ತು ಅಂಗಡಿಗಳಿಗೆ ಹೊಂದಿಕೊಂಡಂತೆ ಅಂಗಡಿಗಳ ಹಿಂಭಾಗದಲ್ಲಿ ಖಾಲಿ ಜಾಗವಿರುತ್ತದೆ.

10X10 ಅಡಿಗಳ 4 ಅಂಗಡಿ ಮಳಿಗೆಗಳಲ್ಲಿ 20X10 ಮತ್ತು 20X10 ಎರಡು ಮಳಿಗೆಗಳನ್ನಾಗಿ ಮಾರ್ಪಡಿಸಿ ಇಬ್ಬರಿಗೆ ಸಬ್‌ಲೀಸ್ ನೀಡಿರುವುದು ತಿಳಿದುಬಂದಿರುತ್ತದೆ. ಈ ಅಂಗಡಿಗಳಿಂದ ಬರುವ ಆದಾಯದಿಂದ ದೇವಸ್ಥಾನದ ದಿನನಿತ್ಯದ ಪೂಜಾ ಕಾರ್ಯಗಳನ್ನು ಹಾಗೂ ದೇವಸ್ಥಾನದ ಅಭಿವೃದ್ಧಿಗಾಗಿ ಬಳಸುತ್ತಿರುವುದನ್ನು ತಿಳಿಸಿರುತ್ತಾರೆ ಹಾಗೂ 2006-07 ರಿಂದ 2008-09ರ ಸಂಸ್ಥೆಯ ಆಡಳಿತ ಮಂಡಳಿಯ ವಾರ್ಷಿಕ ಆಡಳಿತ ವರದಿಯ ಜಮಾ ಖರ್ಚುಗಳ ಮಾಹಿತಿಯ ಜೆರಾಕ್ಸ್ ಪ್ರತಿಗಳನ್ನು ನೀಡಿರುತ್ತಾರೆ.

ಈಗಾಗಲೇ ಈ ಸಂಸ್ಥೆಯ ಗುತ್ತಿಗೆ ಅವಧಿಯು 1997ಕ್ಕೆ ಮುಕ್ತಾಯವಾಗಿರುವುದರಿಂದ, ಗುತ್ತಿಗೆ ಅವಧಿಯು ಮುಗಿದ ದಿನಾಂಕದಿಂದ ಮುಂದಿನ ಅವಧಿಗೆ ಸರ್ಕಾರದ ಮಾರ್ಗಸೂಚಿ ದರದನ್ವಯ ಗುತ್ತಿಗೆ ಅವಧಿಯನ್ನು ಮುಂದುವರೆಸಿ ಮಂಜೂರಾತಿ ನೀಡಬಹುದಾಗಿರುತ್ತದೆ ಎಂದು ವರದಿಯಲ್ಲಿ ತಿಳಿಸಿರುತ್ತಾರೆ.

ಪ್ರಸ್ತುತ ಜಾಗದ ವಿಸ್ತೀರ್ಣವು 60X40=2400 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿನಾಂಕ:17-04-2007ರ ಸರ್ಕಾರದ ಮಾರ್ಗಸೂಚಿ ದರದಂತೆ, ಚದರ ಅಡಿ ಒಂದಕ್ಕೆ ರೂ.900/- ಗಳಿರುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ, ರೂ.2400X900=21,60,000/- ಒಟ್ಟು ಮೊತ್ತಗಳಾಗುತ್ತದೆ. ಶೇಕಡ 10 ರಂತೆ ಲೆಕ್ಕ ಹಾಕಲಾಗಿ ವಾರ್ಷಿಕ ಗುತ್ತಿಗೆ ಮೊತ್ತ ರೂ.2,16,000/- ಗಳಾಗಲಿದ್ದು, ಮಾಸಿಕ ಗುತ್ತಿಗೆ ದರ ರೂ.18,000/- ಗಳಾಗುತ್ತದೆ.

ದಿನಾಂಕ:01-03-2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ, ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇಕಡ 100 ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಗುತ್ತಿಗೆ ಅವಧಿಯನ್ನು 1997 ರಿಂದ ನಿರಾಕರಿಸುವ ಗುತ್ತಿಗೆ ಕರಾರಿನ ದಿನಾಂಕಕ್ಕೆ ಹಳೆಯ ದರದಲ್ಲಿ ನಂತರದ ಅವಧಿಗೆ ಪ್ರತಿ ತಿಂಗಳು ರೂ.1,500/- ಗಳ ಬಾಡಿಗೆ ಗುತ್ತಿಗೆ ದರ ನಿಗಧಿಪಡಿಸಿ ಮುಂದಿನ 5 ವರ್ಷಗಳಿಗೆ ನವೀಕರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:22-09-2011 ರ ಟಿಪ್ಪಣಿ ಹಾಗೂ ಪ್ರಸಕ್ತ ಸರ್ಕಾರದ ಮಾರ್ಗಸೂಚಿ ದರಗಳನ್ವಯ ಗುತ್ತಿಗೆ ದರವನ್ನು ನಿಗಧಿಪಡಿಸುವ ಷರತ್ತಿನೊಂದಿಗೆ ಗುತ್ತಿಗೆ ನವೀಕರಿಸುವ ಮಾನ್ಯ ಆಯುಕ್ತರ ದಿನಾಂಕ:22-09-2011ರ ಪ್ರಸ್ತಾವನೆಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:18-10-2011ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಮಾರ್ಪಡಿಸಿ, 5 ವರ್ಷಗಳ ಅವಧಿಗೆ ಮಾಸಿಕ ರೂ.1,000/- (ಒಂದು ಸಾವಿರ) ಗಳ ಗುತ್ತಿಗೆ ಮೊತ್ತವನ್ನು ನಿಗಧಿ ಪಡಿಸುವುದೆಂದು ತೀಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:19-11-2011ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:19-11-2011ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:19-11-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 26 (266)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀಮತಿ. ಲಕ್ಷ್ಮಮ್ಮ ಕೋಂ ವೆಂಕಟಪ್ಪ, ಬೆಂಗಳೂರು-85 ರವರು ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನ ಮಾರಾಟ ಮಾಡಲು 5ನೇ ಮುಖ್ಯರಸ್ತೆ, 17ನೇ ಬಿ ಅಡ್ಡರಸ್ತೆ, ಬನಶಂಕರಿ 2ನೇ ಹಂತದಲ್ಲಿ 12x12 ಅಡಿಯ ವಿಸ್ತೀರ್ಣದ ಜಾಗವನ್ನು ಸುಮಾರು 6 ರಿಂದ 7 ವರ್ಷಗಳ ಕಾಲ, ಹಾಲಿನ ಬೂತ್ ಅಳವಡಿಸುವ ಸಲುವಾಗಿ ಗುತ್ತಿಗೆ ನೀಡಲು ಕೋರಿರುತ್ತಾರೆ.

ಉಪ ಪೊಲೀಸ್ ಕಮೀಷನರ್, ಸಂಚಾರಿ ಪಶ್ಚಿಮ ವಿಭಾಗ, ಬೆಂಗಳೂರು ನಗರ ರವರು ದಿ:29-06-2010 ರಂದು ನೀಡಿರುವ ನಿರಾಕ್ಷೇಪಣಾ ಪತ್ರ, ಸ್ಥಳ ನಕ್ಷೆ ಹಾಗೂ ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ಹಾಲು ಒಕ್ಕೂಟ (ನಿ) ರವರು ನೀಡಿರುವ ಮಂಜೂರಾತಿ ಪತ್ರವನ್ನು ಸಲ್ಲಿಸಿದ್ದು, ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು (ಬನಶಂಕರಿ) ಉಪವಿಭಾಗ ರವರು ಸದರಿ ಜಾಗದಲ್ಲಿ ಹಾಲಿನ ಬೂತ್ ಇಡಲು ನಿಯಮಾನುಸಾರ ಮತ್ತು ನಿಬಂಧನೆ ಒಳಪಡಿಸಿ ಮಂಜೂರು ಮಾಡಲು ನಕ್ಷೆಯಲ್ಲಿ ಗುರುತಿಸಿ, ಶಿಫಾರಸ್ಸು ಮಾಡಿರುತ್ತಾರೆ.

ಅರ್ಜಿದಾರರ ಮನವಿಯಂತೆ, ಕೋರಿರುವ ಸ್ಥಳವನ್ನು 6 ರಿಂದ 7 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲು ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ, 1976ರ ಕಲಂ-176ರ (6) ಹಾಗೂ (ಬಿ) IIರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ, ಪಾಲಿಕೆ ಸಭೆಗೆ 5 ವರ್ಷಗಳ ಅವಧಿಗೆ ಹಾಗೂ 5 ವರ್ಷ ಮೇಲ್ಪಟ್ಟ ಅವಧಿಗೆ ಸರ್ಕಾರಕ್ಕೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ (ಕಂ)/ಪಿ.ಆರ್/115/01-02, ದಿನಾಂಕ:01-03-2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆಯ ಕನಿಷ್ಠ ಶೇ:10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸಬೇಕಾಗಿರುತ್ತದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:17-04-2007ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿಯೇತರ ಉದ್ದೇಶಕ್ಕೆ ರೂ.4,900/-ಗಳಿದ್ದು, ಅರ್ಜಿದಾರರುಗಳು ಕೋರಿರುವ 12x12 ಅಡಿಗಳ ಜಾಗವು 144 ಚ.ಅಡಿಗಳಾಗುತ್ತದೆ. ಇದರಂತೆ 144x4900 = ರೂ.7,05,600/- ಗಳಾಗಲಿದ್ದು, ಶೇ:10% ರಷ್ಟು ವಾರ್ಷಿಕ ಗುತ್ತಿಗೆ ಹಣವು ರೂ.70,560/- ಗಳಾಗುತ್ತದೆ ಹಾಗೂ ಮಾಸಿಕ ಗುತ್ತಿಗೆ ಹಣ ರೂ.5,880/- ಗಳಾಗುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ/129/ಟಿಎಂಡಿ/2002, ಬೆಂಗಳೂರು, ದಿನಾಂಕ:02-06-2003ರ ಮಾರ್ಗ ಸೂಚಿಯಲ್ಲಿ ಪಾಲಿಕೆ ಸ್ವತ್ತುಗಳನ್ನು ಕ್ರಯದ ಆಧಾರದ ಮೇಲೆ ನೀಡಿದಲ್ಲಿ, ಮಾರುಕಟ್ಟೆ ದರ ಹಾಗೂ ಸಾರ್ವಜನಿಕ ಹರಾಜು ಮೂಲಕವೇ ನೀಡುವುದು ಎಂದು ಇರುತ್ತದೆ.

ಸರ್ಕಾರಿ ಆದೇಶ ಸಂಖ್ಯೆ:ನಅಇ/222/ಎಂ.ಎನ್.ವೈ/2008, ದಿನಾಂಕ:03-09-2009ರ ಅನುಸಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸರಹದ್ದಿನಲ್ಲಿ ಬರುವ ಸಾರ್ವಜನಿಕ ಸ್ವತ್ತುಗಳನ್ನು ಬೇರೆಯವರಿಗೆ ಗುತ್ತಿಗೆ ಆಧಾರದ ಮೇಲೆ ನೀಡುವುದಾಗಲಿ ಅಥವಾ ಮಾರಾಟ ಮಾಡುವ ಬದಲಾಗಿ ಸರ್ಕಾರವೇ ಸೂಕ್ತವಾಗಿ ಅಭಿವೃದ್ಧಿಪಡಿಸುವ ಬಗ್ಗೆ ಸಲಹೆ ನೀಡಲು ಮುಖ್ಯ ಕಾರ್ಯದರ್ಶಿಯರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಲಹಾ ಸಮಿತಿಯ ಅನುಮೋದನೆ ಪಡೆಯಬೇಕಾಗುತ್ತದೆ.

. . . .2

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಶ್ರೀಮತಿ.ಲಕ್ಷ್ಮಮ್ಮ ರವರಿಗೆ ಹಾಲಿನ ಮಾರಾಟ ಮಳಿಗೆ ಸ್ಥಾಪನೆಗೆ ಪ್ರಸ್ತಾಪಿತ ಜಾಗವನ್ನು ಗುತ್ತಿಗೆಗೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:29-08-2011ರ ಟಿಪ್ಪಣಿ ಹಾಗೂ ಪ್ರಸಕ್ತ ಸರ್ಕಾರದ ಮಾರ್ಗಸೂಚಿ ದರಗಳನ್ವಯ ಗುತ್ತಿಗೆ ದರವನ್ನು ನಿಗಧಿಪಡಿಸುವ ಷರತ್ತಿನೊಂದಿಗೆ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡಲು ಮಂಡಿಸಿರುವ ಆಯುಕ್ತರ ದಿನಾಂಕ:29-08-2011 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:18-10-2011ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಮಾರ್ಪಡಿಸಿ ಮಾಸಿಕ ರೂ.600/- (ಆರು ನೂರು) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಿ 5 (ಐದು) ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:07-12-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:07-12-2011ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:07-12-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 27 (267)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಲ್ಲೇಶ್ವರಂ 3ನೇ ಅಡ್ಡರಸ್ತೆಯಲ್ಲಿರುವ ನಗರ ಪಾಲಿಕೆಯ 20x10 ಅಡಿಗಳ ಜಾಗವನ್ನು ಶ್ರೀ.ಲಕ್ಷ್ಮೀವೆಂಕಟೇಶ್ವರ ಮತ್ತು ಗಣಪತಿ ಹಾಗೂ ಶನಿದೇವರ ವಿಗ್ರಹಕ್ಕೆ ಗರ್ಭಗುಡಿ ಕಟ್ಟಿಸಲು ಶ್ರೀ.ಲಕ್ಷ್ಮೀವೆಂಕಟೇಶ್ವರ ಟ್ರಸ್ಟ್ ರವರಿಗೆ ವಾರ್ಷಿಕ ಗುತ್ತಿಗೆ ರೂ.50/- ರಂತೆ ದಿನಾಂಕ:27-08-1997 ರಲ್ಲಿ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದ್ದು, ಗುತ್ತಿಗೆ ಅವಧಿಯು ಮುಗಿದಿರುತ್ತದೆ. ಗುತ್ತಿಗೆ ಅವಧಿಯನ್ನು ನವೀಕರಿಸಲು ಸದರಿ ಸಮಿತಿಯು ದಿನಾಂಕ:26-06-2002ರಲ್ಲಿ ಅರ್ಜಿ ಸಲ್ಲಿಸಿದ್ದು, ಈ ಬಗ್ಗೆ ಸಂಬಂಧಪಟ್ಟ ಸ್ಥಾಯಿ ಸಮಿತಿಯು ಗುತ್ತಿಗೆ ಅವಧಿಯನ್ನು 3 ವರ್ಷಗಳಿಗೆ ವಿಸ್ತರಿಸಿ ಸದರಿ ಜಾಗಕ್ಕೆ ಮಾರುಕಟ್ಟೆ ಬೆಲೆಯನ್ನು ರೂ.2,80,000/- ಅಥವಾ ಮಾಸಿಕ ಗುತ್ತಿಗೆ ರೂ.2,333/- ನಿಗಧಿಪಡಿಸಿ ತೀರ್ಮಾನ ತೆಗೆದುಕೊಂಡಿರುತ್ತದೆ. ಅದರಂತೆ ಸದರಿ ದೇವಸ್ಥಾನ ಸಮಿತಿಯು ದಿನಾಂಕ:15-08-2006ರ ನಂತರದಲ್ಲಿ ನಗರ ಪಾಲಿಕೆಗೆ ಮನವಿ ಸಲ್ಲಿಸಿ, ತಮ್ಮ ಸಂಸ್ಥೆಗೆ ನಿಗಧಿಪಡಿಸಿರುವ ಗುತ್ತಿಗೆ ಮೊತ್ತವು ಬಹಳ ಜಾಸ್ತಿಯಾಗಿದ್ದು, ತಮ್ಮ ಸಂಸ್ಥೆ ಇದನ್ನು ಭರಿಸಲು ಸಾಧ್ಯವಿಲ್ಲವೆಂದು ತಿಳಿಸಿ ಗುತ್ತಿಗೆ ಮೊತ್ತವನ್ನು ಕಡಿಮೆಗೊಳಿಸಿ ಗುತ್ತಿಗೆ ಅವಧಿಯನ್ನು ನವೀಕರಿಸಬೇಕೆಂದು ಕೋರಿರುತ್ತಾರೆ.

ಪ್ರಸ್ತುತ ಜಾಗದ ವಿಸ್ತೀರ್ಣವು 200 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿನಾಂಕ:17-04-2007 ರ ಸರ್ಕಾರದ ಮಾರ್ಗಸೂಚಿ ದರದಂತೆ, ಚದರ ಅಡಿ ಒಂದಕ್ಕೆ ರೂ.3000/- ಗಳಿರುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ, ರೂ.3000 x 200=6,00,000/- ಮೊತ್ತಗಳಾಗುತ್ತದೆ. ಶೇ:10% ವಾರ್ಷಿಕ ಗುತ್ತಿಗೆ ಮೊತ್ತ ನಿಗಧಿಪಡಿಸಿದಲ್ಲಿ ರೂ.60,000/- ಗಳಾಗಲಿದ್ದು, ಮಾಸಿಕ ಗುತ್ತಿಗೆ ದರ ರೂ.5000/- ಗಳಾಗುತ್ತದೆ.

ದಿನಾಂಕ:01-03-2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು, ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಪ್ರಸ್ತಾಪಿತ ಸ್ವತ್ತಿನ ಗುತ್ತಿಗೆ ಅವಧಿಯನ್ನು ಮುಂದಿನ 5 ವರ್ಷಗಳಿಗೆ ನವೀಕರಿಸಲು ಹಾಗೂ ಸೂಕ್ತ ಮಾಸಿಕ ಗುತ್ತಿಗೆ ದರವನ್ನು ನಿಗಧಿಪಡಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20-09-2011ರ ಟಿಪ್ಪಣಿ ಹಾಗೂ ಗುತ್ತಿಗೆ ಅವಧಿಯನ್ನು ನವೀಕರಿಸುವ ಮಾನ್ಯ ಆಯುಕ್ತರವರ ದಿನಾಂಕ:20-09-2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:18-10-2011ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪುತ್ತಾ ಮಾಸಿಕ ರೂ.300/- (ಮೂರು ನೂರು) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:07-12-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

. . . .2

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:07-12-2011ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**<u>ನಿರ್ಣಯ:</u>** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:07-12-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

## ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 28 (268)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.54ರ ಸಂಖ್ಯೆ:11, ಎ.ಡಿ.ಬ್ಲಾಕ್, ವೈಯಾಲಿಕಾವಲ್, ಬೆಂಗಳೂರು, ಇಲ್ಲಿನ ಪಾಲಿಕೆಯ ಜಾಗದಲ್ಲಿ ಸುಮಾರು 1ನೇ ದೇವಸ್ಥಾನದ ಕಟ್ಟಡದ ಅಳತೆ 19.9 ಚದರ ಮೀಟರ್ ಹಾಗೂ 2ನೇ ದೇವಸ್ಥಾನದ ಕಟ್ಟಡದ ಅಳತೆ 11.5 ಚದರ ಮೀಟರ್ ಒಟ್ಟು 31.4 ಚದರ ಮೀಟರ್‌ಗಳ ಅಳತೆಯಲ್ಲಿ ಶ್ರೀ. ಮಾರಮ್ಮ ದೇವಸ್ಥಾನ ಸೇವಾ ಟ್ರಸ್ಟ್ (ರಿ) ರವರು ದೇವಸ್ಥಾನವನ್ನು ನಿರ್ಮಿಸಿ ಅಲ್ಲಿ ಪೂಜಾ ಕಾರ್ಯಕ್ರಮಗಳನ್ನು ನಡೆಸುತ್ತಿದ್ದು, ಸದರಿ ದೇವಸ್ಥಾನದ ಜಾಗವನ್ನು 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲು ಕೋರಿರುತ್ತಾರೆ.

ಸದರಿ ಸಂಸ್ಥೆಯ ದೇವಸ್ಥಾನವು ಪುರಾತನವಾಗಿರುವುದರಿಂದ ಕಟ್ಟಡವು ತುಂಬಾ ಶಿಥಿಲವಾಗಿದ್ದು, ದೇವಸ್ಥಾನವನ್ನು ಅಭಿವೃದ್ಧಿ ಮಾಡಲು ಹಾಗೂ ದುರಸ್ತಿಯನ್ನು ಮಾಡಲು ಅವಶ್ಯಕತೆ ಇರುವುದರಿಂದ ಹಾಗೂ ಸದರಿ ದೇವಸ್ಥಾನದ ನಿವಾಸಿಗಳಿಗೆ ಈ ದೇವಸ್ಥಾನವು ಅನುಕೂಲವಾಗಿರುವುದರಿಂದ ಸದರಿ ಸಂಸ್ಥೆಯವರು ಗುತ್ತಿಗೆಗೆ ಕೋರಿರುತ್ತಾರೆ. ಇದರ ಬಗ್ಗೆ ಈಗಾಗಲೇ ಸ್ಥಳೀಯ ನಗರ ಪಾಲಿಕೆ ಸದಸ್ಯರು ಸಹ ಶಿಫಾರಸ್ಸು ಪತ್ರವನ್ನು ಬರೆದು ಸದರಿ ಶ್ರೀ. ಮಾರಮ್ಮ ದೇವಸ್ಥಾನ ಸೇವಾ ಟ್ರಸ್ಟ್ (ರಿ) ರವರಿಗೆ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲು ಕೋರಿರುತ್ತಾರೆ, ಸದರಿ ಟ್ರಸ್ಟ್‌ನವರು ಕೋರಿರುವ ಜಾಗದ ವಿಸ್ತೀರ್ಣವು 337 ಚದರ ಅಡಿ ವಿಸ್ತೀರ್ಣವಾಗಿರುತ್ತದೆ.

ದಿನಾಂಕ:19-08-2011 ರಂದು ಸ್ಥಳ ಪರಿಶೀಲಿಸಲಾಗಿದ್ದು, ಈ ದೇವಸ್ಥಾನವೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ನಿವಾಸಿಗಳ ಮನೆಗಳ ಮಧ್ಯದಲ್ಲಿದ್ದು, ಅನೇಕ ವರ್ಷಗಳ ಹಿಂದಿನಿಂದ ಪೂಜಾ ಕಾರ್ಯಗಳನ್ನು ಮಾಡಿಕೊಂಡು ಬರುತ್ತಿರುವುದಾಗಿ ತಿಳಿದಿದ್ದು, 5 ವರ್ಷಗಳ ಅವಧಿಗೆ ಗುತ್ತಿಗೆ ನೀಡಬಹುದೆಂದು ಉಪ ಆಯುಕ್ತರು (ಆಸ್ತಿಗಳು) ರವರು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

17-04-2007ರ ಸರ್ಕಾರದ ಮಾರ್ಗಸೂಚಿ ದರದಂತೆ ಲೆಕ್ಕಚಾರ ಮಾಡಲಾಗಿ ಶ್ರೀ. ಮಾರಮ್ಮ ದೇವಸ್ಥಾನದವರಿಗೆ ನೀಡಿರುವ ಸ್ವತ್ತಿನ ವಿಸ್ತೀರ್ಣವು 337 ಚದರ ಅಡಿಗಳಾಗಿದ್ದು, ಚದರ ಅಡಿ ಒಂದಕ್ಕೆ ರೂ.2300/- ಗಳಿರುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ 2300x337=7,75,100/- ರೂ.ಗಳಾಗುತ್ತದೆ. ಇದರಲ್ಲಿ ಶೇಕಡ 10% ರಷ್ಟು ವಾರ್ಷಿಕ ಗುತ್ತಿಗೆ ಮೊತ್ತ ನಿಗಧಿಗೊಳಿಸಿದಲ್ಲಿ ರೂ.77,510/- ಗಳಾಗಲಿದ್ದು, ಮಾಸಿಕ ಬಾಡಿಗೆ ರೂ.6,460/- ಗಳಾಗುತ್ತದೆ.

ದಿನಾಂಕ:01-03-2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಸ್ವತ್ತನ್ನು ಶ್ರೀ. ಮಾರಮ್ಮ ಟೆಂಪಲ್ ಸೇವಾ ಟ್ರಸ್ಟ್ (ರಿ) ರವರಿಗೆ ಗುತ್ತಿಗೆ ಕರಾರು ನೋಂದಾಯಿಸಿದ ದಿನಾಂಕದಿಂದ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:30-08-2011 ರ ಟಿಪ್ಪಣಿ ಹಾಗೂ ಶ್ರೀ. ಮಾರಮ್ಮ ಟೆಂಪಲ್ ಸೇವಾ ಟ್ರಸ್ಟ್ (ರಿ) ರವರಿಗೆ ಗುತ್ತಿಗೆ ಕರಾರು ನೋಂದಾಯಿಸಿದ

ದಿನಾಂಕದಿಂದ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಮಾನ್ಯ ಆಯುಕ್ತರವರ ದಿನಾಂಕ:30-08-2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:18-10-2011ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪುತ್ತಾ ಮಾಸಿಕ ರೂ.300/- (ಮೂರು ನೂರು) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:07-12-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:07-12-2011ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:07-12-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 30 (270)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಚಾಮರಾಜಪೇಟೆ ವಲಯದ ಹಳೆ ಪೆಟ್ರೋಲ್‌ಪೇಟೆ, ಕಾರ್ಟ್‌ಸ್ಟಾಂಡ್ ರಸ್ತೆಯಲ್ಲಿ 18X20 ಅಡಿ ಅಳತೆಯ ನಿವೇಶನವನ್ನು ಶ್ರೀ.ಸಿ.ಹೆಚ್. ಅಬ್ದುಲ್ ಖರೀಂ (ಮೊಹಮ್ಮದ್ ಇಲಿಯಾಸ್) ರವರಿಗೆ ವಾರ್ಷಿಕ ಗುತ್ತಿಗೆ ಮೊತ್ತ ರೂ.30/- ರಂತೆ ದಿನಾಂಕ:01-01-1967 ರಲ್ಲಿ ಒಂದು ವರ್ಷದ ಅವಧಿಗೆ ವ್ಯಾಪಾರದ ಉದ್ದೇಶಕ್ಕಾಗಿ ಗುತ್ತಿಗೆ ನೀಡಲಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ, ದಿನಾಂಕ:13-03-2003 ರಂದು ಸದರಿ ಜಾಗವನ್ನು 10 ವರ್ಷಗಳ ಗುತ್ತಿಗೆ ಅವಧಿ ನವೀಕರಿಸುವ ಅಥವಾ ಮಾರಾಟ ಮಾಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಪರಿಶೀಲಿಸಿದ ತರುವಾಯ ನಿಗಧಿಪಡಿಸಿದ ಮಾಸಿಕ ಬಾಡಿಗೆ ರೂ.30/- ರಂತೆ ದಿನಾಂಕ:11-06-2004ರವರೆಗೆ ಪಾವತಿ ಮಾಡಿರುತ್ತಾರೆ. ಅರ್ಜಿದಾರರು ಅನೇಕ ಸಲ ಗುತ್ತಿಗೆ ನವೀಕರಿಸಲು ಅರ್ಜಿ ಸಲ್ಲಿಸಿರುತ್ತಾರೆ. ಜಂಟಿ ಆಯುಕ್ತರು (ಪಶ್ಚಿಮ) ರವರು ಕೆಪಿಪಿ ಕಾಯ್ದೆ ಅನ್ವಯ ನೋಟೀಸ್ ನೀಡಿರುತ್ತಾರೆ.

ಪ್ರಸ್ತುತ ಜಾಗದ ವಿಸ್ತೀರ್ಣವು 360 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿನಾಂಕ:17-04-2007ರ ಸರ್ಕಾರದ ಮಾರ್ಗಸೂಚಿ ದರದಂತೆ, ಚದರ ಅಡಿ ಒಂದಕ್ಕೆ ರೂ.3000/- ಗಳಿರುತ್ತದೆ. ಇದರಂತೆ, ಲೆಕ್ಕಾಚಾರ ಮಾಡಲಾಗಿ, ರೂ.3000X360=10,80,000/- ಗಳಾಗುತ್ತದೆ. ಶೇಕಡ 10 ವಾರ್ಷಿಕ ಗುತ್ತಿಗೆ ಮೊತ್ತ ರೂ.1,08,000/-ಗಳಾಗುತ್ತದೆ. ಮಾಸಿಕ ಗುತ್ತಿಗೆ ದರ ರೂ.9,000/- ಗಳಾಗುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಸ್ವತ್ತಿನ ಗುತ್ತಿಗೆ ಅವಧಿಯನ್ನು ಮುಂದಿನ 5 ವರ್ಷಗಳಿಗೆ ಮೇಲ್ಕಂಡ ದರ ನಿಗಧಿಪಡಿಸಿ ನವೀಕರಿಸುವ ಬಗ್ಗೆ ಅನುಮೋದನೆ ಕೋರಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20-09-2011ರ ಟಿಪ್ಪಣಿ ಹಾಗೂ ಪ್ರಸಕ್ತ ಸರ್ಕಾರದ ಮಾರ್ಗಸೂಚಿ ದರಗಳನ್ವಯ ಗುತ್ತಿಗೆ ದರವನ್ನು ನಿಗಧಿಪಡಿಸುವ ಷರತ್ತಿನೊಂದಿಗೆ ಗುತ್ತಿಗೆಗೆ ನೀಡುವ ಮಾನ್ಯ ಆಯುಕ್ತರ ದಿನಾಂಕ:20-09-2011ರ ಪ್ರಸ್ತಾವನೆಯನ್ನು ಒಪ್ಪುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:18-10-2011 ರ ನಿರ್ಣಯ ಹಾಗೂ ದಿನಾಂಕ:18-10-2011 ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಮಾರ್ಪಡಿಸಿ, ಮಾಸಿಕ ರೂ.1,000/- (ಒಂದು ಸಾವಿರ) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:19-11-2011ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:19-11-2011ರ ನಿರ್ಣಯವನ್ನು ಭಾಗಶ: ಒಪ್ಪುತ್ತಾ, ಮಾಸಿಕ ರೂ.1,000/- ಗಳಿಗೆ ಬದಲಾಗಿ ಮಾಸಿಕ ರೂ.5,000/- ಗಳನ್ನು ನಿಗಧಿಪಡಿಸುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

. . . .2

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:19-11-2011ರ ನಿರ್ಣಯವನ್ನು ಭಾಗಶ: ಒಪ್ಪುತ್ತಾ, ಮಾಸಿಕ ರೂ.1,000/- ಗಳಿಗೆ ಬದಲಾಗಿ ಮಾಸಿಕ ರೂ.5,000/- ಗಳನ್ನು ನಿಗಧಿಪಡಿಸುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 31 (271)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಅಧ್ಯಕ್ಷರು-ಆದಿಶಕ್ತಿ ವಿದ್ಯಾ ಸಂಸ್ಥೆ ಟ್ರಸ್ಟ್ ರವರು ಪತ್ರ ಬರೆದು, ಕರ್ನಾಟಕ ರಾಜ್ಯದಲ್ಲಿ ಹಿಂದುಳಿದವರೆಂದು ಗುರುತಿಸಲ್ಪಟ್ಟಿರುವ ತಿಗಳರು ತಮ್ಮ ಜೀವನೋಪಾಯಕ್ಕಾಗಿ ಉಳಿಸಿಕೊಂಡಿದ್ದ ತೋಟದ ಜಮೀನುಗಳನ್ನು ಬೆಂಗಳೂರು ಅಭಿವೃದ್ಧಿಗಾಗಿ ಬಿಟ್ಟುಕೊಟ್ಟು ಸರ್ಕಾರದೊಂದಿಗೆ ಸಹಕರಿಸುತ್ತಿರುವ ತಿಗಳ ಜನಾಂಗದ ಸಂಪರ್ಕ ಕೇಂದ್ರವಾಗಿ ಕರಗಭವನ ಕಟ್ಟಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:119, ಪೈಲ್ವಾನ್ ಕೃಷ್ಣಪ್ಪ ರಸ್ತೆಯಲ್ಲಿರುವ ನಗರ ಪಾಲಿಕೆಯ 5300 ಚದರ ಅಡಿಗಳ ಖಾಲಿ ಜಾಗವನ್ನು ಆದಿಶಕ್ತಿ ವಿದ್ಯಾ ಸಂಸ್ಥೆ ಟ್ರಸ್ಟ್ ರವರಿಗೆ ಕರಗ ಭವನ ನಿರ್ಮಾಣ ಮಾಡಲು ಕೋರಿರುತ್ತಾರೆ.

ಪೂರ್ಣ ವಿವರಗಳೊಂದಿಗೆ ಪ್ರಸ್ತಾಪಿತ ನಿವೇಶನವನ್ನು ಆದಿಶಕ್ತಿ ವಿದ್ಯಾ ಸಂಸ್ಥೆ ಟ್ರಸ್ಟ್‌ರವರಿಗೆ ಕರಗ ಭವನ ನಿರ್ಮಾಣಕ್ಕೆ ನೀಡುವಲ್ಲಿ ಸೂಕ್ತ ನಿರ್ಣಯ ಕೈಗೊಳ್ಳಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆ ಮುಂದೆ ದಿನಾಂಕ:29-06-2011 ರಲ್ಲಿ ಟಿಪ್ಪಣಿ ಮಂಡಿಸಲಾಗಿರುತ್ತದೆ.

ದಿನಾಂಕ:29-07-2011ರಲ್ಲಿ ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ತಿಗಳರ (ವಹ್ನಿಕುಲ ಕ್ಷತ್ರಿಯರ) ಸಂಘ (ರಿ) ರವರು ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರ ಬರೆದು, ಕರಗ ಭವನ ನಿರ್ಮಾಣಕ್ಕಾಗಿ ಪ್ರಸ್ತಾಪಿತ ನಿವೇಶನವನ್ನು ಆದಿಶಕ್ತಿ ವಿದ್ಯಾಸಂಸ್ಥೆ ಟ್ರಸ್ಟ್‌ಗೆ ನೀಡುವುದನ್ನು ಕೈಬಿಟ್ಟು ತಿಗಳ ಜನಾಂಗದ ಕರ್ನಾಟಕ ರಾಜ್ಯ ತಿಗಳರ (ವಹ್ನಿಕುಲ ಕ್ಷತ್ರಿಯರ) ಸಂಘ (ರಿ) ರವರ ಹೆಸರಿಗೆ ಮಂಜೂರು ಮಾಡಲು ಕೋರಿರುವ ಮನವಿಯ ಬಗ್ಗೆ ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿಗಳು ನಿರ್ದೇಶಿಸಿರುತ್ತಾರೆ.

ಈ ಬಗ್ಗೆ ಪ್ರಸ್ತುತ ನಿವೇಶನವನ್ನು ಕರ್ನಾಟಕ ರಾಜ್ಯ ತಿಗಳರ (ವಹ್ನಿಕು ಕ್ಷತ್ರಿಯರ) ಸಂಘ (ರಿ) ರವರ ಹೆಸರಿಗೆ ಮಂಜೂರು ಮಾಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:07-09-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:18-10-2011ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಮಾರ್ಪಡಿಸಿ 5 (ಐದು) ವರ್ಷಗಳ ಅವಧಿಗೆ ಮಾಸಿಕ ರೂ.10,000/- (ಹತ್ತು ಸಾವಿರ) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:07-12-2011ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:07-12-2011ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

. . . .2

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:07-12-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 32 (272)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:146, ಬನ್ನೇರುಘಟ್ಟರಸ್ತೆ, ಲಕ್ಕಸಂದ್ರ 16ನೇ ಕ್ರಾಸ್‌ನಲ್ಲಿರುವ ನಗರಪಾಲಿಕೆಯ 28x35+43/2=1092 ಚ.ಅಡಿಗಳ ಜಾಗವನ್ನು ಮೈಕೋ ಕನ್ನಡ ಬಳಗದವರಿಗೆ ದಿನಾಂಕ:11-06-2001ರಂದು ನಡೆದ ನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:11/337ರ ನಿರ್ಣಯದ ಮೇರೆಗೆ, ದಿನಾಂಕ: 21-05-2002 ರಿಂದ ಐದು ವರ್ಷಗಳ ಅವಧಿಗೆ ಮಾಸಿಕ ಗುತ್ತಿಗೆ ಹಣ ರೂ. 2000/-ಗಳಿಗೆ ನಿಗಧಿಪಡಿಸಿ ಗುತ್ತಿಗೆಗೆ ನೀಡಲಾಗಿರುತ್ತದೆ. ಸದರಿ ಗುತ್ತಿಗೆ ಅವಧಿಯು ದಿ:20-05-07ಕ್ಕೆ ಮುಕ್ತಾಯಗೊಂಡಿರುತ್ತದೆ.

ಸದರಿ ಸಂಸ್ಥೆಯವರು ದಿನಾಂಕ 18-05-2006 ರಂದು ಮನವಿ ಸಲ್ಲಿಸಿ, ಗುತ್ತಿಗೆಗೆ ನೀಡಿರುವ ಜಾಗವನ್ನು ರಿಯಾಯತಿ ದರದಲ್ಲಿ ಕ್ರಯಕ್ಕೆ ನೀಡುವಂತೆ ಕೋರಿರುತ್ತಾರೆ. ಸ್ಥಳ ಪರಿಶೀಲನೆಯಂತೆ ಅರ್ಜಿದಾರರು ಗುತ್ತಿಗೆ ನೀಡಿರುವ 1092 ಚ.ಅಡಿ ಜಾಗಕ್ಕೆ ಹೆಚ್ಚುವರಿ 126 ಚ. ಅಡಿಗಳ ಜಾಗವನ್ನು ಒತ್ತುವರಿ ಮಾಡಿಕೊಂಡು ಕಾಂಪೌಂಡ್ ಹಾಕಿಕೊಂಡಿರುತ್ತಾರೆ.

ಸದರಿ ಜಾಗವನ್ನು ಮೈಕೋ ಕನ್ನಡ ಬಳಗದವರಿಗೆ ಪ್ರಸಕ್ತ ಮಾರುಕಟ್ಟೆ ದರಕ್ಕೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಅನುಮೋದನೆಗೆ ಟಿಪ್ಪಣಿ ಮಂಡಿಸಲಾಗಿದ್ದು, ಈ ಬಗ್ಗೆ ಮಾನ್ಯ ಆಡಳಿತಗಾರರು ದಿನಾಂಕ:24-11-2008 ರಂದು ವಿಷಯ ಸಂಖ್ಯೆ:628/08-09ರಲ್ಲಿ ಆಯುಕ್ತರವರ ದಿ:20-10-2008 ರ ಟಿಪ್ಪಣಿಯನ್ನು ಒಪ್ಪಿರುತ್ತಾರೆ.

ಮೈಕೋ ಕನ್ನಡ ಬಳಗ ಸಂಸ್ಥೆಯವರಿಗೆ ಕ್ರಯಕ್ಕೆ ನೀಡಲು ಉದ್ದೇಶಿಸಿರುವ ಸ್ವತ್ತಿನ ಅಳತೆಯು 1218 ಚ. ಅಡಿಗಳಿದ್ದು, ದಿನಾಂಕ:20/10/2008 ರಂದು ಮಾನ್ಯ ಆಡಳಿತಗಾರರ ಮುಂದೆ ಟಿಪ್ಪಣಿ ಮಂಡಿಸುವಾಗ ತಪ್ಪಾಗಿ 2310 ಚ.ಅಡಿಗಳೆಂದು ಮಂಡಿಸಲಾಗಿದ್ದು, ಸದರಿ ಟಿಪ್ಪಣಿಗೆ ಆಡಳಿತಗಾರರು ಅನುಮೋದನೆ ನೀಡಿರುತ್ತಾರೆ. ಈ ತಪ್ಪನ್ನು ತದನಂತರ ಸರಿಪಡಿಸಿ, ಸರ್ಕಾರದ ಮಾರ್ಗಸೂಚಿ ಬೆಲೆಯಂತೆ ಪ್ರತಿ ಚದರ ಅಡಿಗೆ ರೂ.2,800/- ಗಳಿಗೆ ನಿಗಧಿಗೊಳಿಸಿ, ನಂತರ ಸ್ವತ್ತಿನ ಮೌಲ್ಯಕ್ಕೆ ಶೇ.20 ರಷ್ಟು ಹೆಚ್ಚಿಸಿ, ಒಟ್ಟಾರೆ ಮಾರಾಟ ಬೆಲೆಯನ್ನು ರೂ.40,92,480/- ಗಳು ಎಂದು ಲೆಕ್ಕಾಚಾರ ಮಾಡಲಾಗಿರುತ್ತದೆ. ವಿಷಯ ಸಂಖ್ಯೆ: 628/08-09 ರಲ್ಲಿ ಮಾನ್ಯ ಆಡಳಿತಗಾರರಿಂದ ಅನುಮೋದನೆಯಾದ ವಿಸ್ತೀರ್ಣ 2310 ಚ. ಅಡಿಗಳ ಬದಲಾಗಿ 1218 ಚ. ಅಡಿಗಳ ಜಾಗವನ್ನು ಮಾರಾಟ ಬೆಲೆ ರೂ.77,61,600/- ಗಳಿಗೆ ಬದಲಾಗಿ ರೂ.40,92,480/- ಗಳಿಗೆ ಮಾರಾಟ ಮಾಡಲು ಮಂಡಿಸಲಾದ ತಿದ್ದುಪಡಿ ಟಿಪ್ಪಣಿಗೆ ಅನುಮೋದನೆ ಕೋರಿ, ಮಾನ್ಯ ಆಡಳಿತಗಾರರ ಮುಂದೆ ಮಂಡಿಸಲಾದ ಆಯುಕ್ತರವರ ದಿನಾಂಕ 14/07/2009 ರ ಟಿಪ್ಪಣಿಗೆ ಮಾನ್ಯ ಆಡಳಿತಗಾರರು ಅನುಮೋದನೆ ನೀಡಿರುತ್ತಾರೆ.

ಮಾನ್ಯ ಆಡಳಿತಗಾರರ ಅನುಮೋದನೆ ಮೇರೆಗೆ ಮೈಕೋ ಕನ್ನಡ ಬಳಗದವರಿಗೆ ಮಾರುಕಟ್ಟೆ ದರದಲ್ಲಿ ಕ್ರಯಕ್ಕೆ ನೀಡುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಸರ್ಕಾರದ ನಿರ್ದೇಶನದಂತೆ ಪ್ರಸ್ತಾಪಿತ ಪ್ರಕರಣವನ್ನು ದಿನಾಂಕ:26-10-2010 ರಂದು ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಸಲಹಾ ಸಮಿತಿ ಮುಂದೆ ಮಂಡಿಸಿದ್ದು, ಸದರಿ ಸಮಿತಿಯು ಗುತ್ತಿಗೆಗೆ ನೀಡಲಾಗಿದ್ದ ಜಾಗದ ಗುತ್ತಿಗೆ ಷರತ್ತನ್ನು ಮೇಲ್ಕಂಡ ಸಂಸ್ಥೆಯು ಸಂಪೂರ್ಣವಾಗಿ ಉಲ್ಲಂಘನೆ ಮಾಡಿರುವುದರಿಂದ, ಸದರಿ ಸ್ವತ್ತನ್ನು ನಗರ ಪಾಲಿಕೆ ವಶಕ್ಕೆ ಪಡೆಯುವಂತೆ ಸೂಚಿಸಿ ತನ್ನ ನಡವಳಿಯಲ್ಲಿ ದಾಖಲು ಮಾಡಿರುತ್ತದೆ. ಸದರಿ ಸಂಸ್ಥೆಯು ಮಾನ್ಯ ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಸಿದ್ದು, ಸದರಿ ಮನವಿಯಲ್ಲಿ ಸಂಸ್ಥೆಯ ಆರ್ಥಿಕ ಪರಿಸ್ಥಿತಿಯು ಸರಿಯಿಲ್ಲದ ಕಾರಣ, ಪ್ರಸ್ತಾಪಿತ ನಿವೇಶನವನ್ನು ರಿಯಾಯಿತಿ ದರದಲ್ಲಿ ಶುದ್ಧಕ್ರಯಕ್ಕೆ ನೀಡಲು ಕೋರಿರುತ್ತದೆ.

ಸರ್ಕಾರವು ದಿನಾಂಕ:28-02-2011ರ ಪತ್ರದಲ್ಲಿ ನಗರ ಪಾಲಿಕೆಯು ಪ್ರತ್ಯೇಕವಾಗಿ ಪ್ರಸ್ತಾವನೆಯನ್ನು ಕೌನ್ಸಿಲ್ ಸಭೆ ಮುಂದೆ ಮಂಡಿಸಿ ಅನುಮೋದನೆ ನಂತರ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ನಿರ್ದೇಶನ ನೀಡಿರುತ್ತದೆ. ಈ ಹಿನ್ನಲೆಯಲ್ಲಿ ಪಾಲಿಕೆ ಸ್ವತ್ತನ್ನು ಮೈಕೋ ಕನ್ನಡ ಬಳಗದವರಿಗೆ ಕ್ರಯಕ್ಕೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:07-09-2011ರ ಟಿಪ್ಪಣಿ ಹಾಗೂ ಮೈಕೋ ಕನ್ನಡ ಬಳಗವು ಸುಮಾರು 30 ವರ್ಷಗಳಿಂದ ನಾಡು-ನುಡಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅಂದರೆ ಸಾಧಕರಿಗೊಂದು ಸನ್ಮಾನ, ಆರೋಗ್ಯ ಶಿಬಿರ, ಸಮವಸ್ತ್ರ ವಿತರಣೆ, ಹಸ್ತ ಪ್ರತಿ ಪ್ರದರ್ಶನ ರಸಪ್ರಶ್ನೆ, ಕವಿಗೋಷ್ಟಿ, ಪ್ರಬಂಧ, ರಂಗೋಲಿ, ಕ್ರೀಡಾ ಚಟುವಟಿಕೆ, ಪರೀಕ್ಷಾ ಸಿದ್ದತಾ ಶಿಬಿರ, ಜಾನಪದ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ, ಭಾಷಾ ಕಮ್ಮಟ, ಪುಸ್ತಕ ಮೇಳ ಮತ್ತು ರಾಜ್ಯೋತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತ್ತಿದ್ದು, ಗ್ರಂಥಾಲಯ ನಿರ್ಮಾಣಕ್ಕೂ ಕೂಡ ಗ್ರಂಥಾಲಯ ಇಲಾಖೆಯಿಂದ ಅನುಮತಿ ದೊರೆತಿರುವುದರಿಂದ ಸದರಿ ಸ್ಥಳವನ್ನು ಮೈಕೋ ಕನ್ನಡ ಬಳಗದ ಹೆಸರಿಗೆ ಶುದ್ಧ ಕ್ರಯಕ್ಕೆ ನೀಡುವ ಬಗ್ಗೆ ಸರ್ಕಾರದ ಅನುಮೋದನೆ ಕೋರಲು ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:08-11-2011ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪುತ್ತಾ, ಪ್ರಸಕ್ತ ಮಾರುಕಟ್ಟೆ ದರದಲ್ಲಿ ಕ್ರಯಕ್ಕೆ ನೀಡುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:07-12-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:07-12-2011ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:07-12-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 33 (275)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬ್ಲಾಕ್ ನಂ.1 ರಲ್ಲಿ ಒಟ್ಟು ವಿಸ್ತೀರ್ಣ 0.06 ಗುಂಟೆ ಇದ್ದು, ಪೋಲಿಸ್ ಇಲಾಖೆಗೆ 0.05 ಗುಂಟೆ ಮಾತ್ರ ವಹಿಸಲಾಗಿದ್ದು, ಇದರಲ್ಲಿ ಸಂಪೂರ್ಣ 0.06 ಗುಂಟೆಯನ್ನು ಅವರಿಗೆ ವಹಿಸಿ, ಬ್ಲಾಕ್ ನಂ.03 ರಲ್ಲಿರುವ 0.01 1/2 ಗುಂಟೆ ಪ್ರದೇಶವನ್ನು ಪಾಲಿಕೆಗೆ ಉಳಿಸಿಕೊಳ್ಳುವ ಬಗ್ಗೆ ಕಂದಾಯ ಮತ್ತು ಅರಕ್ಷಕ ಇಲಾಖೆಯ ಸಹಮತದೊಂದಿಗೆ ಸರ್ಕಾರದ ನಗರಾಭಿವೃದ್ಧಿ ಇಲಾಖೆಯಿಂದ ಪರಿಷ್ಕೃತ ಆದೇಶ ಹೊರಡಿಸಿ ಅದರಂತೆ, ಎರಡೂ ಇಲಾಖೆಯವರು ಆಸ್ತಿ ವರ್ಗಾವಣೆ ತಿದ್ದುಪಡಿ ಪತ್ರ ನೊಂದಾಯಿಸುವ ಸಂಬಂಧ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆ ಮುಂದೆ ಮಂಡಿಸಲಾದ ಟಿಪ್ಪಣಿಯನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯವರು ದಿನಾಂಕ:06-09-2011 ರಲ್ಲಿ ಒಪ್ಪುವುದೆಂದು ತೀರ್ಮಾನಿಸಲಾಗಿರುತ್ತದೆ.

ದಿನಾಂಕ:07-09-2011 ರ ಪಾಲಿಕೆ ಸಭೆಯಲ್ಲಿ ಅಧಿಕ ವಿಷಯದ ಸಂಖ್ಯೆ:166/2011 ರಲ್ಲಿ ಈ ಕೆಳಕಂಡಂತೆ ನಿರ್ಣಯ ಕೈಗೊಂಡಿರುತ್ತದೆ.

ಆಯುಕ್ತರವರ ದಿನಾಂಕ:12-08-2011ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಹಾಲಿ ವಾರ್ಡ್-106ರ ಬಸವೇಶ್ವರನಗರ ಮುಖ್ಯರಸ್ತೆಗೆ ಹೊಂದಿಕೊಂಡಿರುವ ಪೋಲಿಸ್ ಸ್ಟೇಷನ್‌ಗೆ ಪಾಲಿಕೆವತಿಯಿಂದ ಉಚಿತವಾಗಿ ನೀಡಿರುವ ಜಾಗವು ಆಟದ ಮೈದಾನ/ಉದ್ಯಾನವನ ನಿರ್ಮಿಸುವ ಜಾಗವಾಗಿದ್ದು, ಸದರಿ ಜಾಗದ ಮಧ್ಯದಲ್ಲಿ ಎರಡು ಪ್ರತ್ಯೇಕ ರಸ್ತೆಗಳು ಇದ್ದು, ಜಾಗವು ಮೂರು ಭಾಗಗಳಾಗಿ ವಿಭಜನೆಯಾಗಿರುತ್ತದೆ. ಈ ರೀತಿ ವಿಭಜನೆಯಾದ ಒಂದು ಭಾಗವು (ಅಂದಾಜು 0.01 ಗುಂಟೆ) ಅಂಬೇಡ್ಕರ್ ಕ್ರೀಡಾಂಗಣಕ್ಕೆ ಹೊಂದಿಕೊಂಡಂತಿದ್ದು, ಪೋಲಿಸ್ ಸ್ಟೇಷನ್‌ನಿಂದ ಬೇರ್ಪಟ್ಟಿದ್ದು, ಬೃಹತ್ ನೀರುಗಾಲುವೆಯು ಹಾದು ಹೋಗಿರುವುದರಿಂದ, ಸದರಿ ಪ್ರದೇಶದಲ್ಲಿ ಇರುವ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಸಾರ್ವಜನಿಕ ಶೌಚಾಲಯವು ಇಲ್ಲದೇ ಇರುವುದರಿಂದ, ಸಾರ್ವಜನಿಕರ ಉಪಯೋಗಕ್ಕಾಗಿ ಸಾರ್ವಜನಿಕ ಶೌಚಾಲಯ ನಿರ್ಮಾಣ ಮಾಡಲು, ನಗರ ಪಾಲಿಕೆಯ ಮೂಲ ಸ್ವತ್ತಿನ ಪೈಕಿ 0.01 ಗುಂಟೆ ಜಾಗವನ್ನು ಮಾತ್ರ ಪೋಲಿಸ್ ಇಲಾಖೆಯ ವಶದಿಂದ ನಗರ ಪಾಲಿಕೆಗೆ ಹಿಂಪಡೆಯಲು ತೀರ್ಮಾನಿಸಲಾಗಿರುತ್ತದೆ. ಇದರಿಂದಾಗಿ, ಬ್ಲಾಕ್ ನಂ.3 ರಲ್ಲಿ ಇರುವ $0.0^1/_2$ ಗುಂಟೆ ಪ್ರದೇಶ ಪೋಲಿಸ್ ಇಲಾಖೆಗೆ ಬಿಡುವಂತಾಗುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಮಹಾನಗರ ಪಾಲಿಕೆಯು ದಿನಾಂಕ:07-09-2011 ರಲ್ಲಿ ಕೈಗೊಂಡಿರುವ ತೀರ್ಮಾನವನ್ನು ಮರು ಪರಿಶೀಲಿಸಿ, ಈ ಹಿಂದಿನ ಟಿಪ್ಪಣಿ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ರವರ ನಿರ್ಣಯದಂತೆ ಪರಿಶೀಲಿಸಿ ತೀರ್ಮಾನಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮರು ಮಂಡಿಸಿರುವ ಆಯುಕ್ತರವರ ದಿನಾಂಕ:02-11-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:02-11-2011 ರ ಟಿಪ್ಪಣಿಯನ್ನು ಒಪ್ಪುವುದು".

. . . .2

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಆಯುಕ್ತರವರ ದಿನಾಂಕ:02-11-2011ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

## ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 35 (213)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ:145, ಹೊಂಬೇಗೌಡನಗರ ವ್ಯಾಪ್ತಿಯ ನಾರಾಯಣಪುರ ಕೊಳಚೆ ಪ್ರದೇಶದಲ್ಲಿ ಮೂಲ ಹಂಚಿಕೆದಾರರಿಂದ 10 ವರ್ಷಗಳ ನಂತರ ಕ್ರಯಕ್ಕೆ ಪಡೆದಿರುವ 52 ಮಂದಿ ಹಾಗೂ 10 ವರ್ಷದ ಒಳಗೆ ಕ್ರಯಕ್ಕೆ ಪಡೆದಿರುವ 63 ಫಲಾನುಭವಿಗಳು ಹಾಲಿ ಸ್ಥಳದಲ್ಲಿ ವಾಸಿಸುತ್ತಿದ್ದು, ಕ್ರಯಪತ್ರ ನೀಡಲು ಕೋರಿರುತ್ತಾರೆ.

ನಾರಾಯಣಪುರ ಕೊಳಚೆ ಪ್ರದೇಶದಲ್ಲಿ ಪಾಲಿಕೆ ವತಿಯಿಂದ ದಿನಾಂಕ:27-01-1992 ರಂದು 10 ವರ್ಷಗಳು ಪರಬಾರೆ ಮಾಡಬಾರದೆಂದು ಷರತ್ತು ವಿಧಿಸಿ ಹಕ್ಕುಪತ್ರ ನೀಡಲಾಗಿರುತ್ತದೆ. ಇದರಲ್ಲಿ ಹಕ್ಕುಪತ್ರ ಪಡೆದ ಮೂಲ ಹಂಚಿಕೆದಾರರಿಂದ 10 ವರ್ಷಗಳ ನಂತರ 52 ಮಂದಿ ಫಲಾನುಭವಿಗಳು ಕ್ರಯ/ಜಿ.ಪಿ.ಎ. ಮುಖಾಂತರ ಪಡೆದಿದ್ದು, ಸ್ಥಳದಲ್ಲಿ ವಾಸಿಸುತ್ತಿರುತ್ತಾರೆ. ಇನ್ನೂ 63 ಫಲಾನುಭವಿಗಳು 10 ವರ್ಷಗಳು ಅವಧಿ ಪೂರ್ಣಗೊಳ್ಳದೇ ಇರುವ ಮೂಲ ಹಂಚಿಕೆದಾರರಿಂದ ಕ್ರಯ/ಜಿ.ಪಿ.ಎ ಮುಖಾಂತರ ಪಡೆದು ವಾಸ ಮಾಡುತ್ತಿದ್ದು, ತಮಗೆ ಪಾಲಿಕೆ ವತಿಯಿಂದ ಹಕ್ಕುಪತ್ರ ನೀಡಬೇಕೆಂದು ಕೋರಿದ್ದು, ಕೊಳಚೆ ಪ್ರದೇಶದಲ್ಲಿ ಮೂಲ ಹಂಚಿಕೆದಾರರಿಂದ ಕ್ರಯ/ಜಿ.ಪಿ.ಎ. ಮುಖಾಂತರ ಪಡೆದು ಸ್ಥಳದಲ್ಲಿ ವಾಸವಾಗಿರುವುದರಿಂದ, ಸರ್ಕಾರದ ಆದೇಶ ಸಂಖ್ಯೆ: ನಅಇ/36/ಎಂಎನ್‌ಯು/2009, ದಿನಾಂಕ:20-02-2009 ರಂತೆ 10 ವರ್ಷಗಳ ಮಾರಾಟ ಮಾಡಬಾರದೆಂಬ ಷರತ್ತುಬದ್ಧ ಶುದ್ಧ ಕ್ರಯಪತ್ರ ನೀಡುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

ಈ ಫಲಾನುಭವಿಗಳು ವಾಸವಾಗಿರುವ ಪ್ರದೇಶ, ಕೊಳಚೆ ಪ್ರದೇಶಗಳೆಂದು ಘೋಷಿಸಲ್ಪಟ್ಟಿರುವುದಿಲ್ಲ. ಪ್ರಸಕ್ತ ಮಾರುಕಟ್ಟೆ ಆಧಾರದ ಮೇಲೆ ದರ ನಿಗಧಿಪಡಿಸಿ, ಸರ್ಕಾರದ ಅನುಮೋದನೆ ಪಡೆದು ಹಕ್ಕುಪತ್ರ ನೀಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬಹುದಾಗಿರುತ್ತದೆ. ಈ ಪಟ್ಟಿಯಲ್ಲಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದವರಿಗೆ ಪಾಲಿಕೆಯ ಶೇಕಡ 22.75% ರ ಅನುದಾನದಡಿಯಲ್ಲಿ ಮೊತ್ತವನ್ನು ಭರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:07-05-2011ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05-07-2011 ರ ನಿರ್ಣಯ ಹಾಗೂ ದಿನಾಂಕ:05-07-2011 ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದ ಫಲಾನುವಿಗಳಿಗೆ ಪಾಲಿಕೆಯ ಶೇಕಡ 22.75% ಅನುದಾನದಲ್ಲಿ ಭರಿಸುವಂತೆ ಹಾಗೂ ಉಳಿದವರಿಗೆ ಪ್ರಸಕ್ತ ಮಾರುಕಟ್ಟೆ ದರದ ಆಧಾರದಲ್ಲಿ ದರ ನಿಗಧಿಪಡಿಸುವಂತೆ ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:09-09-2011ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯವನ್ನು ಮಾರ್ಪಡಿಸುತ್ತಾ, ಶೇಕಡ 22.75ರ ಅನುದಾನದ ಅಡಿಯಲ್ಲಿ ಭರಿಸುವ ಬದಲಾಗಿ ನಿಯಮಾನುಸಾರ ಮೊತ್ತವನ್ನು ಫಲಾನುಭವಿಗಳಿಂದಲೇ ಪಡೆದು ಕ್ರಮವಹಿಸುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಚರ್ಚೆಯ ನಂತರ ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**<u>ನಿರ್ಣಯ:</u>** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯವನ್ನು ಮಾರ್ಪಡಿಸುತ್ತಾ, ಶೇಕಡ 22.75ರ ಅನುದಾನದ ಅಡಿಯಲ್ಲಿ ಭರಿಸುವ ಬದಲಾಗಿ ನಿಯಮಾನುಸಾರ ಮೊತ್ತವನ್ನು ಫಲಾನುಭವಿಗಳಿಂದಲೇ ಪಡೆದು ಕ್ರಮವಹಿಸುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 37 (274)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್-152, ತಾವರೆಕೆರೆ, ಹೊಸೂರು ರಸ್ತೆ, ಜೋಗಿ ಕಾಲೋನಿಯ ಸಂಖ್ಯೆ:9, 15.5x18 ಅಡಿಗಳ ವಿಸ್ತೀರ್ಣದ ಸ್ವತ್ತನ್ನು ಶ್ರೀ. ನಾಗರಾಜ್ ಮತ್ತು ಶ್ರೀ. ರಾಮದಾಸ್ ಇಬ್ಬರೂ ಹಕ್ಕುಪತ್ರ ನೀಡುವಂತೆ ಕೋರಿದ್ದು, ಈ ಇಬ್ಬರಲ್ಲಿ ಯಾರಿಗೆ ಹಕ್ಕುಪತ್ರ ನೀಡಬೇಕೆಂಬ ವಿಷಯವಾಗಿರುತ್ತದೆ.

ಶ್ರೀ. ನಾಗರಾಜು ಎಂಬುವವರು ಮನವಿಯಲ್ಲಿ ತಾವು ಅಂಗವಿಕಲನಾಗಿದ್ದು, ಸುಮಾರು ವರ್ಷಗಳಿಂದ ಈ ಮನೆಯಲ್ಲಿ ವಾಸಮಾಡುತ್ತಿದ್ದು, ಇತ್ತೀಚಿಗೆ ತನ್ನನ್ನು ಖಾಲಿ ಮಾಡಿಸಿರುತ್ತಾರೆ ಹಾಗೂ ಶ್ರೀ. ರಾಮದಾಸ್ ರವರಿಗೆ ಇದೇ ಕಾಲೋನಿಯಲ್ಲಿ ಸ್ವತ್ತಿನ ಸಂಖ್ಯೆ:46 ಹಂಚಿಕೆಯಾಗಿರುತ್ತದೆ. ಆದುದರಿಂದ, ಅಂಗವಿಕಲನಾದ ತಮಗೆ ಈ ಸ್ವತ್ತನ್ನು ಹಂಚಿಕೆ ಮಾಡಲು ಕೋರಿರುತ್ತಾರೆ.

ಶ್ರೀ ರಾಮದಾಸ್ ಎಂಬುವವರು ಮನವಿಯಲ್ಲಿ ಈ ಸ್ವತ್ತು ತಮಗೆ ಹಂಚಿಕೆಯಾಗಿದ್ದು, ಈ ಸ್ವತ್ತಿಗೆ ಪಾಲಿಕೆ ವತಿಯಿಂದ ಬೀಗ ಹಾಕಿರುತ್ತದೆ. ಸರ್ಕಾರದ ಆದೇಶದಂತೆ ದಾಖಲಾತಿ ಹಾಗೂ ರೂ.2000/- ಗಳ ಡಿಡಿ ಹಾಜರುಪಡಿಸಿ, ಹಲವು ಬಾರಿ ಮನವಿ ಸಲ್ಲಿಸಿದ್ದು ತಮಗೆ ಹಕ್ಕುಪತ್ರ ನೀಡಲು ಕೋರಿರುತ್ತಾರೆ.

ಈ ಬಗ್ಗೆ ವಲಯಾಧಿಕಾರಿಗಳು ವರದಿಯಲ್ಲಿ ಈ ಸ್ವತ್ತಿನಲ್ಲಿರುವ ಕಟ್ಟಡ ಶಿಥಿಲಗೊಂಡಿದ್ದು, ಖಾಲಿ ಕಟ್ಟಡವನ್ನು ಪಾಲಿಕೆ ವಶಕ್ಕೆ ಪಡೆಯಲಾಗಿರುತ್ತದೆ ಹಾಗೂ ಅರ್ಜಿದಾರರಾದ ಶ್ರೀ. ರಾಮದಾಸ್ ರವರ ಹೆಸರಿಗೆ ಇದೇ ಕಾಲೋನಿಯಲ್ಲಿ ನಂ.46 ಹಂಚಿಕೆಯಾಗಿದ್ದು, ಇವರ ಹೆಸರಿಗೆ ಪಾಲಿಕೆಯಲ್ಲಿ ಖಾತಾ ಮುಂದುವರೆದಿರುತ್ತದೆ. ಶ್ರೀ. ನಾಗರಾಜ ರವರು ಅಂಗವಿಕಲರಾಗಿದ್ದು, ಇವರಿಗೆ ರಾಜ್ಯ ಅಂಗವಿಕಲರ ಆಯುಕ್ತರು ನಿಯಮಾನುಸಾರ ಹಕ್ಕುಪತ್ರ ನೀಡಲು ಶಿಫಾರಸ್ಸು ಮಾಡಿರುತ್ತಾರೆ. ಹಾಗೂ ಇವರ ತಂದೆಯಾದ ಶ್ರೀ. ಮರಿಯಪ್ಪನವರಿಗೆ ಇದೇ ಕಾಲೋನಿಯ ಸ್ವತ್ತಿನ ಸಂಖ್ಯೆ:25 ಹಂಚಿಕೆಯಾಗಿರುತ್ತದೆ. ಶ್ರೀ ನಾಗರಾಜ್ ರವರು ಈ ಸ್ವತ್ತಿಗೆ ಮಾರುಕಟ್ಟೆ ದರ ಪಾವತಿಸಲು ಒಪ್ಪಿಗೆ ನೀಡಿರುತ್ತಾರೆ ಎಂಬುದಾಗಿ ತಿಳಿಸಿರುತ್ತಾರೆ.

ಸದರಿ ಪ್ರದೇಶದಲ್ಲಿ ಹಕ್ಕುಪತ್ರ ನೀಡುವ ಬಗ್ಗೆ ಸರ್ಕಾರಿ ಆದೇಶ ಸಂಖ್ಯೆ: ನಅಇ/79 ಎಂ.ಎನ್.ಜಿ.2005, ದಿನಾಂಕ: 27-12-2005ರ ನಿಬಂಧನೆ 5ರ ರೀತಿ ಯಾವುದೇ ಫಲಾನುಭವಿಗೆ ಹಕ್ಕುಪತ್ರ ವಿತರಿಸುವ ಮುನ್ನ ಸದರಿಯವರು ಯಾವುದೇ ನಿವೇಶನ/ಮನೆಯನ್ನು ಪಾಲಿಕೆ ವ್ಯಾಪ್ತಿಯಲ್ಲಿ ಹೊಂದಿಲ್ಲವೆಂಬುದನ್ನು ಖಚಿತಪಡಿಸಿಕೊಂಡು ಹಕ್ಕುಪತ್ರ ವಿತರಿಸಲು ಕ್ರಮ ಜರುಗಿಸಲು ನಿರ್ದೇಶನ ನೀಡಿರುತ್ತದೆ. ಅರ್ಜಿದಾರ ಶ್ರೀ. ರಾಮದಾಸರವರ ಹೆಸರಿನಲ್ಲಿ ಈಗಾಗಲೇ ಸಂಖ್ಯೆ:46ರ ಸ್ವತ್ತನ್ನು ಹಂಚಿಕೆ ಮಾಡಲಾಗಿರುತ್ತದೆ. ಮತ್ತೊಬ್ಬ ಅರ್ಜಿದಾರ ಹಾಗೂ ಅಂಗವಿಕಲ ಶ್ರೀ. ನಾಗರಾಜ್ ರವರ ತಂದೆ ಶ್ರೀ. ಮರಿಯಪ್ಪರವರ ಹೆಸರಿನಲ್ಲಿ ನಂ.25ರ ಸಂಖ್ಯೆಯ ಸ್ವತ್ತನ್ನು ಹಂಚಿಕೆ ಮಾಡಲಾಗಿರುತ್ತದೆ. ಈ ಅಂಶದ ಆಧಾರದಿಂದ ಸದರಿ ಶ್ರೀ. ನಾಗರಾಜ್ ಹೆಸರಿನಲ್ಲಿ ಇಲ್ಲದೆ ಕುಟುಂಬ ಸದಸ್ಯರ ಹೆಸರಿನಲ್ಲಿ ಈಗಾಗಲೇ ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಆದುದರಿಂದ, ವಾಸ್ತವಾಂಶ ಆಧಾರದ ಮೇಲೆ ಮುಂದಿನ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:27-08-2011ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಶ್ರೀ ನಾಗರಾಜ್ ರವರು ಅಂಗವಿಕಲರಾಗಿರುವುದರಿಂದ ಸದರಿ ಸ್ವತ್ತಿಗೆ ಹಕ್ಕುಪತ್ರವನ್ನು ನೀಡಲು ಒಪ್ಪಿರುವ ನಗರ ಯೋಜನೆ ಮತ್ತು

. . . .2

ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:06-09-2011ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪುತ್ತಾ ಸರ್ಕಾರದ ಆದೇಶದಂತೆ ದರ ನಿಗಧಿಪಡಿಸಿ ಹಕ್ಕು ಪತ್ರ ವಿತರಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:07-12-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:07-12-2011ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:07-12-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 38 (243)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಡಾ|| ರಾಜ್‌ಕುಮಾರ್ ರಸ್ತೆ-ಯಶವಂತಪುರದಿಂದ ಓಕಳೀಪುರಂ ಜಂಕ್ಷನ್‌ವರೆಗೆ ಸಿಗ್ನಲ್‌ಮುಕ್ತ ಕಾರಿಡಾರ್ ಯೋಜನೆಯಡಿಯಲ್ಲಿ ಈ ಕೆಳಕಂಡ ಜಂಕ್ಷನ್‌ಗಳಲ್ಲಿ ಅಂಡರ್‌ಪಾಸ್ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಮೊದಲನೇ ಹಂತದಲ್ಲಿ ಅನುಮೋದನೆ ದೊರೆತ್ತಿರುತ್ತದೆ.

1) ವಿವೇಕಾನಂದ ಕಾಲೇಜ್ ಜಂಕ್ಷನ್ - ಅಂದಾಜು ಮೊತ್ತ ರೂ.771 ಲಕ್ಷಗಳು
2) 10ನೇ ಕ್ರಾಸ್ ಜಂಕ್ಷನ್ - ಅಂದಾಜು ಮೊತ್ತ ರೂ.1346.50 ಲಕ್ಷಗಳು
3) ಓಕಳೀಪುರಂ ಜಂಕ್ಷನ್ - ಅಂದಾಜು ಮೊತ್ತ ರೂ.1062.50 ಲಕ್ಷಗಳು

ಈ ಮೇಲಿನ ಮೂರು ಜಂಕ್ಷನ್‌ಗಳಲ್ಲಿ ಅಂಡರ್‌ಪಾಸ್ ನಿರ್ಮಾಣ ಕಾಮಗಾರಿಗೆ ಸಂಬಂಧಪಟ್ಟಂತೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ, ಗುತ್ತಿಗೆದಾರರನ್ನು ನಿಗಧಿಪಡಿಸಿ, ಈಗಾಗಲೇ ಕಾರ್ಯಾದೇಶ ನೀಡಲಾಗಿರುತ್ತದೆ. ಯೋಜಿತ ಅಂಡರ್‌ಪಾಸ್ ನಿರ್ಮಾಣ ಮಾಡಲು ಅಗತ್ಯವಾದ ಹೆಚ್ಚುವರಿ ಜಾಗವನ್ನು ಖಾಸಗಿ ಸ್ವತ್ತಿನ ಮಾಲೀಕರಿಂದ ಟಿ.ಡಿ.ಆರ್ ಯೋಜನೆಯ ಅಡಿಯಲ್ಲಿ ಪಡೆಯಲು ಕ್ರಮ ಕೈಗೊಳ್ಳಲಾಗಿರುತ್ತದೆ. ಈ ಬಗ್ಗೆ ಹಲವು ಸ್ವತ್ತಿನ ಮಾಲೀಕರಿಂದ ತೀವ್ರ ಆಕ್ಷೇಪಣೆಗಳು ಬಂದಿದ್ದು, ಕೆಲವರು ನ್ಯಾಯಲಯಕ್ಕೆ ಮೊರೆ ಹೋಗಿದ್ದು, ಪ್ರಕರಣಗಳು ನ್ಯಾಯಾಲಯದಲ್ಲಿ ಬಾಕಿ ಇರುತ್ತವೆ.

ಸದರಿ ಡಾ|| ರಾಜ್‌ಕುಮಾರ್ ರಸ್ತೆ ಯಶವಂತಪುರದಿಂದ ಓಕಳೀಪುರಂ ಜಂಕ್ಷನ್‌ವರೆಗೆ ಸಿಗ್ನಲ್‌ಮುಕ್ತ ಕಾರಿಡಾರ್ ಯೋಜನೆಯಡಿಯಲ್ಲಿ 10ನೇ ಕ್ರಾಸ್ ಜಂಕ್ಷನ್‌ನಲ್ಲಿ ಅಂಡರ್‌ಪಾಸ್ ನಿರ್ಮಾಣ ಕಾಮಗಾರಿಯಲ್ಲಿ ಈ ಕೆಳಕಂಡಂತೆ ಉಪಕಾಮಗಾರಿಗಳು ಸೇರಿದ್ದು, ಪ್ರತ್ಯೇಕ ಟೆಂಡರ್ ಪ್ರಕ್ರಿಯೆ ನಡೆಸಿ, ಗುತ್ತಿಗೆದಾರರನ್ನು ನಿಗಧಿಪಡಿಸಿ, ಕಾರ್ಯಾದೇಶ ನೀಡಲಾಗಿರುತ್ತದೆ.

| Sl. No. | Name of the Work | Est.Cost (Rs. in lakhs) | Tender Amount | Name of Agency |
|---|---|---|---|---|
| 1 | Procurement of RCC Pre-cast box segments of 7.50mX4.50mX1.0m for Vehicular underpass along Dr.Rajkumar road at 10th cross junction | 211.00 | 219.01 | M/s Parichitha Constructions ltd. |
| 2 | Providing drainage facilities for under pass along Dr.Rajkumar road at 10th cross junction | 184.50 | 119.08 | Sri. Aswath Narayana |
| 3 | Lowering of R.C.C pre cast boxes of size 7.5mX4.5mX1.0m for under pass along Dr.Rajkumar road at 10th cross junction | 73.00 | 73.66 | M/s Parchitha Construction ltd. |
| 4 | Procurement of RCC pre cellular Block of size 3.0mX2.20mX1.0 m for under pass along Dr.Rajkumar road at 10th cross junction | 248.00 | 252.05 | Sri.J C Prakash |

| | | | | |
|---|---|---|---|---|
| 5 | Constructions of Retaining wall for under pass along Dr.Rajkumar road at 10th cross junction | 288.00 | 282.16 | Sri.J C Prakash |
| 6 | Formation of service Road, concreting to ramps for under pass along Dr.Rajkumar road at 10th cross junction | 246.50 | 253.85 | Sri.G.M. Ravindra |
| 7 | Construction of approach road to under pass and other allied works for under pass along Dr.Rajkumar road at 10th cross junction | 95.50 | 87.38 | Sri.B.M. Chandraiah |

ಈ ಮೇಲಿನ ಏಳು ಕಾಮಗಾರಿಗಳ ಪೈಕಿ ಕ್ರಮ ಸಂಖ್ಯೆ (1) ರ Procurement of RCC Pre-cast box segments of 7.50mX4.50mX1.0m for Vehicular underpass along Dr.Rajkumar road at 10th cross junction ಕಾಮಗಾರಿ ಪ್ರಸ್ತಾವನೆಯನ್ನು ಕೈಬಿಡುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಿನಾಂಕ:01-02-2011ರ ಸಭೆಯಲ್ಲಿ ವಿಷಯ ಸಂಖ್ಯೆ: 4 (201)/2010-11 ರಲ್ಲಿ ನಿರ್ಣಯ ಕೈಗೊಳ್ಳಲಾಗಿರುತ್ತದೆ. ಆದರೆ, ಸದರಿ 10ನೇ ಕ್ರಾಸ್ ಜಂಕ್ಷನ್‌ನಲ್ಲಿ ಕೈಬಿಡಲು ನಿರ್ಣಯವಾಗಿರುವ ಕಾಮಗಾರಿಗೆ ಸಂಬಂಧಿಸಿದಂತೆ ಮೇಲಿನ ಆರು ಅವಲಂಬಿತ ಕಾಮಗಾರಿಗಳು ಇದ್ದು, ಪ್ರಸ್ತಾಪಿಸಿರುವ ಕಾಮಗಾರಿಯನ್ನು ಕೈಬಿಟ್ಟಲ್ಲಿ ಇನ್ನುಳಿದ ಆರು ಅವಲಂಬಿತ ಕಾಮಗಾರಿಗಳನ್ನು ನಿರ್ವಹಿಸಲು ಸಾಧ್ಯವಾಗುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, 10ನೇ ಕ್ರಾಸ್ ಜಂಕ್ಷನ್‌ನಲ್ಲಿ ಈಗಾಗಲೇ ಕೈಬಿಡಲು ನಿರ್ಣಯವಾಗಿರುವ ಕಾಮಗಾರಿಗೆ ಅವಲಂಬಿತವಾಗಿರುವ ಆರು ಕಾಮಗಾರಿಗಳನ್ನು ರದ್ದುಗೊಳಿಸುವ ಸಂಬಂಧ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:15-09-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:15-09-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:15-09-2011ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 39 (248)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯು ಸುಮಾರು 800 ಚ.ಕಿ.ಮೀ ವಿಸ್ತೀರ್ಣವುಳ್ಳದಾಗಿದ್ದು, ಸುಮಾರು 10,000 ಕಿ.ಮೀ ರಸ್ತೆಯ ಜಾಲವನ್ನು ಹೊಂದಿರುತ್ತದೆ. ಈ ರಸ್ತೆಯ ಜಾಲದಲ್ಲಿ ಪ್ರಮುಖವಾದ ಆರ್ಟರೀಯಲ್ ಮತ್ತು ಸಬ್ ಆರ್ಟರೀಯಲ್ ರಸ್ತೆಯ ಜಾಲವು ಸುಮಾರು 1900 ಕಿ.ಮೀ ಆಗಿರುತ್ತದೆ. ಈ ಆರ್ಟರೀಯಲ್ ಹಾಗೂ ಸಬ್ ಆರ್ಟರೀಯಲ್ ರಸ್ತೆಯ ಜಾಲದಲ್ಲಿ ಪ್ರಮುಖವಾದ ಸುಮಾರು 600 ಜಂಕ್ಷನ್‌ಗಳನ್ನು ಹೊಂದಿದ್ದು, ಯಾವುದೇ ನಗರದಲ್ಲಿನ ಒಂದು ಸೌಂದರ್ಯ ಹಾಗೂ ನಗರದ ಪ್ರಾಮುಖ್ಯತೆಯನ್ನು ಜಂಕ್ಷನ್‌ನಲ್ಲಿನ ಅಭಿವೃದ್ಧಿಯು ಗೋಚರಿಸಿ ತೋರಿಸುತ್ತದೆ.

ಈ ನಿಟ್ಟಿನಲ್ಲಿ ದಿನಾಂಕ:26-02-2011 ರಂದು ಹಾಗೂ ದಿನಾಂಕ:13-05-2011 ರಂದು ಕ್ರೇಡಾಯ್ (CREDAI) ಸಂಘ ಸಂಸ್ಥೆಯವರನ್ನು ಹಾಗೂ ಮೆ॥ಭಾರತಿ ಸಿಮೆಂಟ್ಸ್ ಸಂಸ್ಥೆಯವರನ್ನು ಸಭೆಗೆ ಕರೆಯಲಾಗಿರುತ್ತದೆ. ಸದರಿ ಸಭೆಯಲ್ಲಿ ಪೂಜ್ಯ ಮಹಾಪೌರರು, ಉಪ ಮಹಾಪೌರರು, ಆಡಳಿತ ಪಕ್ಷದ ನಾಯಕರು, ವಿರೋಧ ಪಕ್ಷದ ನಾಯಕರು, ಬೃಹತ್ ಸಾರ್ವಜನಿಕ ಕಾಮಗಾರಿ ಹಾಗೂ ನಗರ ಯೋಜನೆ ಸ್ಥಾಯಿ ಸಮಿತಿಯ ಅಧ್ಯಕ್ಷರ ಸಮ್ಮುಖದಲ್ಲಿ ಮಾನ್ಯ ಆಯುಕ್ತರು ಸಭೆಯನ್ನು ನಡೆಸಿದ್ದು, ಬೆಂಗಳೂರು ನಗರದಲ್ಲಿನ ಮೂಲಭೂತ ಸೌಕರ್ಯಗಳಿಗೆ ಸಂಬಂಧಪಟ್ಟ ಕೆಲಸಗಳಲ್ಲಿ ಪಿ.ಪಿ.ಪಿ. (Public Private Partnership) ಮಾದರಿ ಅಡಿಯಲ್ಲಿ ಖಾಸಗಿ ಸಂಘ ಸಂಸ್ಥೆರವರ ಸಹಯೋಗ ಹಾಗೂ ಸಹಭಾಗಿತ್ವ ಅಗತ್ಯವಿರುತ್ತದೆ ಎಂದು ತಿಳಿಸಿ, ಇದರ ಮಹತ್ವ ಮತ್ತು ಇದರಿಂದ ನಗರಕ್ಕೆ ಹಾಗೂ ನಗರದ ನಿವಾಸಿಗಳಿಗೆ ಸಿಗುವ ಸೌಲಭ್ಯಗಳ ಬಗ್ಗೆ ವಿವರಿಸಿರುತ್ತಾರೆ.

ಸದರಿ ಸಭೆಯಲ್ಲಿ ದೀರ್ಘವಾದ ಚರ್ಚೆಯ ನಂತರ, ಈ ಎರಡೂ ಸಂಘ ಸಂಸ್ಥೆಗಳಿಗೆ "In anticipation of approval to MOU and signing of agreement Letter of consent issue ಮಾಡಿ" ಪ್ರಸ್ತಾವನೆಗಳನ್ನು ಸಲ್ಲಿಸಲು ಸೂಚಿಸಲಾಗಿತ್ತು. ಅದರಂತೆ, ದಿನಾಂಕ:19-05-2011 ರಂದು ಮೆ॥ಭಾರತಿ ಸಿಮೆಂಟ್ಸ್ ರವರಿಗೆ Letter of consent ಅನ್ನು ಈ ಕೆಳಕಂಡ '6' ಜಂಕ್ಷನ್ ಗಳ ಅಭಿವೃದ್ಧಿಗೋಸ್ಕರ ನೀಡಲಾಗಿರುತ್ತದೆ.

1. ಕೆ.ಆರ್.ವೃತ್ತ
2. ಚಾಲುಕ್ಯ ಜಂಕ್ಷನ್
3. ಕಂಟೋನ್‌ಮೆಂಟ್ ಜಂಕ್ಷನ್
4. ಸೋಫಿಯಾ ಸ್ಕೂಲ್ ಹತ್ತಿರ
5. ಮೇಖ್ರಿ ವೃತ್ತ
6. ರೇಸ್ ಕೋರ್ಸ್

ಮೇಲ್ಕಂಡ ವೃತ್ತಗಳಲ್ಲಿ ವಿವಿಧ ಕಲಾಕೃತಿಗಳನ್ನು ಪ್ರತಿಷ್ಠಾಪಿಸಲು ಉದ್ದೇಶಿಸಿದ್ದು, ಅದರಂತೆ ಕೆ.ಆರ್.ವೃತ್ತದಲ್ಲಿ ಸರ್.ಎಂ.ವಿಶ್ವೇಶ್ವರಯ್ಯ ಕಲಾಕೃತಿಯನ್ನು ಸ್ಥಾಪಿಸಲು ಪ್ರಸ್ತಾಪಿಸಲಾಗಿರುತ್ತದೆ. ಆದರೆ, ಸದರಿ ವೃತ್ತಕ್ಕೆ ಕೃಷ್ಣರಾಜೇಂದ್ರ ಒಡೆಯರ್ (ಕೆ.ಆರ್.ವೃತ್ತ) ರವರ ಹೆಸರಿಡುವ ಕಾರಣ, ಈ ವೃತ್ತದಲ್ಲಿ ಸದರಿ ಸರ್.ಎಂ.ವಿಶ್ವೇಶ್ವರಯ್ಯರವರ ಕಲಾಕೃತಿಯನ್ನು ಸ್ಥಾಪಿಸುವುದು ಸೂಕ್ತವಲ್ಲ ಎಂಬ ವಿಷಯವನ್ನು ಗಮನಕ್ಕೆ

. . . .2

ತರಲಾಗಿದೆ. ಆದ್ದರಿಂದ, ಸದರಿ ಕಲಾಕೃತಿಯನ್ನು Institute of Engineers ಮತ್ತು ಸರ್.ಎಂ.ವಿಶ್ವೇಶ್ವರಯ್ಯ ಗೋಪುರ ಕಟ್ಟಡದ ವೃತ್ತದಲ್ಲಿ ಸ್ಥಾಪಿಸಲು ಅನುಮೋದನೆ ಕೋರಲಾಗಿದೆ. ಅದರಂತೆ, ಚಾಲುಕ್ಯ ವೃತ್ತದಲ್ಲಿ ಕಂಟೋನ್‌ಮೆಂಟ್ ಜಂಕ್ಷನ್‌ನಲ್ಲಿ ಸೋಫಿಯಾ ಸ್ಕೂಲ್ ಹತ್ತಿರ, ಮೇಖ್ರಿ ವೃತ್ತ ಮತ್ತು ರೇಸ್‌ಕೋರ್ಸ್ ವೃತ್ತದಲ್ಲಿ ಕಲಾಕೃತಿಯನ್ನು ಸ್ಥಾಪಿಸಲು ಅನುಮೋದನೆಯನ್ನು ಕೋರಲಾಗಿದೆ.

ಈ ಪ್ರಸ್ತಾವನೆಗಳನ್ನು ದಿನಾಂಕ:30-06-2011 ರಂದು ಮೆ॥ ಭಾರತಿ ಸಿಮೆಂಟ್ಸ್ ರವರು ಮಾನ್ಯ ಆಯುಕ್ತರಿಗೆ ಸಲ್ಲಿಸಿ, ಜಂಕ್ಷನ್ ಅಭಿವೃದ್ಧಿಪಡಿಸುವ ನೀಲಿನಕ್ಷೆ, Thematic Cement Sculptures ಹಾಗೂ ಅಂದಾಜು ಪಟ್ಟಿಗಳ ವಿವರವಾದ ವರದಿಯನ್ನು ಸಲ್ಲಿಸಿ, ಕಾರ್ಯವನ್ನು ನಿರ್ವಹಿಸಲು ಈ ಕೆಳಕಂಡ ಅಂಶಗಳಿಗೆ ಅನುಮೋದನೆಯನ್ನು ಕೋರಿರುತ್ತಾರೆ;

1. ಕಾರ್ಯಾದೇಶ ನೀಡುವುದು
2. ಒಡಂಬಡಿಕೆ ಪತ್ರ ಮಾಡಿಕೊಡುವುದು
3. ಕಾಮಗಾರಿಯನ್ನು ಪ್ರಾರಂಭಿಸಲು ವಿವಿಧ ಇಲಾಖೆಯ ಅನುಮತಿ.

ಮೇಲೆ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ, ಮೆ॥ ಭಾರತಿ ಸಿಮೆಂಟ್ ಕಾರ್ಪೋರೇಷನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರಿಗೆ ಕರಡು ಒಡಂಬಡಿಕೆ ಪತ್ರದಲ್ಲಿನ ಷರತ್ತುಗಳಿಗೆ ಅನುಮೋದನೆ ಹಾಗೂ ಈ ಕೆಳಕಂಡ ಷರತ್ತುಗಳೊಂದಿಗೆ ಕಾರ್ಯಾದೇಶ ನೀಡಲು ಅನುಮೋದನೆ ಕೋರಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-07-2011 ರ ಟಿಪ್ಪಣಿ.

- ಜಂಕ್ಷನ್‌ಗಳ ಅಭಿವೃದ್ಧಿಯನ್ನು ಕಾರ್ಯಾದೇಶ ನೀಡಿದ ಮೂರು ತಿಂಗಳುಗಳಲ್ಲಿ ಪೂರ್ಣಗೊಳಿಸುವುದು.
- ಅಭಿವೃದ್ಧಿಪಡಿಸಿದ ಜಂಕ್ಷನ್‌ಗಳನ್ನು ಐದು ವರ್ಷಗಳ ಅವಧಿಗೆ ಯಾವುದೇ ನಿರ್ವಹಣೆ ವೆಚ್ಚವಿಲ್ಲದೆ ನಿರ್ವಹಣೆ ಮಾಡುವುದು.
- ಸಂಸ್ಥೆಯು ಜಂಕ್ಷನ್ ಮಾಲೀಕತ್ವದ ಯಾವುದೇ ಅಧಿಕಾರವನ್ನು ಹೊಂದಲು ಅವಕಾಶವಿರುವುದಿಲ್ಲ.
- ಜಂಕ್ಷನ್ ಅಭಿವೃದ್ಧಿಪಡಿಸುವ ವೇಳೆಯಲ್ಲಿ ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ಕ್ರಮವಹಿಸುವುದು.
- ಒಡಂಬಡಿಕೆಯ ಪತ್ರದಲ್ಲಿನ ಷರತ್ತುಗಳನ್ನು ಪಾಲಿಸುವುದು.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:16-07-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

. . . .3

ಚರ್ಚೆಯ ನಂತರ ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**<u>ನಿರ್ಣಯ:</u>** "ಆಯುಕ್ತರವರ ದಿನಾಂಕ:16-07-2011ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 1 (276) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಈ ಕೆಳಕಂಡ ಅಸೋಸಿಯೇಷನ್ / ಕ್ಲಬ್‌ಗಳಿಗೆ ಸುಮಾರು 99 ವರ್ಷಗಳ ಕಾಲ ಕ್ರೀಡಾ ಚಟುವಟಿಕೆಗಳಿಗಾಗಿ ಮಹಾನಗರ ಪಾಲಿಕೆಯ ಜಮೀನನ್ನು ಗುತ್ತಿಗೆಗೆ ನೀಡಲಾಗಿದೆ.

| ಕ್ರ ಸಂ. | ಸಂಸ್ಥೆಯ ಹೆಸರು | ಗುತ್ತಿಗೆ ಅವಧಿ | ವಿಸ್ತೀರ್ಣ | ಗುತ್ತಿಗೆ ಮೊತ್ತ ವಾರ್ಷಿಕ |
|---|---|---|---|---|
| 1 | ಕರ್ನಾಟಕ ಬ್ಯಾಡ್ ಮಿಂಟನ್ ಅಸೋಸಿಯೇಷನ್ | 04-02-1976 ರಿಂದ 03-02-2075 | 44,000 ಚ.ಅಡಿ | 100/- |
| 2 | ಕರ್ನಾಟಕ ಬಿಲಿಯಾರ್ಡ್ಸ್ ಅಸೋಸಿಯೇಷನ್ | 05-02-1976 ರಿಂದ 04-02-2075 | 36,747 ಚ.ಅಡಿ | 100/- |
| 3 | ಇಂಡಿಯಾನ್ ಜಂಕಾನ ಕ್ಲಬ್ | 17-6-2008 ರಿಂದ 16-06-2043 | 4 ಎಕರೆ 21 ಗುಂಟೆ | 2,71,500/- |
| 4 | ಕರ್ನಾಟಕ ಹಾಕಿ ಅಸೋಸಿಯೇಷನ್ | 21-07-1977 ರಿಂದ 20-07-2076 | 2,49,163 ಚ.ಅಡಿ | 100/- |
| 5 | ಕರ್ನಾಟಕ ಫುಟ್ ಬಾಲ್ ಅಸೋಸಿಯೇಷನ್ | 15-11-1975 ರಿಂದ 14-11-2074 | 6,08,601 | 1,000/- |

ಕರ್ನಾಟಕ ಸರ್ಕಾರವು ಕರ್ನಾಟಕ ಗಾಲ್ಫ್ ಅಸೋಸಿಯೇಷನ್ ರವರಿಗೆ ಕ್ರೀಡಾ ಸಂಬಂಧ ಗುತ್ತಿಗೆಗೆ ನೀಡಲಾಗಿದ್ದು, ಸದರಿ ಅಸೋಸಿಯೇಷನ್ ರವರು ಈ ಕೆಳಕಂಡ ಸೇವಾ ವರ್ಗಕ್ಕೆ ಸೇರಿದವರಿಗೆ ಸದಸ್ಯತ್ವವನ್ನು ಆದ್ಯತೆ ಮೇರೆಗೆ ನೀಡಿರುತ್ತಾರೆ. (Byelaw No.11.8)

1. ಭಾರತೀಯ ಆಡಳಿತ ಸೇವೆ (ಐ.ಎ.ಎಸ್) ಅಧಿಕಾರಿಗಳು
2. ಗ್ರೂಪ್-ಎ ಅಧಿಕಾರಿಗಳು, ಕರ್ನಾಟಕ ಸರ್ಕಾರ
3. ರಕ್ಷಣಾ ಇಲಾಖೆಗೆ ಸೇರಿದ ಅಧಿಕಾರಿಗಳು
4. ಗೌರವಾನ್ವಿತ ನ್ಯಾಯಾಧೀಶರು ಕರ್ನಾಟಕ ಉಚ್ಚನ್ಯಾಯಾಲಯ ರವರು ಸೇರಿದ್ದಾರೆ.

ಅದೇ ರೀತಿ ಮೇಲೆ ಹೇಳಿದ ವರ್ಗದವರಲ್ಲದೆ ಈ ಕೆಳಕಂಡ ವರ್ಗದ ಪ್ರತಿನಿಧಿಗಳು / ಅಧಿಕಾರಿಗಳಿಗೆ ವಿಶೇಷ ಸದಸ್ಯತ್ವವನ್ನು ನೀಡಲು ಸೂಕ್ತ ರೀತಿಯಲ್ಲಿ ಮಾರ್ಪಡಿಸಿ ಬೈಲಾ ಅಳವಡಿಸಲು ಸಂಬಂಧಪಟ್ಟ ಕ್ಲಬ್ / ಅಸೋಸಿಯೇಷನ್ ರವರುಗಳಿಗೆ ನಿರ್ದೇಶನ ನೀಡುವ ಬಗ್ಗೆ ತೀರ್ಮಾನ ಕೈಗೊಳ್ಳಲು ಮಂಡಿಸಿದೆ.

1. ಮಹಾನಗರ ಪಾಲಿಕೆ ಚುನಾಯಿತ ಸದಸ್ಯರು
2. ನಗರ ಪಾಲಿಕೆ ಅಧಿಕಾರಿಗಳು/ನೌಕರರುಗಳು
3. ಸರ್ಕಾರಿ ಅಧಿಕಾರಿಗಳು/ನೌಕರರುಗಳು

ಮೇಲ್ಕಂಡಂತೆ ನಿರ್ದೇಶನ ನೀಡಲು ಒಪ್ಪಿದಲ್ಲಿ, ಗುತ್ತಿಗೆ ಕರಾರನ್ನು ಮಾರ್ಪಡಿಸಲು ಕ್ರಮ ಕೈಗೊಳ್ಳುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:13-10-2011 ರ ಟಿಪ್ಪಣಿ ಹಾಗೂ ಸದರಿ ಪ್ರಸ್ತಾವನೆಯನ್ನು ಒಪ್ಪುತ್ತಾ, ಹೆಚ್ಚುವರಿಯಾಗಿ ಬೆಂಗಳೂರು ನಗರದ ಶಾಸಕರಿಗೂ ಅನ್ವಯಿಸುವಂತೆ ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:22-11-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:22-11-2011ರ ನಿರ್ಣಯವನ್ನು ಒಪ್ಪುತ್ತಾ, ಕಾಸ್ಮೋ ಬೋರಿಂಗ್, ಕೆಎಸ್‌ಸಿಎ, ಸೆಂಚುರಿ ಸಿಟಿ ಕ್ಲಬ್‌ಗಳನ್ನು ಪ್ರಸ್ತಾವನೆಯಲ್ಲಿ ಸೇರಿಸಿಕೊಳ್ಳುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಚರ್ಚೆಯ ನಂತರ ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:22-11-2011ರ ನಿರ್ಣಯವನ್ನು ಒಪ್ಪುತ್ತಾ, ಕಾಸ್ಮೋ ಬೋರಿಂಗ್, ಕೆಎಸ್‌ಸಿಎ, ಸೆಂಚುರಿ ಸಿಟಿ ಕ್ಲಬ್‌ಗಳನ್ನು ಪ್ರಸ್ತಾವನೆಯಲ್ಲಿ ಸೇರಿಸಿಕೊಳ್ಳುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

## ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 3 (278) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮುಖ್ಯ ಅಭಿಯಂತರರು (ಪರಿಸರ ಕೋಶ) ರವರು ಯಲಹಂಕ ವಲಯದ ದೊಡ್ಡ ಬೊಮ್ಮಸಂದ್ರ ಕೆರೆಯ ಹಂತ-1ರ ಅಭಿವೃದ್ಧಿ ಕಾಮಗಾರಿಯ ಅಂದಾಜು ಮೊತ್ತ ರೂ.385.30 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಸದರಿ ಕಾಮಗಾರಿಗೆ 2011-12ನೇ ಸಾಲಿನ ಆಯವ್ಯಯದಲ್ಲಿ ಹೊಸ ಕೆರೆಗಳ ಅಭಿವೃದ್ಧಿಗಾಗಿ, ಲೆಕ್ಕ ಶೀರ್ಷಿಕೆ ಪಿ-2175 ರ ಅಡಿಯಲ್ಲಿ ರೂ.3000.00 ಲಕ್ಷಗಳನ್ನು ನಿಗಧಿ ಪಡಿಸಲಾಗಿರುತ್ತದೆ.

ದೊಡ್ಡ ಬೊಮ್ಮಸಂದ್ರ ಕೆರೆಯ ಅಭಿವೃದ್ಧಿಗಾಗಿ ರೂ.436.00 ಲಕ್ಷಗಳಿಗೆ ವಿವರವಾದ ಯೋಜನಾ ವರದಿ (ಡಿ.ಪಿ.ಆರ್) ಅನ್ನು ತಯಾರಿಸಲಾಗಿದ್ದು, ಮೊದಲನೇ ಹಂತದ ಕಾಮಗಾರಿಯಲ್ಲಿ ಕೆರೆಯ ಅಭಿವೃದ್ಧಿ, ಏರಿ ಅಭಿವೃದ್ಧಿ ಪಡಿಸುವುದು, ಸಿಲ್ಟ್ ಟ್ರಾಪ್ ಅಭಿವೃದ್ಧಿ, ಲೀಡ್ ಡ್ರೈನ್ ಅಭಿವೃದ್ಧಿ, ಕೊಳಚೆ ನೀರಿನ ತಿರುವು ಕಾಲುವೆ, ವಿಗ್ರಹ ವಿಸರ್ಜನೆಗಾಗಿ ಕಲ್ಯಾಣಿ ನಿರ್ಮಾಣ, ಒಳಹರಿವು ಹಾಗೂ ಹೊರಹರಿವು ಅಭಿವೃದ್ಧಿ, ಶೌಚಾಲಯ, ಕಾವಲುಗಾರರ ಕೊಠಡಿ, ಎಮ್.ಎಸ್. ಗ್ರಿಲ್ ಗೇಟ್ ಮತ್ತು ಕರ್ಬ್ ಸ್ಟೋನ್ ಇತ್ಯಾದಿಗಳನ್ನೊಳಗೊಂಡಂತೆ ಕಾಮಗಾರಿಗಳನ್ನು ನಿರ್ವಹಿಸುವುದು ಅವಶ್ಯವಿರುತ್ತದೆ.

ಈ ಹಿನ್ನೆಲೆಯಲ್ಲಿ, ಯಲಹಂಕ ವಲಯದ ದೊಡ್ಡ ಬೊಮ್ಮಸಂದ್ರ ಕೆರೆಯ ಹಂತ-1ರ ಅಭಿವೃದ್ಧಿ ಕಾಮಗಾರಿಯ ಅಂದಾಜು ಮೊತ್ತ ರೂ.385.30 ಲಕ್ಷ (ರೂ ಮೂನ್ನೂರ ಎಂಭತ್ತೈದು ಲಕ್ಷದ ಮೂವತ್ತು ಸಾವಿರ ಮಾತ್ರ) ಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಕಾಮಗಾರಿ ಸಂಕೇತ ಪಡೆಯುವ ಪ್ರಸ್ತಾವನೆಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:12-12-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:22-12-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:22-12-2011ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:22-12-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

## ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 279 /2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ-160ರ BEML ಬಡಾವಣೆಯ ಜವಾಹರಲಾಲ್ ನೆಹರು ಮುಖ್ಯ ರಸ್ತೆಯ Ideal Homes ಬಡಾವಣೆಯ 12ನೇ E ಅಡ್ಡರಸ್ತೆ ಸಂಧಿಸುವ ರಸ್ತೆಯಲ್ಲಿ ಅಂತಿಮಗೊಂಡಿದ್ದು, ಮಧ್ಯದಲ್ಲಿ ಮಳೆ ನೀರುಗಾಲುವೆ ಇದ್ದು, ಸದರಿ ಸ್ಥಳದಲ್ಲಿ ಮಳೆ ನೀರು ಚರಂಡಿಯನ್ನು ಅಭಿವೃದ್ಧಿಪಡಿಸಿ ಆರ್.ಸಿ.ಸಿ ಬಾಕ್ಸ್ ಕಲ್ವರ್ಟ್ ನಿರ್ಮಿಸುವುದು ಸೇರಿದಂತೆ ಪೂರ್ವ ಭಾಗದ ನಿವೇಶನಗಳಲ್ಲಿನ ಭಾಗಶ: ಸುಮಾರು 6.505 ಚ. ಅಡಿ ವಿಸ್ತೀರ್ಣವನ್ನು ಉಪಯೋಗಿಸಿಕೊಂಡು ಸಂಪರ್ಕ ರಸ್ತೆ ನಿರ್ಮಿಸಲು ಸದರಿ ಸ್ವತ್ತನ್ನು ಪಾಲಿಕೆಗೆ ಭೂಸ್ವಾಧೀನಪಡಿಸಿಕೊಡಲು ಕೋರಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ, ರಾಜರಾಜೇಶ್ವರಿನಗರ ವಲಯ ರವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಕಾರ್ಯಪಾಲಕ ಅಭಿಯಂತರರು (ಯೋಜನೆ), ಮುಖ್ಯ ಅಭಿಯಂತರರು, ಆರ್. ಆರ್. ನಗರ ಮತ್ತು ಅಪರ ಆಯುಕ್ತರು, ಆರ್. ಆರ್. ನಗರ ಶಿಫಾರಸ್ಸು ಮಾಡಿ ಕಳುಹಿಸಿರುತ್ತಾರೆ.

ಪಾಲಿಕೆಯ ಉಪ ಆ760ಯುಕ್ತರು (ಭೂಸ್ವಾಧೀನ) ರವರು ದಿನಾಂಕ:11-08-2011 ರಂದು ರಾಜರಾಜೇಶ್ವರಿನಗರ ವಲಯದ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರೊಂದಿಗೆ ಪ್ರಸ್ತಾಪಿತ ಕಾಮಗಾರಿಯ ಸ್ಥಳ ಪರಿಶೀಲನೆ ಮಾಡಿರುತ್ತಾರೆ. ಪ್ರಸ್ತಾಪಿತ ಸ್ಥಳದಲ್ಲಿ ಇರುವ ಮಳೆ ನೀರು ಚರಂಡಿಯಲ್ಲಿ ಮಳೆ ನೀರು ಪೂರ್ವದ ಕಡೆಯಿಂದ ಹರಿದು ಬರುತ್ತಿದ್ದು, ಈ ಮಳೆ ನೀರಿನ ಚರಂಡಿಗೆ ಹಾಲಿ Deckslab ಅಳವಡಿಸಲಾಗಿದೆ. ಇದರ ಅಳತೆ ಕನಿಷ್ಠ 3.5 ಮೀಟರ್ ಇರಬೇಕಾಗಿದ್ದು, ರಸ್ತೆ ಸೇರುವ ಕಡೆ 2 ಮೀಟರ್‌ಗೆ ಕಡಿಮೆ ಮಾಡಿ ನಿರ್ಮಿಸಲಾಗಿದೆ. ಈ ಹಿಂದೆ ಸೋಸೈಟಿ ರವರು ಚರಂಡಿ ಮತ್ತು ರಸ್ತೆಯನ್ನು ನಿರ್ಮಾಣ ಮಾಡುವಾಗಲೇ ಕಿರಿದಾಗಿ ಮಾಡಲಾಗಿರುವುದರಿಂದ, ದಕ್ಷಿಣದ ಮೂಲೆಯಲ್ಲಿರುವ ನಿವೇಶನದಲ್ಲಿ 2175 ಚ.ಅ ಜಾಗವನ್ನು ಭೂಸ್ವಾಧೀನಪಡಿಸಿಕೊಂಡು, ಉತ್ತರದಿಂದ ದಕ್ಷಿಣಕ್ಕೆ ಇರುವ ಹಾಲಿ ರಸ್ತೆಯನ್ನು Deckslab ಪ್ರದೇಶದಲ್ಲಿ ಅಗಲ ಮಾಡಿ ಪೂರ್ವದಿಂದ ಪಶ್ಚಿಮಕ್ಕೆ ಹರಿಯುವ ಮಳೆ ನೀರುಗಾಲುವೆಯನ್ನು (SWD) ಪೂರ್ವದ ಕಡೆ ಹಾಲಿ ಇರುವ ರಸ್ತೆಯ ಅಗಲಕ್ಕೆ ಸಮನಾದ ಅಳತೆಯ ಪಟ್ಟಿ 3.5 ಮೀಟರ್ ಇರುವುದನ್ನು ಹಾಗೆಯೇ ಪಶ್ಚಿಮದ ಕಡೆ ಹೊಸ Deckslab ನಿರ್ಮಿಸಿ ಪೂರ್ವದಿಂದ ಬರುವ ನೀರು ಸರಾಗವಾಗಿ ಹರಿಯಲು ಅವಕಾಶ ಕಲ್ಪಿಸಬಹುದಾಗಿದೆ. ಹಾಗೆಯೇ BEML ಬಡಾವಣೆ, 3ನೇ ಹಂತದ ಜವಾಹರಲಾಲ್ ನೆಹರು ಮುಖ್ಯರಸೆಯಿಂದ Ideal Homes ಬಡಾವಣೆಯ 12ನೇ E ಅಡ್ಡರಸ್ತೆಗೆ ಹಾಲಿ ಇರುವಂತೆ 60 ಅಡಿ ಅಗಲದ Deck ನಿರ್ಮಿಸಿದಲ್ಲಿ ಜವಾಹರಲಾಲ್ ನೆಹರು ರಸ್ತೆಯಿಂದ Ideal Homes ಬಡಾವಣೆಯ 12ನೇ ಇ ಅಡ್ಡರಸ್ತೆಗೆ ಬಸ್‌ಗಳು ಹಾಗೂ ಇತರೆ ದೊಡ್ಡ ವಾಹನಗಳು ಸುಗಮವಾಗಿ ಚಲಿಸಲು ಅವಕಾಶವಾಗುತ್ತದೆಂದು, ಮೊದಲು ಅಗತ್ಯವಿರುವ ನಿವೇಶನವನ್ನು ಭೂಸ್ವಾಧೀನ ಪಡೆದು ನಂತರ ಕಾಮಗಾರಿ ಪ್ರಾರಂಭಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟಿರುತ್ತಾರೆ. ಇದನ್ನು ಒಪ್ಪಲಾಗಿದೆ. ಭೂಸ್ವಾಧೀನ ಪ್ರಸ್ತಾಪಿತ ಸ್ವತ್ತುಗಳಿಗೆ ಸಂಬಂಧಿಸಿದಂತೆ ಮೂಲ ಹಕ್ಕು ದಾಖಲೆಗಳು/ಖಾತಾ ಇತ್ಯಾದಿಗಳನ್ನು ಸಲ್ಲಿಸಿರುವುದಿಲ್ಲ. ಇವುಗಳನ್ನು ಭೂಸ್ವಾಧೀನ ಕಾಯ್ದೆಯ ಕಲಂ 5 (ಎ) ವಿಚಾರಣೆ ಹಾಗೂ ಜಂಟಿ ಅಳತೆ ಸಮಯದಲ್ಲಿ ಪರಿಶೀಲಿಸಬೇಕಾಗಿರುತ್ತದೆ. ಅಪರ ಅಯುಕ್ತರು, ಆರ್. ಆರ್. ನಗರ ವಲಯ, ಕಾರ್ಯಪಾಲಕ ಅಭಿಯಂತರರು (ಯೋಜನೆ), ಮುಖ್ಯ ಅಭಿಯಂತರರು, ರಾಜರಾಜೇಶ್ವರಿನಗರ ವಲಯ ರವರು ಸಲ್ಲಿಸಿರುವ ಪ್ರಸ್ತಾವನೆ, ಭೂಮಾಪಕರು ಸಲ್ಲಿಸಿರುವ ನಕ್ಷೆಯಲ್ಲಿ ನಮೂದಿಸಿರುವ ವಿವರಗಳು ಹಾಗೂ ಬೆಂಗಳೂರು

ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆಗೊಂಡಿರುವ ಬಡಾವಣೆ ನಕ್ಷೆಯಂತೆ ಪ್ರಸ್ತಾಪಿತ ಕಾಮಗಾರಿಗಾಗಿ ಅವಶ್ಯವಿರುವ ಸ್ವತ್ತುಗಳ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಗ್ರಾಮದ ಹೆಸರು | ವಾರ್ಡ್ ನಂ. | ಸೈಟ್ ನಂ. | ಖಾತಾ ನಂ. | ಮಾಲೀಕರ/ ಅನುಭವದಾರರ ಹೆಸರು | ಭೂಸ್ವಾಧೀನಕ್ಕೆ ಒಳಪಡುವ ಅಂದಾಜು ವಿಸ್ತೀರ್ಣ (ಚ.ಅ) | ಷರಾ |
|---|---|---|---|---|---|---|---|
| 1 | ಹಲೆಗೆವಡೇರಹಳ್ಳಿ | 160 | ಇಲ್ಲ | ಇಲ್ಲ | ಸರ್ಕಾರಿ ಜಮೀನು | 650.00 | ಖಾಲಿ ನಿವೇಶನ |
| 2 | ಹಲಗೆವಡೇರಹಳ್ಳಿ | 160 | 355 | ಇಲ್ಲ | ಹೆಚ್.ಬಿ.ಮಾಧವರಾವ್ (BEML ಸೋಸೈಟಿ ನಿವೇಶನದ ಕ್ರಯದಾರರು) | 414.00 | ಖಾಲಿ ನಿವೇಶನ |
| | | | | | ಒಟ್ಟು | **1064.00** | |

ಮೇಲ್ಕಂಡ ಪಟ್ಟಿಯಂತೆ ಭೂಸ್ವಾಧೀನಪಡಿಸಿಕೊಳ್ಳಲು ಪ್ರಸ್ತಾಪಿಸಿರುವ ಸ್ವತ್ತುಗಳು ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿನ ಅಭಿವೃದ್ಧಿ ಹೊಂದಿರುವ ವಸತಿ ಪ್ರದೇಶದಲ್ಲಿದ್ದು, ಸರ್ಕಾರವು ಪ್ರಕಟಿಸಿರುವ ಅಧಿಸೂಚನೆ ಸಂಖ್ಯೆ: CVC-19/2010-11, ಬೆಂಗಳೂರು, ದಿನಾಂಕ: 21-09-2011 ರಂತೆ ಈ ಪ್ರದೇಶದಲ್ಲಿನ ವಸತಿ ನಿವೇಶನಗಳ ದರವು ಪ್ರತಿ ಚ. ಅಡಿ 1 ಕ್ಕೆ ರೂ. 3700/- ಗಳಾಗಿರುತ್ತದೆ. ಈ ದರದಂತೆ ಭೂಸ್ವಾಧೀನಪಡಿಸಿಕೊಳ್ಳಲು ಪ್ರಸ್ತಾಪಿಸಿರುವ ವಿಸ್ತೀರ್ಣಕ್ಕೆ ಪಾವತಿಸಬೇಕಾದ ಅಂದಾಜು ಭೂಪರಿಹಾರವನ್ನು ಈ ಕೆಳಕಂಡಂತೆ ಲೆಕ್ಕಾಚಾರ ಮಾಡಲಾಗಿದೆ.

**"ಅ"- ಭೂ ಪರಿಹಾರ ವೆಚ್ಚ**

| ಕ್ರ ಸಂ. | ವಿವರಣೆ | ಮೊಬಲಗೂ ರೂ. ಗಳಲ್ಲಿ |
|---|---|---|
| 1 | ದಿನಾಂಕ: 21-09-2011ರ ಸರ್ಕಾರದ ಮಾರ್ಗಸೂಚಿ ದರದಂತೆ, ಚ.ಅಡಿ ಒಂದಕ್ಕೆ ರೂ. 3700/- ರಂತೆ 1064 ಚ.ಅಡಿಗಳಿಗೆ | 39,36,800/- |
| 2 | ಈ ಮೊಬಲಗಿಗೆ 1894ರ ಭೂಸ್ವಾಧೀನ ಕಾಯ್ದೆಯ ಕಲಂ 23 (2)ರ ಅನ್ವಯ ಶೇಕಡಾ 30ರಂತೆ ಶಾಸನ ಬದ್ಧ ಭತ್ಯೆ | 11,81,040/- |
| 3 | 1894ರ ಭೂಸ್ವಾಧೀನ ಕಾಯ್ದೆಯ ಕಲಂ 23 (1) (ಎ) ರ ಅನ್ವಯ ಮಾರುಕಟ್ಟೆ ಬೆಲೆ ಮೇಲೆ ಶೇಕಡಾ 12 ರಂತೆ ಹೆಚ್ಚುವರಿ ಮಾರುಕಟ್ಟೆ ಬೆಲೆ (ಒಂದು ವರ್ಷಕ್ಕೆ) | 4,72,416/- |
| | ಒಟ್ಟು (1+2+3) | **55,90,256/-** |

**"ಆ"-ಇತರೆ ವೆಚ್ಚ**

| | | |
|---|---|---|
| 4 | ಸಿಬ್ಬಂದಿ ವೆಚ್ಚ ಶೇಕಡಾ 10 ರಷ್ಟು | - |
| 5 | ಆಡಿಟ್ ವೆಚ್ಚ ಶೇಕಡಾ 1 ರಷ್ಟು | - |
| 6 | ಪ್ರಕಟಣಾ ವೆಚ್ಚ (ಅಂದಾಜು) | 1,00,000/- |
| | ಒಟ್ಟು (1+2+3+6) | **56,90,256/-** |

ಷರಾ: ದಿನಾಂಕ: 5-9-1963ರ ಸರ್ಕಾರದ ಅಧಿಸೂಚನೆ ಸಂಖ್ಯೆ: FD 126 RFC 60, ರಂತೆ ಯಾವುದೇ ಸ್ಥಳೀಯ ಸಂಸ್ಥೆಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಭೂಸ್ವಾಧೀನಾಧಿಕಾರಿಯ ನೇಮಕವಾಗಿದ್ದು, ಸದರಿ ಕಛೇರಿಯ ಸಿಬ್ಬಂದಿ ವೆಚ್ಚವನ್ನು ಆ ಸ್ಥಳೀಯ ಸಂಸ್ಥೆಯೇ ಭರಿಸುತ್ತಿದ್ದಲ್ಲಿ, ಮೇಲಿನ ಕ್ರಮ ಸಂಖ್ಯೆ 4 ಮತ್ತು 5 ರಲ್ಲಿನ ವೆಚ್ಚಗಳನ್ನು ವಿಧಿಸುವ ಅವಶ್ಯಕತೆ ಇಲ್ಲವೆಂಬ ಆದೇಶವಿರುವುದರಿಂದ, ಈ ಎರಡೂ ವೆಚ್ಚಗಳನ್ನು ಒಟ್ಟು ಭೂಸ್ವಾಧೀನ ಪರಿಹಾರ ಲೆಕ್ಕಾಚಾರದಿಂದ ಕೈಬಿಡಲಾಗಿದೆ.

**(ಅ+ಆ) ಒಟ್ಟು**

**(ಐವತ್ತಾರು ಲಕ್ಷದ ತೊಂಭತ್ತು ಸಾವಿರದ ಇನ್ನೂರ ಐವತ್ತಾರು ರೂಗಳು ಮಾತ್ರ)**

ಮೇಲೆ ನಮೂದಿಸಿರುವ ಸ್ವತ್ತುಗಳನ್ನು ಭೂಸ್ವಾಧೀನ ಕಾಯ್ದೆ 1894 ರನ್ವಯ ಭೂಸ್ವಾಧೀನಪಡಿಸಿಕೊಳ್ಳಲು ಹಾಗೂ ಇದಕ್ಕೆ ತಗಲುವ ಭೂ ಪರಿಹಾರ ಮತ್ತು ಇತರೆ ವೆಚ್ಚಗಳು ಸೇರಿ ಒಟ್ಟು ರೂ. 56,90,256/- (ರೂ. ಐವತ್ತಾರು ಲಕ್ಷದ ತೊಂಭತ್ತು ಸಾವಿರದ ಇನ್ನೂರ ಐವತ್ತಾರು ಮಾತ್ರ) ಗಳನ್ನು ಪಾಲಿಕೆಯ 2011-12ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನದಿಂದ ಭರಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-11-2011ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:20-12-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಯನ್ನು ನಿರೀಕ್ಷಿಸಿ, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಯನ್ನು ನಿರೀಕ್ಷಿಸಿ, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

## ದಿನಾಂಕ: 27-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

**ವಿಷಯದ ಸಂಖ್ಯೆ : 280 /2011-12**

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ರಾಜಾಜಿನಗರ 1ನೇ ಬ್ಲಾಕ್‌ನಲ್ಲಿ ಹಲವು ವಿದ್ಯಾಸಂಸ್ಥೆಗಳಿದ್ದು, ಇಲ್ಲಿ ಸರ್.ಎಂ. ವಿಶ್ವೇಶ್ವರಯ್ಯ ರವರ ಪ್ರತಿಮೆಯನ್ನು ಸ್ಥಾಪಿಸುವ ಅಗತ್ಯವಿದೆ. ಇದಕ್ಕಾಗಿ ರಾಜಾಜಿನಗರ 1ನೇ ಬ್ಲಾಕಿನ ಇಂಡಿಯನ್ ಬ್ಯಾಂಕ್ ಮತ್ತು ವಿದ್ಯಾವರ್ಧಕ ಸಂಘ ಶಾಲೆಯ ಮಧ್ಯೆ ಪಾಂಚಜನ್ಯ ವಿದ್ಯಾ ಸಂಸ್ಥೆಯ ಜಂಕ್ಷನ್‌ನಲ್ಲಿ ಸ್ಥಳವು ಸೂಕ್ತವಾಗಿದ್ದು, ಈ ಸ್ಥಳದಲ್ಲಿ ಸರ್.ಎಂ. ವಿಶ್ವೇಶ್ವರಯ್ಯ ರವರ ಪ್ರತಿಮೆಯನ್ನು ಸ್ಥಾಪಿಸಲು ಅಗತ್ಯ ಕ್ರಮವಹಿಸುವಂತೆ ಆಯುಕ್ತರವರನ್ನು ಕೋರಿದರು.

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ರಾಜಾಜಿನಗರ 1ನೇ ಬ್ಲಾಕ್‌ನಲ್ಲಿ ಹಲವು ವಿದ್ಯಾಸಂಸ್ಥೆಗಳಿದ್ದು, ಇಲ್ಲಿ ಸರ್.ಎಂ. ವಿಶ್ವೇಶ್ವರಯ್ಯ ರವರ ಪ್ರತಿಮೆಯನ್ನು ಸ್ಥಾಪಿಸುವ ಅಗತ್ಯವಿದೆ. ಇದಕ್ಕಾಗಿ ರಾಜಾಜಿನಗರ 1ನೇ ಬ್ಲಾಕಿನ ಇಂಡಿಯನ್ ಬ್ಯಾಂಕ್ ಮತ್ತು ವಿದ್ಯಾವರ್ಧಕ ಸಂಘ ಶಾಲೆಯ ಮಧ್ಯೆ ಪಾಂಚಜನ್ಯ ವಿದ್ಯಾ ಸಂಸ್ಥೆಯ ಜಂಕ್ಷನ್‌ನಲ್ಲಿ ಸ್ಥಳವು ಸೂಕ್ತವಾಗಿದ್ದು, ಈ ಸ್ಥಳದಲ್ಲಿ ಸರ್.ಎಂ. ವಿಶ್ವೇಶ್ವರಯ್ಯ ರವರ ಪ್ರತಿಮೆಯನ್ನು ಸ್ಥಾಪಿಸಲು ಅಗತ್ಯ ಕ್ರಮವಹಿಸುವಂತೆ ಆಯುಕ್ತರವರನ್ನು ಕೋರುವುದೆಂದು ಸಭೆಯು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ: 26-12-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಮಂಡಿಸಲಾದ ಸಂತಾಪ ಸೂಚಕ ನಿರ್ಣಯ

## ವಿಷಯದ ಸಂಖ್ಯೆ : 281 /2011-12

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಮಾಜಿ ಮುಖ್ಯ ಮಂತ್ರಿಗಳಾದ ಸನ್ಮಾನ್ಯ ಶ್ರೀ. ಬಂಗಾರಪ್ಪನವರು ಭಾನುವಾರ ಮಧ್ಯ ರಾತ್ರಿ ಬೆಂಗಳೂರು ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರೆಂದು ಈ ಸಭೆಗೆ ತಿಳಿಸಲು ದು:ಖವಾಗುತ್ತದೆ. ಶ್ರೀಯುತರು ಲೋಕಸಭಾ ಸದಸ್ಯರಾಗಿ, ಗೃಹ ಸಚಿವರಾಗಿ, ಕೃಷಿ ಸಚಿವರಾಗಿ, ಕಂದಾಯ ಸಚಿವರಾಗಿ, ತೋಟಗಾರಿಕೆ ಸಚಿವರಾಗಿ ಹಾಗೂ ಕೆ.ಪಿ.ಸಿ.ಸಿ. ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು, 1980ರ ರಾಜ್ಯದ 12ನೇ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ಸಾರ್ವಜನಿಕ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಯನ್ನು ಇಂದು ನಾವು ಸ್ಮರಿಸಬೇಕಾಗಿದೆ. ಮೃತರ ಅಗಲಿಕೆಯಿಂದ ಕುಟುಂಬ ವರ್ಗದವರಿಗೆ ಉಂಟಾಗಿರುವ ದು:ಖವನ್ನು ಭರಿಸುವ ಶಕ್ತಿ ದೊರೆಯಲೆಂದು ಹಾಗೂ ಮೃತರ ಆತ್ಮಕ್ಕೆ ಚಿರಶಾಂತಿ ಲಭಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಮಾಜಿ ಮುಖ್ಯ ಮಂತ್ರಿಗಳಾದ ಸನ್ಮಾನ್ಯ ಶ್ರೀ. ಬಂಗಾರಪ್ಪನವರು ಭಾನುವಾರ ಮಧ್ಯ ರಾತ್ರಿ ಬೆಂಗಳೂರು ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರೆಂದು ಈ ಸಭೆಗೆ ತಿಳಿಸಲು ದು:ಖವಾಗುತ್ತದೆ. ಶ್ರೀಯುತರು ಲೋಕಸಭಾ ಸದಸ್ಯರಾಗಿ, ಗೃಹ ಸಚಿವರಾಗಿ, ಕೃಷಿ ಸಚಿವರಾಗಿ, ಕಂದಾಯ ಸಚಿವರಾಗಿ, ತೋಟಗಾರಿಕೆ ಸಚಿವರಾಗಿ ಹಾಗೂ ಕೆ.ಪಿ.ಸಿ.ಸಿ. ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು, 1980ರ ರಾಜ್ಯದ 12ನೇ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ಸಾರ್ವಜನಿಕ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಯನ್ನು ಇಂದು ನಾವು ಸ್ಮರಿಸಬೇಕಾಗಿದೆ. ಮೃತರ ಅಗಲಿಕೆಯಿಂದ ಕುಟುಂಬ ವರ್ಗದವರಿಗೆ ಉಂಟಾಗಿರುವ ದು:ಖವನ್ನು ಭರಿಸುವ ಶಕ್ತಿ ದೊರೆಯಲೆಂದು ಹಾಗೂ ಮೃತರ ಆತ್ಮಕ್ಕೆ ಚಿರಶಾಂತಿ ಲಭಿಸಲೆಂದು ಭಗವಂತನಲ್ಲಿ ಈ ಸಭೆಯು ಪ್ರಾರ್ಥಿಸುತ್ತದೆ".

(ಶಾರದಮ್ಮ)
ಮಹಾಪೌರರು